ಸಮಕಾಲೀನ ಬದುಕಿನ ಸಂವಾದಕ್ಕಾಗಿ

ಶೂದ್ರ

ಬ್ರೆಕ್ಟ್ ಮತ್ತು ಕುವೆಂಪು...	ಪ್ರೊ. ವಿ. ಚಂದ್ರಶೇಖರ ನಂಗಲಿ
ಸೌಂದರ್ಯ ಹಾಗು ವಿಕಾರ	ಜಿ. ರಾಜಶೇಖರ್
ಕೇರಳ ಭೇಟಿ...	ಕೆ.ಪಿ.ಮೃತ್ಯುಂಜಯ
ಉತ್ತರ ದಕ್ಷಿಣ ...	ಪ್ರೊ. ಬಿ.ವೈ. ಲಲಿತಾಂಬ
ಲಂಡನ್ನಿನ ಈಸ್ಟ್ ಎಂಡ್ ಆಸ್ಪತ್ರೆಯಲ್ಲಿ	ಡಾ॥ ಬಿ.ಜಿ. ಬೆನಕಪ್ಪ
ಇಟಾಲೋ ಕಾಲ್ವಿನೊ	ಸುಮಾ ಎಂಬಾರ್
ಕನಸಿಗೊಂದು ಕಣ್ಣು	ಶೂದ್ರ ಶ್ರೀನಿವಾಸ್
ಬೆಂಗಳೂರು ದಿನಚರಿಯಿಂದ	ಶೂದ್ರ ಶ್ರೀನಿವಾಸ್

ನಮ್ಮ ನಡುವಿನ ಹೋರಾಟಗಾರರು

ಒಂದು ಮನವಿ

ಪ್ರಿಯರೆ, ಸ್ವಾತಂತ್ರೋತ್ತರ ಭಾರತದಲ್ಲಿ ನಾನಾ ರೀತಿಯ ಉದ್ಯಮಗಳು ಹುಟ್ಟಿಕೊಂಡವು. ಲಕ್ಷಾಂತರ ಮಂದಿಗೆ ಕೆಲಸ ಸಿಕ್ಕಿತು. ಅವರು ಕಾರ್ಮಿಕರು ಎಂದು ಕರೆಸಿಕೊಂಡರು. ಅದೇ ರೀತಿಯಲ್ಲಿ ಖಾಸಗಿ ವಲಯದಲ್ಲಿಯೂ ಸಹ ಉದ್ಯಮಗಳು ತಲೆಯೆತ್ತಿ ನಿಂತುವು. ಇಲ್ಲಿ ದುಡಿಯುವವರ ಹಿತರಕ್ಷಣೆಗಾಗಿ ಕಾರ್ಮಿಕ ಸಂಘಗಳು ಅಸ್ತಿತ್ವಕ್ಕೆ ಬಂದುವು. ರೈತರ ನಡುವೆ ದುಡಿಯುವ ರೈತಸಂಘಗಳು ಸಂಘಟನೆಗೊಂಡುವು. ಹೀಗೆ ಇತರೆ ಕ್ಷೇತ್ರಗಳಲ್ಲಿಯೂ ಸಮಸ್ಯೆಗಳನ್ನು ಕುರಿತು ಧ್ವನಿಯೆತ್ತುವ ಮನಸ್ಸುಗಳು ಒಂದೆಡೆ ಸೇರಿ ಹೋರಾಡಲು ಚಿಂತಿಸಿದವು. ಈ ಸಂಘಟನೆಗಳೆಲ್ಲ ಆಳುವ ಸರ್ಕಾರಗಳನ್ನು ಸಾಕಷ್ಟು ಕ್ರಿಯಾಶೀಲಗೊಳಿಸುತ್ತ ಬಂದಿವೆ. ಇಲ್ಲಿ ಪ್ರಾಮಾಣಿಕವಾಗಿ ನಾಡು ಮತ್ತು ನುಡಿಯ ಬಗ್ಗೆ ಮಾತಾಡಿದ ಜಾತಿ ವ್ಯವಸ್ಥೆಯ ಏರುಪೇರುಗಳನ್ನು ಕುರಿತು ಅವಲೋಕಿಸಿ ಹೋರಾಡಿದ ಮಹನೀಯರಿರಬಹುದು, ಮಹಿಳೆಯರ ಪರವಾಗಿ ಹೋರಾಡಿದವರಿರಬಹುದು.

ಇಂಥವರೆಲ್ಲ ತಮ್ಮ ವೈಯಕ್ತಿಕ ಬದುಕನ್ನು ಬದಿಗೊತ್ತಿ ಹೋರಾಡಿದವರು. ಈ ಎಲ್ಲ ಮಹನೀಯರಲ್ಲಿ ಸುಮಾರು ಇಪ್ಪತ್ತೈದು ಮಂದಿಯನ್ನು ಗುರ್ತಿಸಿ ಅವರ ಜೀವನ ಪರಿಚಯವನ್ನು ಸಣ್ಣ ಪ್ರಮಾಣದಲ್ಲಿಯಾದರೂ ದಾಖಲಿಸಬೇಕೆಂಬುದು ನಮ್ಮ ಆಶಯ. ಈ ಕೃತಿಯನ್ನು ನಮಗೆ ಈಗಾಗಲೇ ಹೋರಾಟದಲ್ಲಿ ಪರಿಚಯವಿರುವ ಪಿ.ಜಗನ್ನಾಥ್, (ತಲಘಟ್ಟಪುರ, ಕನಕಪುರ ರಸ್ತೆ, ಬೆಂಗಳೂರು ಜಿಲ್ಲೆ)ರವರನ್ನು ದೃಷ್ಟಿಯಲ್ಲಿಟ್ಟುಕೊಂಡು ತರುತ್ತಿದ್ದೇವೆ. ಜಗನ್ನಾಥ್‌ರವರ ಹೋರಾಟ ಮತ್ತು ಸಾಮಾಜಿಕ ಸೇವೆ ಅಪ್ರತಿಮವಾದದ್ದು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕರಾಗಿ, ಕರ್ನಾಟಕದ ಉದ್ದಗಲಕ್ಕೂ ತಮ್ಮ ಹೋರಾಟದ ವಲಯವನ್ನು ವಿಸ್ತರಿಸಿದವರು. ಪಕ್ಷಭೇದ ಮರೆತು ಎಲ್ಲ ಹೋರಾಟದ ಸಂಘಟನೆಗಳ ಸಂಚಾಲಕರಾಗಿ ಕೆಲಸ ಮಾಡಿದವರು. ಇವರ ಬಗ್ಗೆ ದೀರ್ಘವಾದ ಜೀವನ ಚಿತ್ರಣವಿರುತ್ತದೆ. ಇದನ್ನು ಜಗನ್ನಾಥ್‌ರವರಿಗೆ ಅರ್ಪಿಸುತ್ತಿದ್ದೇವೆ.

ಈ ಕೃತಿಯನ್ನು ಮಾರ್ಚ್ 23, 2008 ರಂದು ಬಿಡುಗಡೆ ಮಾಡಲಾಗುವುದು. ಅದೇ ದಿನ ನಮ್ಮ ನಡುವಿನ 'ಸಾಮಾಜಿಕ ಚಳುವಳಿಗಳು' (ಕಾರ್ಮಿಕ ಚಳುವಳಿಯು ಸೇರಿ)ಕುರಿತು ವಿಚಾರ ಸಂಕಿರಣವಿರುತ್ತದೆ. ಸಂಜೆ ಜಗನ್ನಾಥ್‌ರವರಿಗೆ ಅಭಿನಂದನಾ ಕಾರ್ಯಕ್ರಮವಿರುತ್ತದೆ. ದಯವಿಟ್ಟು ಕರ್ನಾಟಕದ ಯಾವುದೇ ಮೂಲೆಯಲ್ಲಿ ಗಂಭೀರವಾಗಿ ಕೆಲಸ ಮಾಡಿದವರ ಬಗ್ಗೆ ಪುಟ್ಟ ಮಾಹಿತಿಯನ್ನು ಕಳಿಸಿಕೊಡಬೇಕಾಗಿ ವಿನಂತಿ. ಈಗಾಗಲೇ ನಾವು ಗುರ್ತಿಸಿರುವ 25 ಮಂದಿ ಜೊತೆಗೆ ನೀವು ಕಳಿಸಿಕೊಡುವ ಮಾಹಿತಿಯನ್ನು ಆದರಿಸಿ; ಅವರನ್ನು ಕೃತಿಯೊಳಗೆ ಸೇರಿಸಿಕೊಳ್ಳಬಹುದು.

ನಿಮ್ಮ

ಶೂದ್ರ ಶ್ರೀನಿವಾಸ್, ಮುನಿಸಂಜೀವಪ್ಪ, ಶಾಮಣ್ಣರೆಡ್ಡಿ (ವಂಗಸಂದ್ರ)

ಸಂಚಾಲಕರು

ಸಂಪಾದಕ :
ಶೂದ್ರ ಶ್ರೀನಿವಾಸ್

ಸಹಾಯಕ ಸಂಪಾದಕರು :
ಕೆ.ಎನ್. ಅರುಣ
ಎಸ್. ಪ್ರೀತಿ
ಕ್ರಿಯಾ-ಸ್ನೇಹ
ತಿಮ್ಮಯ್ಯ ಪೂರ್ಲೆ
ಹುಳಿಮಾವು ಲೋಕೇಶ್
ಪಾನ್ಯಂ ನಟರಾಜ್
ಸಿ.ಜೆ. ಮಾಲಿನಿ
ಬಿ.ವೈ. ಲಲಿತಾಂಬ
ಆರ್. ಬಾಬು, ಬಾಣಸವಾಡಿ

ಮುಖಪುಟದ ಚಿತ್ರದ ಕೃಪೆ:
ಆರ್ಚ್ ಆಫ್ ಆಲ್ಫನ್ಸೊ
ಕಲಾವಿದ : ಫ್ರಾನ್ಸಿಸ್ಕೊ ಲೌರಾನ
1453 ಸಿ.

ಹಿಂಬದಿಯ ಚಿತ್ರದ ಕೃಪೆ :
ಹೆಣ್ಣಿನ ಚಿತ್ರ
ಕಲಾವಿದರು :
ಡೊಮಿನಿಕೊ ಗಿರ್ಲಾಂಡ್ಯೊ
1488 ಸಿ.

ಕೃಪೆ : ವಿಷುಯಲ್ ಆರ್ಟ್ಸ್ ಕೃತಿ

ಸಮಕಾಲೀನ ಬದುಕಿನ ಸಂವಾದಕ್ಕೆ
'ಶೂದ್ರ'

The Last Pain

Man, as the prying housemaid of the soul,
May know her happiness by eye to hole:
He's safe; the key is lost; he knows
Door will not open, nor hole close.

- William Empson

ಸಂಪುಟ – 34
ಸೆಪ್ಟೆಂಬರ್ – ಡಿಸೆಂಬರ್ 2007

ಶೂದ್ರ ಶ್ರೀನಿವಾಸ್
'ಕಾವಿಮನೆ', ಅಣ್ಣಯ್ಯರೆಡ್ಡಿ ಬಡಾವಣೆ
ಜೆ.ಪಿ.ನಗರ 7ನೇ ಹಂತ
ಬೆಂಗಳೂರು – 560 078.
ದೂರವಾಣಿ : 22451762
ಇ-ಮೇಲ್ : shudrasrinivas@yahoo.co.in

ಅಕ್ಷರ ಜೋಡಣೆ :
ಶ್ರೀ ಸ್ವರ ಗ್ರಾಫಿಕ್ಸ್
ಬನ್ನೇರುಘಟ್ಟ ರಸ್ತೆ, ಬೆಂಗಳೂರು – 76.
ದೂರವಾಣಿ : 41215662

ಮುದ್ರಕರು :
ಜಿ.ಕೆ. ಆಫ್‌ಸೆಟ್ ಪ್ರಿಂಟಿಂಗ್ ಪ್ರೆಸ್
ಆಡುಗೋಡಿ, ಬೆಂಗಳೂರು-560030.
ದೂರವಾಣಿ : 22239872

ಈ ಸಂಚಿಕೆಯಲ್ಲಿ

ಬ್ರೆಕ್ಟ್ ಮತ್ತು ಕುವೆಂಪು ಎಂಬ...	ಪ್ರೊ. ವಿ. ಚಂದ್ರಶೇಖರ ನಂಗಲಿ	4
ಸೌಂದರ್ಯ ಹಾಗು ವಿಕಾರ	ಜಿ. ರಾಜಶೇಖರ್	13
ಕೇರಳ ಭೇಟಿ...	ಕೆ.ಪಿ.ಮೃತ್ಯುಂಜಯ	21
ಎರಡು ಕವನಗಳು	ಡಾ॥ ಎಸ್.ವಿ. ಪ್ರಭಾವತಿ	36
ಉತ್ತರ ದಕ್ಷಿಣ ...	ಪ್ರೊ. ಬಿ.ವೈ. ಲಲಿತಾಂಬ	38
ಲಂಡನ್ನಿನ ಈಸ್ಟ್ ಎಂಡ್ ಆಸ್ಪತ್ರೆಯಲ್ಲಿ	ಡಾ॥ ಬಿ.ಜಿ. ಬೆನಕಪ್ಪ	46
ಇಟಾಲೋ ಕಾಲ್ವಿನೊ	ಸುಮಾ ಎಂಬಾರ್	49
ಆನಾ ಅಹ್ಮತೋವ	ಸುಜಾತ ಕುಮಟಾ	56
ಬಂಡೆಗಳು	ಡಾ॥ ಶಾಂತಲಕ್ಷ್ಮಿ	59
ಎರಡು ಕವನಗಳು	ಡಿ.ಬಿ. ರಜಿಯಾ	60
ನಮ್ಮೆಲ್ಲರಿಗೂ ಗೋವರ್ಧನ...	ಸಿ.ಜೆ. ಮಾಲಿನಿ	62
ಕನಸಿಗೊಂದು ಕಣ್ಣು	ಶೂದ್ರ ಶ್ರೀನಿವಾಸ್	65
ಬೆಂಗಳೂರು ದಿನಚರಿಯಿಂದ	ಶೂದ್ರ ಶ್ರೀನಿವಾಸ್	72
ಒಳನೋಟ		84

ಒಂದು ಪುಟ್ಟ ಮಾತು

ಕರ್ನಾಟಕದ ರಾಜಕೀಯ ಚಟುವಟಿಕೆಗಳು ಏನೇನೋ ಆಕಾರ ಪಡೆಯುತ್ತಿದೆ. ಕೆಲವು ರಾಜಕೀಯ ಮುಖಂಡರು ಬಫೂನ್‌ಗಳ ರೀತಿಯಲ್ಲಿ ನಡಕೊಳ್ಳುತ್ತಿದ್ದಾರೆ. ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯದ ಕೆಲವು ವ್ಯಕ್ತಿಗಳು ಹುಂಬತನದಿಂದ ರಂಗವೇರುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಕೆಲವು ಕಾವಿಧಾರಿಗಳು ತಮ್ಮ ಜಾತಿಯವರ ಪರವಾಗಿ ಬೀದಿ ರಂಪಕ್ಕೆ ಇಳಿಯುತ್ತಿದ್ದಾರೆ. ಇಂಥ ಹೊಣೆಗೇಡಿತನವನ್ನು ವಿರೋಧಿಸುವ ಶಕ್ತಿಗಳು ಸಾಕಷ್ಟು ಇದ್ದರೂ ಸಂಘಟನಾತ್ಮಕವಾಗಿ ಒಂದೆಡೆ ಸೇರುತ್ತಿಲ್ಲ. ರಾಜಕೀಯವಾಗಿ ವಿರೋಧ ಪಕ್ಷವೆಂಬುದು ಸತ್ತೇ ಹೋಗಿಬಿಟ್ಟಿದೆ. ರಾಷ್ಟ್ರ ಮಟ್ಟದಲ್ಲಿ ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿಯುವರು ನ್ಯಾಯಾಂಗಕ್ಕೆ ಮುಖಾಮುಖಿಯಾಗುತ್ತಿದ್ದಾರೆ. ಗಂಭೀರವಾದ ನಕಲಿ ಎನಕೌಂಟರ್‌ನಂಥ ಅಪರಾಧವನ್ನು ರಾಜಾರೋಷವಾಗಿ ಪ್ರತಿಪಾದಿಸಿಕೊಳ್ಳುತ್ತಿದ್ದಾರೆ. ಅದೇ ಸಮಯಕ್ಕೆ ಹಿಂದುತ್ವ ಕುರಿತು ಅಬ್ಬರಿಸುತ್ತಿದ್ದಾರೆ. ಮತ್ತೊಂದು ಕಡೆ ತಮ್ಮ ರಾಜ್ಯದ ಪಠ್ಯಪುಸ್ತಕಗಳಲ್ಲಿ ಹಿಟ್ಲರ್‌ನನ್ನು ಮಹಾನ್ ನಾಯಕ ಎಂದು ಮಕ್ಕಳ ಮನಸ್ಸಿನಲ್ಲಿ ಪ್ರತಿಬಿಂಬಿಸುವುದನ್ನು ಕುರಿತು ಯೋಚಿಸಿದಾಗ ಗಾಬರಿಯಾಗುತ್ತದೆ. ಈ ರೀತಿಯ ಹುನ್ನಾರಗಳಿಂದ ಒಂದಷ್ಟು ಹೆಚ್ಚಾಗಿ ಹಿಂದೂ ಮತಗಳನ್ನು ಪಡೆಯುವುದೇ ಮೂಲೋದ್ದೇಶವಾಗಿರುತ್ತದೆ ಪಡೆದು ಆರಿಸಿಯೂ ಬಂದಿದ್ದಾರೆ.

ಗುಜರಾತ್‌ನ ಪಠ್ಯಪುಸ್ತಕಗಳ ವಿಷಯದ ಸ್ವರೂಪ ಕುರಿತಂತೆ ಕೇಂದ್ರದ ಮಾನವ ಸಂಪನ್ಮೂಲ ಸಚಿವರಾದ ಅರ್ಜುನ್‌ಸಿಂಗ್‌ರವರು ಗಂಭೀರವಾಗಿಯೇ ಪ್ರತಿಕ್ರಿಯಿಸಿದ್ದಾರೆ. ಹೌದು, ಇದಕ್ಕೆ ಸಂಬಂಧಿಸಿದಂತೆ ಒಂದು ರಾಷ್ಟ್ರೀಯ ನೀತಿ ಇರಬೇಕು. ಸಾಹಿತ್ಯ, ಸಂಸ್ಕೃತಿ, ಇತಿಹಾಸ ಮತ್ತು ಭಾಷೆಯನ್ನು ಕುರಿತು ಚರ್ಚಿಸುವಾಗ ಮೂಲಭೂತವಾದಿಗಳು ಅದನ್ನು ಅಸ್ತ್ರವನ್ನಾಗಿ ಬಳಸಿಕೊಳ್ಳದಂತೆ ನೋಡಿಕೊಳ್ಳಬೇಕು ಅನ್ನಿಸುತ್ತದೆ. ಯಾಕೆಂದರೆ ಇದು ರಾಜ್ಯಗಳ ಹಾಗೂ ರಾಜಕೀಯ ಪಕ್ಷಗಳ ಧೋರಣೆಗಳ ಮೇಲೆ ಅವಲಂಬಿತವಾಗಬಾರದು. ಕೆಲವು ವರ್ಷಗಳ ಹಿಂದೆ ಪ್ರತಿಷ್ಠಿತ ಶಿಕ್ಷಕರ ತರಬೇತಿ ಶಿಕ್ಷಣ ಸಂಸ್ಥೆಯ ಪ್ರಾಧ್ಯಾಪಕರೊಬ್ಬರು ಮತ್ತೊಂದು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ಕಾರ್ಯಕ್ರಮದಲ್ಲಿ ಹಿಟ್ಲರ್‌ನನ್ನು ಕುರಿತು ನೇರವಾಗಿಯೇ ಗುಣಗಾನ ಮಾಡತೊಡಗಿದ್ದರು. ಮುಂದುವರೆದು ಹಿಟ್ಲರ್ ನಮ್ಮ ರಾಜಕೀಯ ಮತ್ತು ಸಾಮಾಜಿಕ ಬದುಕಿಗೆ ಮಾದರಿಯಾಗಬೇಕು ಎಂದು ವೀರಾವೇಷದಿಂದ ಹೇಳತೊಡಗಿದ್ದರು. ಮುಂದೆ ನೂರಾರು ಮಕ್ಕಳು ಕೂತಿದ್ದಾರೆ. ಅವರು ಇಂಥ ವಿಷಯಗಳನ್ನು ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕು? ಅಂದು ಆತನನ್ನು ವಿರೋಧಿಸಿದ್ದಕ್ಕೆ ಆತನಿಗೆ ಪ್ರೋತ್ಸಾಹದಾಯಕವಾಗಿಯೇ ಕೆಲವು ಉಪಾಧ್ಯಾಯರು ಬೆಂಬಲಕ್ಕೆ ನಿಂತರು.

ಕೆಲವು ವರ್ಷಗಳ ಹಿಂದೆ ಈ ರೀತಿಯ ಮನಸ್ಥಿತಿಯನ್ನು ಕುರಿತಂತೆ ಪ್ರಸಿದ್ಧ ನ್ಯಾಯವಾದಿ ಕೃಷ್ಣಯ್ಯರ್, ಸಾಮಾಜಿಕ ಚಿಂತಕ ಮುಂಬೈನ ಆಸ್ಗರ್ ಆಲಿ ಇಂಜಿನಿಯರ್, ಇತಿಹಾಸ ತಜ್ಞ ಕೆ.ಎಂ. ಫಣಿಕ್ಕರ್ ಜೊತೆ ಕುರಿತು ಚರ್ಚಿಸುವಾಗ ನಮ್ಮ ಮಧ್ಯಮ ವರ್ಗದ ಬಹುಪಾಲು ವಿದ್ಯಾವಂತರು ಮೂಲಭೂತವಾದಿಗಳು ಹಾಗೂ ಮತೀಯವಾದಿಗಳಾಗುತ್ತಿದ್ದಾರೆ. ಇದು ಅತ್ಯಂತ ಆತಂಕಕಾರಿ ವಿಷಯ ಎಂದು ಪ್ರತಿಕ್ರಿಯಿಸಿದ್ದರು. ಹಾಗೆಯೇ ಇದಕ್ಕೆ ಮುಖ್ಯ ಕಾರಣ : ನಮ್ಮ ನಡುವೆ ಆಗುತ್ತಿರುವ ಬಹುಮುಖ್ಯ ಚರ್ಚೆಗಳು; ಬಹುಪಾಲು ವಿದ್ಯಾವಂತರಿಗೆ ತಲುಪಲೇ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಆದ್ದರಿಂದಲೇ ನರೇಂದ್ರಮೋದಿ, ತೊಗಾಡಿ, ಬಿನ್ ಲಾಡೆನ್ ಮತ್ತು ಬುಷ್‌ರಂಥವರು ತೋಳೆತ್ತಿ ದೊಡ್ಡದನಿಯಲ್ಲಿ ಕೂಗಾಡುತ್ತಿರುವುದು.

– **ಶೂದ್ರ ಶ್ರೀನಿವಾಸ್**

ಬ್ರೆಕ್ಟ್ ಮತ್ತು ಕುವೆಂಪು ಎಂಬ ಎರಡು ಕೆಂಡಗಳು

– ವಿ. ಚಂದ್ರಶೇಖರ ನಂಗಲಿ

ಕೆಂಡವನ್ನು ಸೆರಗಿನಲ್ಲಿ ಗಂಟುಹಾಕಲು ಸಾಧ್ಯವೇನು? ಎಂಬ ಗಾದೆ ಮಾತು ಹೊರಡಿಸುವ 'ಧ್ವನ್ಯಾರ್ಥ ಬಹುರೂಪಿಯಾಗಿದೆ. ಸತ್ಯವು ಕೆಂಡವಿದ್ದಂತೆ! ಸತ್ಯವನ್ನು ಪಾಂಡಿತ್ಯದ ಸೆರಗಿನಲ್ಲಿ ಬಚ್ಚಿಡಲಾಗದು! ಜಾಡಿಗೆ ಬಿದ್ದ ಅಧ್ಯಯನ ಕ್ರಮದಲ್ಲಿ ಅನೇಕ ವಸ್ತು ವಿಷಯಗಳನ್ನು ಬಗೆ-ಬಗೆಯಾಗಿ ವಿಭಜಿಸಿ, ಎಳೆ-ಎಳೆಯಾಗಿ ಬಿಡಿಸಿ ತೋರಿಸುವ ಪಾಂಡಿತ್ಯ ಪ್ರಿಯರು ತಮ್ಮ ವಿದ್ವತ್ಪೂರ್ಣವಾದ ವಿಶ್ಲೇಷಣೆಗಳಿಂದ ಸತ್ಯವನ್ನೆ ಮುಚ್ಚಿ ಹಾಕುತ್ತಾರೆ. ಆದರೆ, ಕೆಂಡದಂಥ ಸತ್ಯವು ನಿದಾನವಾಗಿ ತನ್ನನ್ನು ಮುಚ್ಚಿಹಾಕಿದ ಪಾಂಡಿತ್ಯದ ಸೆರಗನ್ನು ದಹಿಸುತ್ತಾ ನಿಜರೂಪವನ್ನು ತೋರುತ್ತದೆ.

ನನ್ನ ದೃಷ್ಟಿಯಲ್ಲಿ ಜರ್ಮನಿಯ ಬ್ರೆಕ್ಟ್ ಮತ್ತು ಕನ್ನಡದ ಕುವೆಂಪು ಎರಡು ಕೆಂಡಗಳಿದ್ದಂತೆ! ಇವರನ್ನು ಕುರಿತು ಪ್ರಕಟಿತ ಚಿಂತನೆ ಮತ್ತು ವಿಶ್ಲೇಷಣೆಗಳು ಪಾಂಡಿತ್ಯದ ಸೆರಗಿನಲ್ಲಿ ಮುಚ್ಚಿ ಹೋಗಿದ್ದು ನಿಜರೂಪವು ಮರೆಯಾಗಿಬಿಟ್ಟಿದೆ. ಪ್ರಸ್ತುತ, ಬ್ರೆಕ್ಟ್ ಮತ್ತು ಕುವೆಂಪು-ಇವರಿಬ್ಬರ ನಾಟಕ ಸಂಬಂಧಿ ವಿಚಾರಗಳನ್ನು ಕೊಂಚ ಪರಿಶೀಲಿಸೋಣ. ಬ್ರೆಕ್ಟ್ ಜನಿಸಿದ್ದು 1898ರಲ್ಲಿ; ಕುವೆಂಪು ಜನಿಸಿದ್ದು 1904ರಲ್ಲಿ. ಇಬ್ಬರಿಗೂ ಆರು ವರ್ಷಗಳ ಅಂತರವಿದೆ. ಬ್ರೆಕ್ಟ್‌ನ ಮೊದಲ ನಾಟಕ 'ತ್ರೀಪೆನ್ನಿಅಪೆರ' 1928ರಲ್ಲಿ ರಂಗಕೃತಿಯಾಗಿ ಮೂಡಿಬಂದಿದ್ದರೆ, ಕುವೆಂಪು ಅವರ ಮೊದಲ ನಾಟಕ 'ಮೋಡಣ್ಣನ ತಮ್ಮ' 1926ರಲ್ಲಿ ಪಠ್ಯಕೃತಿಯಾಗಿ ಮೂಡಿಬಂದಿದೆ. ಇನ್ನು ಮುಂದೆ ಇವರಿಬ್ಬರ ನಾಟಕಗಳನ್ನು ಉದ್ದೇಶಪೂರ್ವಕವಾಗಿ ಇಸವಿಗಳ ಸಹಿತ ಉಲ್ಲೇಖಿಸಲಾಗಿದೆ.

ದಿ ಮದರ್	– 1930	ಜಲಗಾರ	– 1928
ದಿ ಲೈಫ್ ಆಫ್ ಗೆಲಿಲಿಯೊ	– 1938	ಸ್ಮಶಾನ ಕುರುಕ್ಷೇತ್ರಂ	– 1931
ಮದರ್ ಕರೇಜ್	– 1939	ಶೂದ್ರ ತಪಸ್ವಿ	– 1944
ದಿ ಗುಡ್ ವುಮೆನ್ ಆಫ್ ಸೆಜುಲ್	– 1940	ಬೆರಳ್‌ಗೆ ಕೊರಳ್	– 1947
ದಿ ಕಕೇಷಿಯನ್ ಚಾಕ್ ಸರ್ಕಲ್	– 1945	ಬಲಿದಾನ	– 1948

ಪ್ರೊ. ವಿ. ಚಂದ್ರಶೇಖರನಂಗಲಿ, 16, ಶ್ರೀ ಗೌರಿ, ಕನಕನಗರ, ಹೊಸಕೋಟೆ-562114 (ಬೆಂಗಳೂರು ಗ್ರಾಮಾಂತರ)

ಪ್ರೊ. ನಂಗಲಿಯವರು ಸಾಹಿತ್ಯದ ಗಂಭೀರ ವಿದ್ಯಾರ್ಥಿ. ಹಾಗೆಯೇ ಪರಿಸರ ಕುರಿತಂತೆ ಇವರ ಚಿಂತನೆ ಅನನ್ಯವಾದದ್ದು. ಈ ಲೇಖನ ಕೆಲವು ಒಳನೋಟಗಳಿಂದ ಕೂಡಿರುವ ಮಹತ್ವಪೂರ್ಣ ಲೇಖನವಾಗಿದೆ.

ಸಂ:

ಬ್ರೆಕ್ಟ್ ಮತ್ತು ಕುವೆಂಪು ಅವರನ್ನು ತೌಲನಿಕವಾಗಿ ವಿವೇಚಿಸುವಾಗ ನೆನಪಿನಲ್ಲಿಡಬೇಕಾದ ವಿಚಾರವೆಂದರೆ, ಬ್ರೆಕ್ಟ್ ತನ್ನ ನಾಟಕಗಳನ್ನು ರಚಿಸಿದ್ದು ಥಿಯೇಟರ್‌ಗಾಗಿಯೇ! ಕುವೆಂಪು ತಮ್ಮ ನಾಟಕಗಳನ್ನು ಬರೆದದ್ದು ಹೃದಯ ಸಂವಾದಕ್ಕಾಗಿಯೇ! ಬ್ರೆಕ್ಟ್‌ನ ರಚನೆಗಳು ಎಪಿಕ್ ಥಿಯೇಟರ್ ಎಂದು ಹೆಸರಾಗಿದ್ದರೆ, ಕುವೆಂಪು ಕೃತಿಗಳು ಸೈಕಿಕಲ್ ಥಿಯೇಟರ್ (ಮನೋ ರಂಗಭೂಮಿ) ಎಂದು ಹೆಸರಾಗಿದೆ. ಬ್ರೆಕ್ಟ್ ವಿರಚಿತ 'ಎಪಿಕ್ ನಾಟಕಗಳು' ಸಮಕಾಲೀನ ರಂಗಭೂಮಿಯ ಉಲ್ಲಂಘನೆಗಳಾಗಿರುವಂತೆಯೇ, ಕುವೆಂಪು ಅವರ ಮನೋರಂಗಭೂಮಿಯ ನಾಟಕಗಳು ಸಮಕಾಲೀನ ರಂಗಭೂಮಿಯ ಉಲ್ಲಂಘನೆಗಳಾಗಿವೆ.

ಕುವೆಂಪು ಅವರನ್ನು 'ರಂಗ ವಿರೋಧಿ' ನಾಟಕಕಾರರೆಂದು ಗುರುತಿಸುವುದು ಸರಿಯಲ್ಲ. ಕುವೆಂಪು ನಾಟಕಗಳನ್ನು META CREATIONS ಎಂದು ಕರೆಯಬೇಕಾಗಿದೆ. ಕುವೆಂಪು ಅವರು 'ಅಧಿಕ ರಂಗಭೂಮಿಯ' ಪ್ರತಿಪಾದಕರು. ವಚನಗಳಿಗಿಂತಲೂ ಅಧಿಕ ತರವಾದ ಅಲ್ಲಮನ ವಚನಗಳನ್ನು 'ಅಲ್ಲಮನ ಅಧಿಕ ವಚನಗಳು' ಎಂದು ಕರೆದಿರುವಂತೆಯೇ ಸಮಕಾಲೀನ ರಂಗಭೂಮಿಯ ಉಲ್ಲಂಘನೆಗಳೂ ಅಧಿಕತರವೂ ಆಗಿರುವ ಕುವೆಂಪು ನಾಟಕಗಳನ್ನು 'ಅಧಿಕ ರಂಗಭೂಮಿ'ಯೆಂದು ಕರೆಯಬೇಕಾಗಿದೆ.

ಕುವೆಂಪು ಅವರ ಸಮಕಾಲೀನ ರಂಗಭೂಮಿ ಮೂರು ದಾರಿಗಳಲ್ಲಿ ಹರಿದು ಹಂಚಿಹೋದ ಮೂರಾಬಟ್ಟೆಯಾಗಿತ್ತು.

1. ರಾಜ ಸೇವಾಸಕ್ತವಾಗಿದ್ದ 'ಆಸ್ಥಾನ ರಂಗಭೂಮಿ' (ಮಿತ್ರಾವಿಂದ ಗೋವಿಂದ ರೀತಿಯ ನಾಟಕಗಳು)
2. ಟಿಕೇಟುಗಳ ಆಡಳಿತಕ್ಕೊಳಪಟ್ಟ ಕಂಪೆನಿ ರಂಗಭೂಮಿ (ಭಕ್ತ ಪ್ರಹ್ಲಾದ, ಸದಾರಮೆ ರೀತಿಯ ನಾಟಕಗಳು)
3. ಪ್ರಯೋಗಾತ್ಮಕ ನೆಲೆಯ ಹವ್ಯಾಸಿ ರಂಗಭೂಮಿ (ಕೈಲಾಸಂ, ಶ್ರೀರಂಗ ವಿರಚಿತ ನಾಟಕಗಳು)

ಇಂಥ ವಿಭಜನೆಗಳ ಹಿಂದೆ ಪಟ್ಟಭದ್ರ ಹಿತಾಸಕ್ತಿಗಳು ಮತ್ತು ಮುಂಚೂಣಿ ವರ್ಗದ ಆಕಾಂಕ್ಷೆಗಳು ಎದ್ದು ಕಾಣುತ್ತವೆಯೇ ಹೊರತು ನಾಟಕವನ್ನು ಕುರಿತು ಹೇಳುವ ಸಾರ್ವವರ್ಣಿಕ ಕಲೆ ಅಥವಾ ನೇತ್ರಯಜ್ಞ–ಎಂಬ ಗುರಿಸಾಧನೆ ಕಂಡುಬರುವುದಿಲ್ಲ. ಗಾಳಿ–ಬೆಳಕು–ನೀರು–ಮಣ್ಣು ಇವೆಲ್ಲ ಹೇಗೆ ಎಲ್ಲರಿಗೂ ಲಭ್ಯವೋ ಹಾಗೆಯೇ ನಾಟಕವು ಕೂಡ ಸಾರ್ವವರ್ಣಿಕವಾಗಿಯೇ ಇರಬೇಕು. ನಾಟಕವು 'ಕಾಸುಳ್ಳವರ ಕಲೆ' ಆಗಬಾರದು! ಕಲೆಯೊಂದು ದುಬಾರಿಯಾಗುವುದೆಂದರೆ ಅದು ದುರಂತಕ್ಕೆ ಒಳಗಾದಂತೆಯೇ ಸರಿ! ಕನ್ನಡ ರಂಗಭೂಮಿಯ ಮೂರು ದಾರಿಗಳಲ್ಲಿ ನಾನು ಉದ್ದೇಶಪೂರ್ವಕವಾಗಿಯೇ ಜಾನಪದ ರಂಗಭೂಮಿಯನ್ನು ಪ್ರಸ್ತಾಪಿಸಿಲ್ಲ. ಕಾಸು ಕೊಟ್ಟು ನಾಟಕ ನೋಡುವುದು ಗೊತ್ತೇ ಇಲ್ಲದ ಜನಸಮುದಾಯಗಳು ತಮ್ಮ ಪಾಡಿಗೆ ತಾವು ಜಾನಪದ

ರಂಗಭೂಮಿಯೊಂದಿಗೆ ಬದುಕುತ್ತಿವೆ. ಉಳ್ಳವರು ಥಿಯೇಟರುಗಳ ಮಾಡುವರು, ನಾನೇನ ಮಾಡಲಿ ಬಡವನಯ್ಯ! ಎಂಬಂತೆ ಕನ್ನಡ ಜಾನಪದರು ಜೀವಂತ ರಂಗಭೂಮಿಯ ಜೊತೆ ಬಾಳುತ್ತಿದ್ದಾರೆ. ಓದಲು-ಬರೆಯಲು ಗೊತ್ತಿಲ್ಲದ ಜನಸಮುದಾಯಗಳು ನಡೆದಾಡುವ ನಾಟಕಗಳಂತೆಯೂ, ಉಸಿರಾಡುವ ರಂಗಭೂಮಿಗಳಂತೆಯೂ ಕಂಡುಬರುತ್ತಾರೆ.

ಈ ದೃಷ್ಟಿಯಿಂದ ವಿವೇಚಿಸಿದರೆ ನನಗೆ ಬಸವಣ್ಣ ಮತ್ತು ಕುವೆಂಪು ಸಮಾನವಾಗಿ ಕಾಣುತ್ತಾರೆ. ಬಸವಣ್ಣ BUILT IN THEATREನ ಪ್ರತಿಪಾದಕನಾಗಿರುವಂತೆಯೇ, ಕುವೆಂಪು ಅವರು BUILT IN THEATREನ ಪ್ರತಿಪಾದಕರಾಗಿದ್ದಾರೆ. ದೇವಾಲಯವನ್ನು ತನ್ನಿಂದ ಹೊರಗಲ್ಲದೆ ತನ್ನೊಳಗೆ ಕಾಣುವಂತೆಯೇ ರಂಗಭೂಮಿಯನ್ನು ತನ್ನಲ್ಲಿಯೇ ಮನಗಾಣುವ ದೃಷ್ಟಿಕೋನವು ಶಕ್ತಿಯುತವಾದದ್ದು. ಇದು ಜಾನಪದ ರಂಗಭೂಮಿಗೆ ಸಂವಾದಿಯಾದ ತಾಯಿ-ಮಗು ಸಂಬಂಧದ ಅಭಿವ್ಯಕ್ತಿಯಾಗಿದೆ. ಇದನ್ನು ಅರ್ಥಮಾಡಿಕೊಳ್ಳದೆ ಕುವೆಂಪು ಅವರನ್ನು ವ್ಯಾಖ್ಯಾನಿಸುತ್ತಾ ಜಾನಪದ/ದೇಶಿಯ ಪರಂಪರೆಯಿಂದ ಕುವೆಂಪು ಏನನ್ನೂ ಪಡೆದುಕೊಂಡಿಲ್ಲವೆಂದು ತೀರ್ಮಾನಿಸುವುದು ಕೆಂಡವನ್ನು ಪಾಂಡಿತ್ಯದ ಸೆರಗಿನಲ್ಲಿ ಮುಚ್ಚಿಟ್ಟ ರೀತಿಯನ್ನೇ ಹೋಲುತ್ತದೆ. ಜಾನಪದವನ್ನು ಭಾಷೆ-ವಸ್ತು-ವಿನ್ಯಾಸಗಳಲ್ಲಿ ಮಾತ್ರ ಗಮನಿಸುವವರು, ಪರಿಣಾಮದೊಳಗೆ ಚೆಲುವಾದ ಮನದ ಪರಿಣಾಮಕ್ಕೆ ಇನ್ನಾದರೂ ತೆರೆದುಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದಲೇ ನಾನು ಕುವೆಂಪು ನಾಟಕಗಳನ್ನು, 'ಅಧಿಕ ರಂಗಭೂಮಿ' ಎಂದು ಕರೆಯಲಿಚ್ಛಿಸುತ್ತೇನೆ. ಮನೋರಂಗಭೂಮಿ ಮತ್ತು ಕರತಲ ರಂಗಭೂಮಿ ಎಂಬ ಕುವೆಂಪು ಪರಿಭಾಷೆಗಳು ಜಾನಪದ ರಂಗಭೂಮಿಯ ಮನದ ಪರಿಣಾಮವನ್ನೇ ಲಕ್ಷ್ಯದಲ್ಲಿಟ್ಟುಕೊಂಡಿದೆ. ಆದ್ದರಿಂದಲೇ ಕುವೆಂಪು ರಂಗವಿರೋಧಿಯಲ್ಲ; ಕುವೆಂಪು ನಾಟಕಗಳು ತನ್ನೊಳಗೆ ಬಹುರೂಪಿ ರಂಗಸಾಧ್ಯತೆಗಳನ್ನು ಗರ್ಭೀಕರಿಸಿಕೊಂಡಿರುವುದರಿಂದಲೇ ಇಂದು ಬಗೆಬಗೆಯ ರಂಗಕೃತಿಗಳಾಗಿ ಪ್ರದರ್ಶಿತಗೊಳ್ಳುತ್ತಲೇ ಇದೆ.

ಶೂದ್ರ ತಪಸ್ವಿ ನಾಟಕದ ಮುನ್ನುಡಿಯಲ್ಲಿ ಕುವೆಂಪು ಹೇಳಿರುವ ತದ್ವಿರುದ್ಧ ನುಡಿಗಳನ್ನು ಮುಕ್ತ ಮನಸ್ಸಿನಿಂದ ಸ್ವೀಕರಿಸಬೇಕು. ಹೊರಗಡೆಯ ನಾಟಕ ಶಾಲೆ-ಅಲ್ಪವೇದಿಕೆ-ಟಿಕೇಟುಗಳ ಆಡಳಿತ-ದರಿದ್ರ ಪ್ರಯತ್ನ ಎಂದು ಮುಂತಾಗಿ ಟೀಕಿಸಿರುವ ಕುವೆಂಪು ಅವರೇ ತಮ್ಮ ಅಭಿಪ್ರಾಯವನ್ನು ಸುಳ್ಳು ಮಾಡುವ ಪ್ರತಿಭಾ ಪ್ರಭುಗಳ ಸಾಹಸವನ್ನು ಮೆಚ್ಚುಗೆಯಿಂದ ಸ್ಮರಿಸಿದ್ದಾರೆ;

'ಬೆರಳ್‌ಗೆ ಕೊರಳ್' ಅಂತಹ ನಾಟಕವನ್ನೂ ಅತ್ಯದ್ಭುತವಾಗಿ ರಂಗಭೂಮಿಯ ಮೇಲೆ, ಪ್ರೇಕ್ಷಕರು ರಸ ರೋಮಾಂಚಿತರಾಗುವಂತೆ ಪ್ರದರ್ಶಿಸಿ ಯಶಸ್ವಿಗಳಾಗಿರುವ ನಟ ಸಾಹಸಿಗಳಿಗೆ ಮುನ್ನುಡಿಕಾರನ ಈ ಉಕ್ತಿಯನ್ನೂ ಹುಸಿಗೊಳಿಸಲು ಸಾಧ್ಯವಾಗಬಹುದೇನೋ!

'ಶೂದ್ರ ತಪಸ್ವಿ' ಮುನ್ನುಡಿಯ ಅಡಿಟಿಪ್ಪಣಿಯಿಂದ 'ಶೂದ್ರ ತಪಸ್ವಿ' ನಾಟಕವನ್ನು

ಕುರಿತು ದೃಶ್ಯರೂಪಿಯಾದರೂ ಕಾವ್ಯಾತ್ಮಕವಾದುದು ಎಂಬ ಕುವೆಂಪು ನುಡಿಯನ್ನು ಒಳಹೊಕ್ಕು ಅರ್ಥಮಾಡಿಕೊಳ್ಳಬೇಕು. ಬ್ರೆಕ್ಟ್ ಹೇಳುವ ಎಪಿಕ್ ಥಿಯೇಟರ್ ಮತ್ತು ಕುವೆಂಪು ಹೇಳುತ್ತಿರುವ ಮನೋರಂಗಭೂಮಿಗಳ ಗುರಿ ಒಂದೇ ಎಂಬುದು ಸುಸ್ಪಷ್ಟವಾಗಿದೆ. ಬ್ರೆಕ್ಟ್ ಹೇಳುವ HISTORIFICATION, ALIENATION, EPIC FORMATION ಎಂಬ ತತ್ವಗಳು ಕುವೆಂಪು ನಾಟಕಗಳಿಗೂ ಅನ್ವಯವಾಗುತ್ತವೆ. ಇಪ್ಪತ್ತನೆ ಶತಮಾನದ ಇಪ್ಪತ್ತರ ದಶಕದಿಂದ ಹಿಡಿದು ನಲವತ್ತರ ದಶಕದವರೆಗೆ, ಹೆಚ್ಚು ಕಡಿಮೆ ಸಮಾನ ಕಾಲಮಾನದಲ್ಲಿ ನಾಟಕಗಳನ್ನು ರಚಿಸಿದ ಬ್ರೆಕ್ಟ್ ಮತ್ತು ಕುವೆಂಪು ನಿಗಿನಿಗಿಸುವ ಎರಡು ಕೆಂಡಗಳಂತೆ ಕಾಣುತ್ತಾರೆ. ಆದರೆ, ಇವರಿಬ್ಬರನ್ನು ಕುರಿತ ಪಾಂಡಿತ್ಯಪೂರ್ಣ ವಿಶ್ಲೇಷಣೆಗಳಲ್ಲಿ ಎರಡು ಧ್ರುವಗಳೆಂಬಂತೆ ಪರಿಗಣಿಸಲಾಗಿದೆ. ಬ್ರೆಕ್ಟ್‌ನ ಎಪಿಕ್ ಥಿಯೇಟರ್ ಪರಿಕಲ್ಪನೆಯು ಶಂಬು ತೀರ್ಥವಾಗಿದ್ದರೆ, ಕುವೆಂಪು ಅವರ ಮನೋರಂಗಭೂಮಿಯು ತುಂಗಾಜಲವಾಗಿದೆ ಅಷ್ಟೆ! ಪುರಾಣವನ್ನು ಆಶ್ರಯಿಸದೆ ಹೊಸ ಕಥೆಯನ್ನು ಬರೆಯಬೇಕೆಂಬ ಸಲಹೆಯಿತ್ತ ಮಾಸ್ತಿಯವರಿಗೆ ಕೊಟ್ಟಿರುವ ಮುನ್ನುಡಿಯಲ್ಲಿ ಕುವೆಂಪು ಮಾತುಗಳು ಹೀಗಿವೆ;

> "....ಹೊಸಕಾಲದ ಹೊಸಧರ್ಮವನ್ನು ಹೇಳಲು ಹೊಸ ಕಥೆಯನ್ನು ಕಟ್ಟಿದರೆ ಸಜೀವವಾದ ಜಾತಿ ವಿದ್ವೇಷದ ಉದ್ರೇಕ ಭೂತಗಳನ್ನು ಎಬ್ಬಿಸುತ್ತದೆ. ಆ ಸ್ಥಳದವರೂ ಈ ಮತದವರೂ ಆ ಜಾತಿಯವರೂ ಈ ಕೋಮಿನವರೂ ಕೋರ್ಟಿಗೆ ಹೋಗುತ್ತೇವೆ ಎನ್ನುತ್ತಾರೆ...."

ಆದ್ದರಿಂದಲೇ, ಕುವೆಂಪು ಛದ್ಮವೇಷ (ಮಾರುವೇಷ) ತೊಟ್ಟಂತೆ, ಅಥವಾ ಬ್ರೆಕ್ಟ್ ರೀತಿಯಲ್ಲೆ ಕಲ್ಪನೆ-ಪುರಾಣ-ಇತಿಹಾಸಗಳನ್ನು ಆಶ್ರಯಿಸಿ ನಾಟಕಗಳನ್ನು ರಚಿಸಿದ್ದಾರೆ. ಹೀಗೆ ರಚಿಸುವಾಗ ಕುವೆಂಪು ವಿಮರ್ಶಾತ್ಮಕವಾದ ಎಚ್ಚರವೊಂದನ್ನು ಪ್ರಜ್ಞಾಪೂರ್ವಕವಾಗಿ ಕಾಯ್ದುಕೊಂಡಿದ್ದಾರೆ.

ಮಹಾಕಾವ್ಯಗಳು ತೋರಿದ ಅನಾದರ ಮತ್ತು ಪ್ರಕ್ಷಿಪ್ತ ಭಾಗಗಳಲ್ಲಿರುವ ವರ್ಣಭ್ರಾಂತಿ ಮತ್ತು ವರ್ಗಪಕ್ಷಪಾತಗಳನ್ನು ಗುಡಿಸಿ ಹಾಕುವ ಕುವೆಂಪು ಕನ್ನಡ ಸಂಸ್ಕೃತಿಯ ಜಲಗಾರನಾಗಿಯೇ ಕಾಣುತ್ತಾರೆ. "ಗುಡಿಸುವುದೆ ನನ್ನ ದೇವರ ಪೂಜೆ"-ಎಂಬ ಜಲಗಾರನ ಮಾತುಗಳು ಕುವೆಂಪು ಪಾಲಿಗೆ ಕಾವ್ಯಮೀಮಾಂಸೆ ಮತ್ತು ಜೀವನಮೀಮಾಂಸೆಗಳೆರಡೂ ಆಗಿವೆ. ಅರಿಸ್ಟಾಟಲ್ ಪ್ರೇಕ್ಷಕರಿಗೆ ಕಲ್ಪಿಸಿದ 'ಕೆಥಾರ್ಸಿಸ್'ನಂತೆಯೇ ಕುವೆಂಪು ಏಕಕಾಲಕ್ಕೆ 'ರಂಗಭೂಮಿ' ಮತ್ತು 'ಮಹಾಕಾವ್ಯ'- ಗಳೆರಡಕ್ಕೂ 'ಕೆಥಾರ್ಸಿಸ್' ಅಳವಡಿಸಿದ್ದಾರೆ. ಕುವೆಂಪು ಪುರಾಣಕ್ಕೆ ಕಲ್ಪಿಸಿರುವ ಪರಿಷ್ಕಾರಗಳು ಸರ್ವೋದಯ ಮತ್ತು ಪೂರ್ಣದೃಷ್ಟಿಯ ಫಲಿತಗಳಾಗಿವೆ. ಇದೊಂದು ರೀತಿಯಲ್ಲಿ ರೋಗಪೀಡಿತ ರಂಗಭೂಮಿ ಮತ್ತು ಮಹಾಕಾವ್ಯಗಳಿಗೆ ಕುವೆಂಪು ನೀಡಿದ ಧನ್ವಂತರಿಯ ಚಿಕಿತ್ಸೆಯಾಗಿದೆ.

2

ಕುವೆಂಪು ನಾಟಕಗಳು ಮತ್ತು ವೈಚಾರಿಕತೆ*-ಎಂಬ ಶೀರ್ಷಿಕೆಯಲ್ಲಿ ನಮ್ಮನ್ನು ದಿಕ್ಕೆಡಿಸುವ ಪರಿಭಾಷೆಯೆಂದರೆ, 'ವೈಚಾರಿಕತೆ'ಯೇ ಆಗಿದೆ. ಇದನ್ನು ಸೂಕ್ಷ್ಮದೃಷ್ಟಿಯಿಂದ ಅರ್ಥಮಾಡಿಕೊಳ್ಳಬೇಕು. 'ವೈಚಾರಿಕತೆ'ಯನ್ನು 1. ಬಗೆಬಗೆಯ ವಿಚಾರವಾದಗಳು ('ಇಸಂ'ಗಳು) ಎಂಬುದಕ್ಕಿಂತ 2. ಸೃಜನಶೀಲ ಮನೋಧರ್ಮವೆಂದು ತಿಳಿಯಬೇಕು. ಈ ದಿಸೆಯಲ್ಲಿ ಸಿದ್ಧ ವೈಚಾರಿಕತೆ ಮತ್ತು ವೈಚಾರಿಕ ಸಿದ್ಧಿ ಎಂಬ ಪರಿಭಾಷೆಗಳು ಹೆಚ್ಚು ಉಪಯುಕ್ತವಾಗಬಹುದು. 'ಸಿದ್ಧ ವೈಚಾರಿಕತೆ'ಗೆ IMAGISM ಉದಾಹರಣೆಯಾದರೆ, ವೈಚಾರಿಕ ಸಿದ್ಧಿಗೆ IMAGINATION ಉದಾಹರಣೆಯಾಗಿದೆ. ಕುವೆಂಪು ಅವರಿಗೆ ಯಾವುದೆ ಒಂದು 'ಇಸಂ' ಎಂಬುದಿಲ್ಲ. ಪ್ರತಿಭಾಜನ್ಯವಾದ ಕೃತ್ಯಂತರ್ಗತ ಜೀವನದರ್ಶನ ಕುವೆಂಪು ಕೃತಿಗಳಲ್ಲಿದೆ.

ವಿಚಾರವಾದಗಳ ಭ್ರಮೆ ಮತ್ತು ಸೋಲುಗಳನ್ನು ಚೆನ್ನಾಗಿ ಮನಗಂಡಿದ್ದ ಕುವೆಂಪು ವಿಚಾರಕ್ರಾಂತಿಗೆ ಆಹ್ವಾನ ಕೊಡುವಾಗ ತೋರಿದ ಎಚ್ಚರವು ಗಮನಾರ್ಹವಾಗಿದೆ:

1. "ವಿಚಾರವಾದ ಎನ್ನುವುದು ನಾಸ್ತಿಕವಾದ ಅಲ್ಲ. ಆದ್ದರಿಂದ ನಾವು ಜನಗಳಿಗೆ ವಿಚಾರವಾದ ಬೋಧಿಸುವಾಗ ದೇವರ ಕಲ್ಪನೆಗಾಗಲಿ, ಧರ್ಮದ ಕಲ್ಪನೆಗಾಗಲಿ ವಿರುದ್ಧವಾಗಿ ಹೋದರೆ ನಮ್ಮ ವಿಚಾರವಾದ ಸೋತು ಹೋಗುತ್ತದೆ". (ಜನತಾ ಪ್ರಜ್ಞೆ ಮತ್ತು ವೈಚಾರಿಕ ಜಾಗ್ರತೆ)
2. "ಕಾನೂರು ಹೆಗ್ಗಡತಿ ಬರೆಯೋವಾಗ ನನ್ನ ವೈಚಾರಿಕ ದೃಷ್ಟಿಯನ್ನು ಸರಿಯಾಗಿ ಪರೀಕ್ಷಿಸಿಕೊಂಡರೆ ಅಲ್ಲಿ ಈಗ ವಿಚಾರವೇ ಇಲ್ಲ" (ಜಿ.ಎಸ್. ಶಿವರುದ್ರಪ್ಪನವರ ಜೊತೆ ಸಂದರ್ಶನದಲ್ಲಿ)

ಮೇಲಿನ ಅಭಿಪ್ರಾಯಗಳನ್ನು ಎಚ್ಚರದಿಂದ ಪರಶೀಲಿಸಿದರೆ, ಕುವೆಂಪು ಅವರ ವೈಚಾರಿಕತೆಯು ಸಿದ್ಧ ವೈಚಾರಿಕತೆಯಾಗಿರದೆ, ಸಹಜವಾದ ವೈಚಾರಿಕ ಸಿದ್ಧಿಯಾಗಿದೆಯೆಂಬುದು ಅರಿವಾಗುತ್ತದೆ". "ಅಲ್ಲಿ ಈಗ ವಿಚಾರವೇ ಇಲ್ಲ"-ಎಂಬ ಮಾತಿನಲ್ಲಿ ಅರಾಜಕತೆಯಿಲ್ಲ. ಬದಲಿಗೆ ಜಪಾನಿನ ಕೃಷಿಋಷಿ ಮಕೋಕಾ ಅವರ DO NOTHING, THINK NOTHING, BE NOTHING ಎಂಬ ವಿಚಾರ ಸರಣಿಯಿದೆ. ಒಟ್ಟಿನಲ್ಲಿ ಸುಜ್ಞಾನವನ್ನು ನಿರಹಂಕಾರದಿಂದ ಯಾವುದೇ ಒಡಕು-ತೊಡಕುಗಳಿಲ್ಲದಂತೆ ಗ್ರಹಿಸಬೇಕು.

ಜಲಗಾರ, ಶೂದ್ರ ತಪಸ್ವಿ, ಬೆರಳ್‌ಗೆ ಕೊರಳ್-ಎಂಬ ಮೂರು ನಾಟಕಗಳು ನನಗ 'ತ್ರಿವಳಿ ನಾಟಕ'ಗಳು ಟ್ರಿಲಜಿಗಳಾಗಿ ಕಂಡಿವೆ. ಕುವೆಂಪು ಅವರ 'ನಾಟಕ ತ್ರಿವಳಿ'ಗಳನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿರುವುದು (2003) ಉಚಿತವಾಗಿದೆ. ವಿದ್ಯೆಯ ಸ್ವರೂಪದರ್ಶನ ಮತ್ತು ಅಂತರಂಗದ ಸಹಜ ಜ್ಞಾನಗಳನ್ನು ಕುರಿತ ಟೀಕೆ ಟಿಪ್ಪಣಿಗಳನ್ನು

ಈ ತ್ರಿವಳಿ ನಾಟಕಗಳಲ್ಲಿ ಮನಗಾಣಬಹುದು, ವಿದ್ಯೆ ಮತ್ತು ಎದೆಯರಿವುಗಳ ಸಂಘರ್ಷ ಮೂರೂ ನಾಟಕಗಳಲ್ಲಿದೆ. ಸೂರ್ಯೋದಯದ ವರ್ಣನೆಯ ಸಂದರ್ಭದಲ್ಲಿ ಜಲಗಾರನಾಡುವ ಮಾತುಗಳಿವು.

ಸೃಷ್ಟಿಕರ್ತನನೆಮಗೆ ಸಾಧಿಸಲು, ತೋರಿಸಲು
ಸೃಷ್ಟಿಯಿದು ಸಾಲದೇ? ಸೃಷ್ಟಿ ಸೌಂದರ್ಯವಿದು
ಸಾಲದೆ? ಪಳವಾತದೇಕೆ? ಬಿಜ್ಜೆಯೇಂ
ತೋರ್ಕುಮೇ ಎದೆಯರಿವು ತೋರದಾ ಪರಮನಂ?

ಎದೆಯರಿವಿಗೆ ಮಿಗಿಲಾದ ಪರಮಸತ್ಯವನ್ನು ಬಿಜ್ಜೆ ತೋರಿಸಲಾರದೆಂಬ ಕುವೆಂಪು ನಿಲುವನ್ನು ಒಳಹೊಕ್ಕು ಅರ್ಥ ಮಾಡಿಕೊಳ್ಳಬೇಕು. ಕಲೆಯ ಉಗಮಕ್ಕೆ ಜಾತಿ ಲೇಪನ ಮಾಡುವ ಇಬ್ಬರು ಪಾರ್ವರು ಪಡೆದಿರುವುದು ಕಪಟ ವಿದ್ಯೆ. ತಿರುಕನನ್ನು ಗೋಳಾಡಿಸುವ ವಿಚಾರವಾದಿ ತರುಣರು ಪಡೆದಿರುವುದು ಅಲಂಕಾರ ವಿದ್ಯೆ. ಆದರೆ, ಜಲಗಾರ-ಶ್ರೀರಾಮ-ಏಕಲವ್ಯ ಪಡೆದಿರುವುದು ಎದೆಯರಿವು ಅಥವಾ ಸಹಜ ಜ್ಞಾನ.

ವಿದ್ಯಾವಂತರು ಮತ್ತು ಪಂಡಿತರು ವರ್ಣಿಸಿರುವ ಪುರಾಣ ಶಿವನನ್ನು ಕುರಿತು ಸ್ವತಃ ಶಿವನೇ ಹೇಳುವ ಮಾತು:

"ಬಿಜ್ಜೆವಳರಾ ಕವಡುವಣ್ಣನೆಯ ನಂಬದಿರು
ಸೋದರನೆ, ಕುರುಡನಾದವನಿವನ ಬಣ್ಣಿಸುವ
ತೆರದಿ, ಪಂಡಿತರು ಬಣ್ಣಿಪರು ಕಲ್ಪನೆಯ ಶಿವನ..."
ಬ್ರಹ್ಮಾಂಡ ಒತ್ತುತಿಹ ಕಸದ ರಾಸಿಯ ಮೇಲೆ ಹತ್ತಿ,
ನಿಂತು, ನರ್ತನವೆಸಗುತಿಹ ತೋಟಿ ನಾನು!
ನಿಜ ಶಿವನ ಜಲಗಾರ! ನಿನ್ನ ಮುಂದಿಹನು ನೋಡು!

ಪುರಾಣಶಿವನ ಪರಿವೇಷವನ್ನು (ಸಿದ್ಧ ವೈಚಾರಿಕತೆ) ಕಿತ್ತೆಸೆದು ಜಲಗಾರನ ವೇಷದಲ್ಲಿರುವ ನಿಜ ಶಿವನ ಕಲ್ಪನೆಯಲ್ಲಿ ಕುವೆಂಪು ಅವರ ವೈಚಾರಿಕ ಸಿದ್ಧಿಯಿದೆ. ಈ ಸಂದರ್ಭದಲ್ಲಿ ಬೂಮ್‌ರಾಂಗ್‌ನಂತೆ ವರ್ತಿಸುವ ಅಸ್ಪೃಶ್ಯತೆಯ ಪರಿಕಲ್ಪನೆಯನ್ನು ಗ್ರಹಿಸಬೇಕು. ಸಾಕ್ಷಾತ್ ಶಿವನೇ ಅಸ್ಪೃಶ್ಯನಾಗಿರುವ ಬಗೆ ಯಾವ ಸಮುದಾಯಕ್ಕೆ ಪೆಟ್ಟು ಕೊಡುತ್ತಿದೆಯೆಂಬುದೂ ಬಹು ಮುಖ್ಯವಾಗಿದೆ. ಅಸ್ಪೃಶ್ಯತೆಯ ಕಾರ್ಯ ಮತ್ತು ಕಾರಣ ಸಂಬಂಧವನ್ನು 'ಜಲಗಾರ'ದಲ್ಲಿ ಶಿವನಿಗೂ ಅನ್ವಯಿಸಲಾಗಿದೆ. ಲಂಕೇಶ್ ಬರೆದ ಕತೆ 'ಮುಟ್ಟಿಸಿಕೊಂಡವನು'-ಅಸ್ಪೃಶ್ಯ ವೈದ್ಯನನ್ನು ಮುಟ್ಟಿಸಿಕೊಳ್ಳುವುದರ ಮೂಲಕ ಬಾಳಿನ ಕಣ್ಣುಗಳನ್ನು ಪಡೆಯುವ ಬಗೆ ಕತೆಯಲ್ಲಿದೆ. ಕುವೆಂಪು ಪ್ರಕಾರ ಸಾಕ್ಷಾತ್ ಶಿವನೇ ಮುಟ್ಟಬಾರದವನಾಗಿದ್ದಾನೆ. ಇದು ಪರೋಕ್ಷವಾಗಿಯಾದರೂ ಅಸ್ಪೃಶ್ಯತೆಯನ್ನು ಆಚರಿಸುತ್ತಿರುವ ಮಡಿವಂತ ಸಮುದಾಯಗಳಿಗೆ ಕೊಡುತ್ತಿರುವ ಬಲವಾದ ಪೆಟ್ಟಾಗಿದೆ.

ಸ್ತ್ರೀ ದ್ವೇಷಿ ಭಕ್ತರ ಪಾಲಿಗೆ ಶಿವನು ಅರ್ಧನಾರೀಶ್ವರನಾಗಿ ಕಾಣಿಸಿಕೊಂಡಂತೆಯೇ, ಅಸ್ಪೃಶ್ಯನಾಗಿಯೇ ಕಾಣಿಸಿಕೊಂಡನೆಂಬ ಗ್ರಹಿಕೆ ಅತ್ಯುಜ್ವಲವಾಗಿದೆ. ತೆಲುಗಿನಲ್ಲಿ ಜಾಷುವ 'ಗಬ್ಬಿಲಮು' ಖಂಡ ಕಾವ್ಯ ಬರೆದಿದ್ದಾರೆ. ಅಸ್ಪೃಶ್ಯತೆಯ ಆಚರಣೆಯಿಂದ ದಲಿತರು ಅನುಭವಿಸುತ್ತಿರುವ ಹಿಂಸೆ ಮತ್ತು ಅವಮಾನಗಳನ್ನು ತೂಗಲು ಬಾವಲಿಯ ಮೂಲಕ ಶಿವನಿಗೆ ನಿವೇದನೆ ಮಾಡಿಕೊಳ್ಳುವ ಬಗೆ ಈ ಖಂಡ ಕಾವ್ಯದಲ್ಲಿದೆ. ಇದು ಹೃದಯಸ್ಪರ್ಶಿಯಾಗಿದೆಯಾದರೂ ಕುವೆಂಪು ಅವರ ಅಸ್ಪೃಶ್ಯ ಶಿವನ ಕಲ್ಪನೆ ಮುಂದುವರೆದ ಮತ್ತೊಂದು ಹೆಜ್ಜೆಯಾಗಿದೆ.

ವಿದ್ಯೆಗೆ ಅಧಿಕಾರಿಗಳು ಯಾರು? ಎಂಬ ಪ್ರಶ್ನೆ ಶೂದ್ರ ತಪಸ್ವಿಯಲ್ಲಿದೆ.

ಬ್ರಾಹ್ಮಣ: "ತರ್ಕಕ್ಕೆ ಮಿಗಿಲ್ ಶ್ರುತಿವಾಕ್ಯಮೈಸೆ!
ತಪಕ್ಕೆ ಅನಧಿಕಾರಿ ಶೂದ್ರನ್
ಎಂಬುದದು ಶಾಸ್ತ್ರ ಪ್ರಸಿದ್ಧಂ"

ಮನುಧರ್ಮ ಶಾಸ್ತ್ರದ ಪ್ರಸಿದ್ಧ ಉಲ್ಲೇಖವನ್ನು ನೀಡುತ್ತಿರುವ ಬ್ರಾಹ್ಮಣನ ವರ್ಣಭ್ರಾಂತಿಗೆ ಪರಿವರ್ತನೆಯ ತತ್ವವನ್ನು ಅಳವಡಿಸಿ ವರ್ಣಮೈತ್ರಿಯನ್ನು ಎತ್ತಿ ಹಿಡಿದಿರುವುದು ಗಮನಾರ್ಹವಾಗಿದೆ. ವಿದ್ಯೆಯ ಸ್ವರೂಪ ದರ್ಶನದ ಚರ್ಚೆ 'ಬೆರಳ್‌ಗೆ ಕೊರಳ್' ನಾಟಕದಲ್ಲಿದೆ. ಈ ಕುರಿತು ಇದೇ ಲೇಖಕನ 'ಅರ್ಜುನರು ಮತ್ತು ಏಕಲವ್ಯರು' ಎಂಬ ಲೇಖನವನ್ನು ಪರಿಶೀಲಿಸಬಹುದು (ನೋಡಿ: ಆಲಿಸಯ್ಯ ಮಲೆಯ ಕವಿ, ನವ ಕರ್ನಾಟಕ ಪ್ರಕಾಶನ). 'ಅರ್ಜುನರು ಮತ್ತು ಏಕಲವ್ಯರು' ಎಂಬುದನ್ನು ಜಾತಿ–ಮತಧರ್ಮ–ಲಿಂಗಾತೀತವಾದ ನೆಲೆಯಲ್ಲಿ ಬಳಸುತ್ತಿದ್ದೇನೆ. ಲೋಹಿಯಾ ಅವರು ರಾಮ–ಕೃಷ್ಣ–ಶಿವ, ವಸಿಷ್ಠರು ಮತ್ತು ವಾಲ್ಮಿಕಿಯರು ಎಂದು ಚಿಂತನೆ ನಡೆಸಿರುವಂತೆಯೇ ನಾನಿಲ್ಲಿ ಅರ್ಜುನರು ಮತ್ತು ಏಕಲವ್ಯರನ್ನು ಲಕ್ಷಿಸಿ ಚಿಂತನೆ ಮಾಡಿದ್ದೇನೆ.

ಬೆರಳ್‌ಗೆ ಕೊರಳ್ ನಾಟಕವು ವಾಸ್ತವವಾಗಿ ನವಭಾರತದ ಶಿಕ್ಷಣ ವ್ಯವಸ್ಥೆಯ ವಿಡಂಬನ ಸ್ಥಲವಾಗಿದೆ. ಭಾರತ ದೇಶದಾದ್ಯಂತ ನೆಹರೂ ಯುಗದಲ್ಲಿ ವಿಸ್ತರಿಸಿಕೊಂಡ ದ್ರೋಣರ ವಿಶ್ವವಿದ್ಯಾಲಯಗಳು ಮತ್ತು ಶಾಲಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದವರು ಕೌರವ–ಪಾಂಡವ ಕುಮಾರರೇ ಸರಿ! ದ್ರೋಣರ ಶಿಕ್ಷಣ, ಮಾರ್ಗದರ್ಶನದಲ್ಲಿ ಇವರೆಲ್ಲರು ತಾಲೀಮು ಮಾಡುತ್ತಿರುವುದು ನಾಳಿನ ಸ್ಮಶಾನ ಕುರುಕ್ಷೇತ್ರಕ್ಕೆ ಎಂಬುದನ್ನು ಮರೆಯುವಂತಿಲ್ಲ. ವಿದ್ಯೆಯ ಹೆಸರಿನಲ್ಲಿ ವೃದ್ಧಿಯಾಗುವ ಅಹಂಕಾರವು ನಾಳಿನ ಎಲ್ಲ ವಿನಾಶಗಳ ತಳಹದಿಯಾಗಿದೆ. ಇದನ್ನು ಚೆನ್ನಾಗಿ ಅರಿತಿದ್ದ ಕುವೆಂಪು ವಿದ್ಯೆಯ ಸ್ವರೂಪ ದರ್ಶನವನ್ನು ದ್ರೋಣನ ಸ್ವಾಗತದಲ್ಲಿ ಅನಾವರಣಗೊಳಿಸಿದ್ದಾರೆ.

"....ಬಿಂಕಕ್ಕೆ ಡೊಳ್ಳೀವುದು ವಿದ್ಯೆಯೇ? ಅವಿದ್ಯೆ!
ತವಿಪುದಾವುದೊ ಅಹಂಕಾರಮಂ ಅದು ವಿದ್ಯೆ

ಮಿಕ್ಕುದೆಲ್ಲಂ ಅವಿದ್ಯೆ!
ವಿದ್ಯೆಯೆಂಬ ಪೆಸರ ಮರೆಯೊಳಾನ್
ಅವಿದ್ಯೆಯಂ ಪೋಷಿಸುವ ಗುರುವಾದೆನಲ್ತೆ!"

ಇಂಥ ಅಹಂಕಾರದ ಮೊಟ್ಟೆಗಳನ್ನೇ ಡಿ.ಆರ್.ನಾಗರಾಜ ಅವರು 'ಮೆಕಾಲೆಯ ಮಕ್ಕಳು'-ಎಂದು ಕರೆದಿದ್ದಾರೆ. ಇವರನ್ನೇ ನಾನು 'ಅರ್ಜುನರು' ಎಂದೂ ಇದಕ್ಕೆ ವ್ಯತಿರಿಕ್ತವಾಗಿ ವಸಾಹತು ಶಿಕ್ಷಣಕ್ಕೆ ಹೊರತಾದ ಮಲೆಯ ಮಕ್ಕಳನ್ನು 'ಏಕಲವ್ಯರು' ಎಂದೂ ಕರೆದು ಚರ್ಚಿಸಿದ್ದೇನೆ. ಇಂಥ ಅರ್ಜುನರು ಮತ್ತು ಏಕಲವ್ಯರ ಸಂಘರ್ಷವೇ ಕುವೆಂಪು ಮತ್ತು ತೇಜಸ್ವಿ ಸಾಹಿತ್ಯ ಕೃತಿಗಳ ಮುಖ್ಯ ತಿರುಳಾಗಿದೆ.

ಅರ್ಜುನರ ಏಕಾಗ್ರತೆ ಮತ್ತು ಏಕಲವ್ಯರ ಏಕಾಗ್ರತೆಯಲ್ಲಿ ಅಜ-ಗಜಾಂತರ ವ್ಯತ್ಯಾಸವಿದೆ. ಹಕ್ಕಿಯ ಕಣ್ಣಿಗೆ ಗುರಿಯಿಡುವುದನ್ನು ವಿದ್ಯೆಯ ಹೆಸರಿನಲ್ಲಿ ಕಲಿಯುವ ಅರ್ಜುನರ ಏಕಾಗ್ರತೆಯ ಹಿಂದೆ ಹಕ್ಕಿಗೊರಳನ್ನು ಹಿಚುಕುವ ಹಿಂಸೆ ಮತ್ತು ಕ್ರೌರ್ಯಗಳಿವೆ. ಇಂದಿನ ಪರಿಸರನಾಶದ ತಲ್ಲಣಗಳು ಇಂಥ ಏಕಾಗ್ರತೆಯ ಪರಿಣಾಮ ಫಲಗಳೆಂಬುದನ್ನು ಉಪೇಕ್ಷಿಸಲಾಗದು. ಆದರೆ, ಏಕಲವ್ಯರ ಏಕಾಗ್ರತೆ ಅತ್ಯುನ್ನತವಾದುದು. "ಪೊಂಗಳಿ ಅಥವಾ ಮಳೆ ಕೋಗಿಲೆ"ಯನ್ನು (ಕೊಡಲಿ ಕೊಕ್ಕಿನ ಮಂಗಟ್ಟೆ, ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್) ಹೊಡೆದುರುಳಿಸಲು ಆಜ್ಞಾಪಿಸುವ ದ್ರೋಣರ ಗುರುವಚನವನ್ನು ಏಕಲವ್ಯ ಧಿಕ್ಕರಿಸುತ್ತಾನೆ.

"...ಅಪರಾಧವಿಲ್ಲದಾ ಸಾಧುವಂ ಕೊಲಲ್ಕಲ್ತು
ಆಚಾರ್ಯ! ಆ ವಿದ್ಯೆಯಂ ನೀನಿತ್ತುದೆನಗೆ
ಮುನಿಗಂ ಮಂತ್ರಾಧಿ ದೇವತೆ...."

ಮಲೆನಾಡಿನಲ್ಲಿ ಮಳೆಕಾಡುಗಳಲ್ಲಿ ಮಾತ್ರ ಕಂಡುಬರುವ ಪೊಂಗುಳಿ ಅಥವಾ ಮಳೆ ಕೋಗಿಲೆಯನ್ನು ಯಾರೂ ಬೇಟೆಯಾಡುವುದಿಲ್ಲ. ಇದು ಒಣಮರದ ಕೊಂಬೆಯ ಮೇಲೆ ಕುಳಿತು ಹಾಡಿದರೆ ಮಳೆ ಬರುವುದೆಂಬ ನಂಬಿಕೆಯಿರುವುದರಿಂದಲೇ ಮಳೆಕೋಗಿಲೆಯೆಂಬ ಹೆಸರನ್ನು ಪಡೆದಿದೆ. ಸಂತಾನ ಸಮಯದಲ್ಲಿ ಗಂಡುಪಕ್ಷಿಯು ತಾಯಿ ಮತ್ತು ಮಕ್ಕಳನ್ನು ರೆಕ್ಕೆ ಪುಕ್ಕ ಬಲಿಯುವವರೆಗೆ, ನಿರಂತರವಾಗಿ ಪೋಷಿಸುವ ಜವಬ್ದಾರಿಯನ್ನು ಹೊತ್ತಿರುತ್ತದೆ. ಒಂದು ವೇಳೆ ಗಂಡು ಪಕ್ಷಿ ಸತ್ತು ಹೋದರೆ, ಪೊಟರೆಯಲ್ಲಿರುವ ಹಾರಲಾರದ ತಾಯಿ ಮತ್ತು ಮಕ್ಕಳು ಪಕ್ಷಿಗಳು ಕೂಡ ಹೊಟ್ಟೆಗಿಲ್ಲದೆ ಸತ್ತು ಹೋಗುತ್ತದೆ. ತಾನು ಬದುಕಿ ಬಾಳಿದ ಅರಣ್ಯ ಪರಿಸರವನ್ನು ಏಕಾಗ್ರತೆಯಿಂದ ಅಭ್ಯಾಸ ಮಾಡಿದ್ದ ಏಕಲವ್ಯನಿಗೆ ಇಂಥ ಸಾಧು ಪಕ್ಷಿಯನ್ನು ಕೊಲ್ಲಲು ಮನಸ್ಸು ಬರುವುದಿಲ್ಲ. ಆದ್ದರಿಂದಲೆ ದ್ರೋಣರು ನೀಡಿದ ಆಜ್ಞೆರೂಪದ ಗುರುವಚನವನ್ನು ಏಕಲವ್ಯನು ಬದಲಾಗದ ತತ್ವ ನಿಷ್ಠೆ ಮತ್ತು ಏಕಾಗ್ರತೆಯ ಮನಸ್ಸಿನಿಂದ ವಿವೇಚಿಸಿ, ಧಿಕ್ಕರಿಸಿಬಿಡುತ್ತಾನೆ. ಹೀಗೆ, ಏಕಲವ್ಯನನ್ನು ಚಿತ್ರಿಸುವಾಗ ಕುವೆಂಪು ಮಲೆನಾಡಿನ ಅರಣ್ಯ ಪರಿಸರ, ಗಿರಿಜನರ

ನಂಬಿಕೆಗಳು, ಸ್ಥಳೀಯವಾದ ಬಿಂಬ ಜ್ಞಾನಗಳನ್ನು ಒಳಗೊಂಡು ರೂಪಿಸಿದ್ದಾರೆ. ಇದೆಲ್ಲ ದಟ್ಟ ಜೀವನಾನುಭವಗಳಿಂದ ಕೂಡಿದ ಜಾನಪದ ಜಗತ್ತಿನ ವಿವರಗಳಲ್ಲದೆ ಮತ್ತೇನು?

ಅಕಾಡೆಮಿ ಪ್ರಕಟಿಸಿರುವ ಕುವೆಂಪು ಅವರ ತ್ರಿವಳಿ ನಾಟಕಗಳನ್ನು ಬಿಡಿಯಾಗಿ ನೋಡುವಂತೆಯೆ ಇಡಿಯಾಗಿಯೂ ಗ್ರಹಿಸಬೇಕು. ಜಲಗಾರ ನಾಟಕದಲ್ಲಿ ಬರುವ ಇಬ್ಬರು ಪಾರ್ವರು, ಇಬ್ಬರು ತರುಣರು, ಒಬ್ಬ ಭಟ್ಟ–'ಶೂದ್ರ ತಪಸ್ವಿ' ನಾಟಕದಲ್ಲಿರುವ ಬ್ರಾಹ್ಮಣ–'ಬೆರಳ್‌ಗೆ ಕೊರಳ್' ನಾಟಕದ ಅರ್ಜುನ ಮತ್ತು ಸ್ವಲ್ಪ ಮಟ್ಟಿಗೆ ದ್ರೋಣ ಇವರೆಲ್ಲ ಒಂದೇ ಮೂಲಕ್ಕೆ ಸೇರಿದವರು, ಇವರೆಲ್ಲ ಸೇರಿ ಉಗುಳುವುದು ಜಾತಿ ಮದ್ದಿನ ಬೆಂಕಿಯುಂಡೆಗಳನ್ನು. 'ಜಲಗಾರ' ನಾಟಕದ ಜಲಗಾರ ಮತ್ತು ಶಿವ –'ಶೂದ್ರ ತಪಸ್ವಿ'ಯ ಶ್ರೀರಾಮ, ಬ್ರಹ್ಮಾಸ್ತ್ರ, ಮೃತ್ಯು – 'ಬೆರಳ್‌ಗೆ ಕೊರಳ್' ನಾಟಕದ ಏಕಲವ್ಯ, ಅಶ್ವತ್ಥಾಮ ಇವರೆಲ್ಲ ಒಂದೇ ಮೂಲಕ್ಕೆ ಸೇರಿದವರು. ಕುಲವೆಂಬ ಭದ್ರಕೋಟೆಗೆ ಲಗ್ಗೆ ಹಾಕುವವರು. ಸುಜ್ಞಾನಿಗಳು ನಿರಹಂಕಾರದಿಂದ ವಿಭಜನೆಗಳೊಳಗಿನ ಅವಿಭಾಜ್ಯವನ್ನು ಕಂಡು–ಕೊಳ್ಳುವಂತೆಯೇ, ಸಾಹಿತ್ಯಾಭ್ಯಾಸಿಗಳು ಅಂತಿಮವಾಗಿ ವಿಭಾಗೀಕರಣಗಳನ್ನು ಮೀರಿ ಚಿಂತನೆ ಮಾಡಬೇಕಾಗುತ್ತದೆ. ಏಕೆಂದರೆ, ಯಾವುದೇ ವಿಭಜನೆ 'ಖಂಡ ಸತ್ಯ'ವಾಗಿದ್ದರೆ, ಅವಿಭಾಜ್ಯವು 'ಅಖಂಡ ಸತ್ಯ'ವಾಗಿರುತ್ತದೆ. ಆದ್ದರಿಂದಲೆ, ಕವಿ ಪಂಪನು ಬಹು ಹಿಂದೆಯೆ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಉಗ್ಗಡಿಸಿದ್ದಾನೆ. ಕೊನೆಯದಾಗಿ, ಕುವೆಂಪು ಜೊತೆ ಜಿ.ಎಸ್.ಶಿವರುದ್ರಪ್ಪ ನಡೆಸಿದ ಸಂದರ್ಶನ, ಪ್ರಶ್ನೋತ್ತರವೊಂದನ್ನು ಉಲ್ಲೇಖಿಸಿ ವಿರಮಿಸುತ್ತೇನೆ.

ಜಿ.ಎಸ್.ಎಸ್ : ಪಶ್ಚಿಮದಿಂದ ಸಾಂಸ್ಕೃತಿಕವಾಗಿ ನಾವು ಬಿಡಿಸಿಕೊಂಡು ಭಾರತೀಯವಾಗುವುದು ಹೇಗೆ?

ಕುವೆಂಪು : ಏನಂದಿರಿ? "ಪಶ್ಚಿಮದಿಂದ ಸಾಂಸ್ಕೃತಿಕವಾಗಿ" ಬಿಡಿಸಿಕೊಳ್ಳುವುದೆ? ಅದು ತೀರಾ ಅನಾವಶ್ಯಕ. ಪಶ್ಚಿಮದಿಂದ ಸಾಂಸ್ಕೃತಿಕವಾಗಿ ನಾವು ಬಿಡಿಸಿಕೊಳ್ಳಲೇಬಾರದು. ಉತ್ತಮವಾದುದನ್ನು ನಾವು ಪೂರ್ತಿಯಾಗಿ ಉಳಿಸಿ ಕೊಳ್ಳಲೇಬೇಕು. ಇನ್ನು ಭಾರತೀಯತೆ ಅಂದರೆ ಏನು? ಭಾರತೀಯತೆಯ ಹೆಸರಿನಲ್ಲಿ ಎಲ್ಲ ಜಾತಿ–ಮತ ಇತ್ಯಾದಿ ಗಲೀಜುಗಳನ್ನುಳಿಸಿಕೊಳ್ಳುವುದಾದರೆ ಆ ಭಾರತೀಯತೇನೇ ಬೇಡ.

(ಕುವೆಂಪು: ಪುನರಾವಲೋಕನ, ಅಂಕಿತ ಪ್ರಕಾಶನ)

- ಪ್ರಬಂಧ ಮಂಡನೆಗಾಗಿ ನನಗೆ ಕೊಟ್ಟಿದ್ದ ಈ ಶೀರ್ಷಿಕೆಯನ್ನೇ ನಾನು ಸ್ವಾತಂತ್ರ್ಯವಹಿಸಿ ಬದಲಾಯಿಸಿಕೊಂಡಿದ್ದೇನೆ–ಲೇಖಕ.

- ಬೆಂಗಳೂರಿನ ಬಿ.ಇ.ಎಸ್. ಪದವಿ ಕಾಲೇಜು ಕುವೆಂಪು–ಕಾರಂತರನ್ನು ಲಕ್ಷಿಸಿ, ನಡೆಸಿದ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ (ದಿನಾಂಕ : 22–3–2006) ಮಾಡಿದ ಭಾಷಣವನ್ನಾಧರಿಸಿದ ಲೇಖನ. ●

ಸೌಂದರ್ಯ ಹಾಗೂ ವಿಕಾರ

- ಜಿ. ರಾಜಶೇಖರ್

ಗೆಳೆಯ ಪಿ.ಬಿ. ಪ್ರಸನ್ನ ಅವರಿಗೆ ತನ್ನ ಅನುಭವವನ್ನು ಕತೆ ಕಟ್ಟಿ ಹೇಳುವ ಉತ್ಸಾಹವಿದೆ. ತಾನು ಕಂಡ, ಕೇಳಿದ ಘಟನೆಗಳನ್ನು ಹಾಗೂ ಅನುಭವಿಸಿದ ಸೂಕ್ಷ್ಮ ಸಂಗತಿಗಳನ್ನು ಕಥನವಾಗಿ ಮಾರ್ಪಡಿಸುವ ರೂಪಕ ಪ್ರತಿಭೆಯೂ ಅವರಲ್ಲಿ ಧಾರಾಳವಾಗಿದೆ. ಈ ಬಗೆಯ ಉತ್ಸಾಹ ಮತ್ತು ಪ್ರತಿಭೆಗಳೆರಡನ್ನೂ ಒಟ್ಟಿಗೇ ಪಡೆದ ಪರಿಣತ ಕತೆಗಾರರು, ಆಶು ಮತ್ತು ಬರಹ ಎರಡು ಪ್ರಭೇದಗಳಲ್ಲೂ ನಮ್ಮಲ್ಲಿ ಈಗ ಕಣ್ಮರೆಯಾಗುತ್ತಿದ್ದಾರೆ. ಒಂದು ಒಳ್ಳೆಯ ಕತೆ ಓದಿ ಅಥವಾ ಹರಿಕಥೆ ಕೇಳಿ, ಇಲ್ಲವೇ ತಾಳ ಮದ್ದಳೆಯ ಕತೆ, ಅದರೊಳಗೆ ಇನ್ನೊಂದು ಕತೆಯ ಸ್ವಾರಸ್ಯದ ಅರ್ಥಗಾರಿಕೆಯನ್ನು ಸವಿದು ಎಷ್ಟು ಸಮಯವಾಯಿತು ಎಂದು ಒಂದು ಕ್ಷಣ ಯೋಚಿಸಿ. ನಾಟಿ ವೈದ್ಯ, ನೇಯ್ಗೆ, ಕುಂಬಾರ ಮತ್ತು ಬಡಗಿ ವೃತ್ತಿಗಳ ಹಾಗೆ ಕತೆಗಾರಿಕೆಯ ಕಸುಬನ್ನೂ ಆಧುನಿಕತೆ ನಾಶಪಡಿಸಿದೆ. ಕತೆ ಕೇಳುವ ಉತ್ಸಾಹ ತೋರುವವರ ಸಂಖ್ಯೆಯೂ ಕ್ಷೀಣಿಸುತ್ತಿದೆ. ಕತೆಗಾರರು ಈಗ ನಶಿಸಿಹೋಗುತ್ತಿರುವ ಕೈ ಕಸುಬು, ಭಾಷೆ ಮತ್ತು ಜೀವ ಪ್ರಭೇದಗಳ ಸಾಲಿನಲ್ಲೇ ಇದ್ದಾರೆ. ತಮ್ಮ ಸ್ವಂತದ ಒತ್ತಡ ಮತ್ತು ಶ್ರದ್ಧೆಗಳಿಂದ ಅವರು ಕತೆ ಹೇಳುತ್ತಿರುವುದೇ ವಿನಾ ಹೊರ ಜಗತ್ತು ಅದನ್ನು ಆಲಿಸುವ ವ್ಯವಧಾನ ತೋರುತ್ತಿದೆ ಎಂಬ ಕಾರಣಕ್ಕಲ್ಲ.

ವಾಲ್ಟರ್ ಬೆಂಜಮಿನ್, ಲೆಸ್ಕೋವ್ ಎಂಬ ಕತೆಗಾರನ ಕುರಿತ ತನ್ನ ಪ್ರಬಂಧದಲ್ಲಿ ಆಧುನಿಕತೆಯ ಈ ವಿನಾಶಕಾರಿ ಪ್ರಕ್ರಿಯೆಯ ಕುರಿತು ಆಳವಾದ ಚಿಂತನೆ ನಡೆಸಿದ್ದಾನೆ. ಬೆಂಜಮಿನ್ ಹೇಳುತ್ತಾನೆ, "ಕತೆಗಾರನ ಹೆಸರು ನಮಗೆ ಚಿರಪರಿಚಿತವಾಗಿದ್ದರೂ ಈಗ ಒಂದು ಜೀವಂತಿಕೆಯಾಗಿ ಆತ ನಮಗೆ ಸಮಕಾಲೀನನಲ್ಲ. ಆತ ನಮ್ಮಿಂದ ದೂರ ಸರಿದಿದ್ದಾನೆ. ಉದಾಹರಣೆಗೆ ಲೆಸ್ಕೋವ್‌ನನ್ನು ನಾನು ಕತೆಗಾರ ಎಂದು ನಿಮಗೆ ಪರಿಚಯ ಮಾಡಿಕೊಟ್ಟರೆ ಆತ ನಿಮಗೆ ಆತ್ಮೀಯನಾಗುವುದಿಲ್ಲ. ನಿಮ್ಮ ಮತ್ತು ಆತನ ನಡುವಿನ ಅಂತರವನ್ನು ಇನ್ನಷ್ಟು ಹೆಚ್ಚಿಸಿದ ಹಾಗಾಗುತ್ತದೆ . . . ಕಥನ ಕಲೆ ಅವಸಾನವಾಗುತ್ತಿದೆ. ಒಂದು ಕತೆಯನ್ನು ಅಚ್ಚುಕಟ್ಟಾಗಿ ಹೇಳುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಕತೆ ಕೇಳುವ ಹಂಬಲ ಯಾರಾದರೂ ವ್ಯಕ್ತಪಡಿಸಿದರೆ ಹೇಳಲು ಯಾರೂ ಮುಂದೆ ಬರುವುದಿಲ್ಲ. ನಮ್ಮಿಂದ ಬೇರ್ಪಡಿಸಲು ಸಾಧ್ಯವೇ ಇಲ್ಲದ ಹಾಗೂ ನಮ್ಮ ಅತ್ಯಂತ ಖಾಸಗಿಯ

ಜಿ. ರಾಜಶೇಖರ್, 'ವಿಷ್ಣುನಂದನ', ಚಾಕಲೇಟ್ ಫ್ಯಾಕ್ಟರಿಯ ಹತ್ತಿರ, ಕೊಳಂವೆ, ಉಡುಪಿ – ೫೭೬೧೦೧.

ಜಿ. ರಾಜಶೇಖರ್‌ರವರ ಈ ಮಹತ್ವಪೂರ್ಣ ಮುನ್ನುಡಿಯನ್ನು ಉಡುಪಿಯ ಗೆಳೆಯರಾದ ಮುರಳೀಧರ ಉಪಾಧ್ಯಾಯರವರು ಶೂದ್ರದಲ್ಲಿ ಪ್ರಕಟಿಸಲು ಕಳಿಸಿದರು. ಇದೇ ಚಿಂತನೆಯ ಅಪರೂಪದ ಲೇಖನ ಡಿಸೆಂಬರ್ ಮಯೂರದಲ್ಲಿ ಪ್ರಕಟವಾಗಿದೆ. ಅನಂತಮೂರ್ತಿ ಮತ್ತು ಆಶಿಷ್ ನಂದಿ ಜುಗಲ್ ಬಂದಿ. ದಯವಿಟ್ಟು ಓದಿ. ಶೂದ್ರಶ್ರೀ

ಸ್ವತ್ತಾದ ಅನುಭವಗಳ ಹಂಚಿಕೊಳ್ಳುವಿಕೆಯನ್ನೇ ನಮ್ಮಿಂದ ಕಸಿದುಕೊಂಡಂತಾಗಿದೆ . . . . . . ಇದಕ್ಕೆ ಒಂದು ಕಾರಣ ಸ್ಪಷ್ಟವಾಗಿದೆ. ಅನುಭವದ ಬೆಲೆಯೇ ಈಗ ಕಡಿಮೆಯಾಗಿ ಬಿಟ್ಟಿದೆ. ವೃತ್ತ ಪತ್ರಿಕೆಗಳ ಮೇಲೆ ಒಂದು ಕ್ಷಣ ಕಣ್ಣಾಡಿಸಿದರೂ ಗೊತ್ತಾಗುತ್ತದೆ – ಹೊರ ಜಗತ್ತು ಮಾತ್ರವಲ್ಲ ನೈತಿಕ ಜಗತ್ತಿನ ಬಗ್ಗೆ ನಾವು ಕಟ್ಟಿಕೊಂಡ ಚಿತ್ರಣ ಕೂಡ ಊಹಿಸಲು ಅಸಾಧ್ಯವಾದ ರೀತಿಗಳಲ್ಲಿ ಬದಲಾಗಿದೆ......" (ILLUMINATIONS–ವಾಲ್ಟರ್‌ಬೆಂಜಮಿನ್–ಲಂಡನ್ ೧೯೬೨).

ಬೆಂಜಮಿನ್ ಮುಂದುವರೆದು, ಆಧುನಿಕ ಯುಗದಲ್ಲಿ ಮಾಹಿತಿಯು ಜೀವನಾನುಭವನದ ಸ್ಥಾನವನ್ನು ಆಕ್ರಮಿಸಿಕೊಂಡಿರುವುದರಿಂದ ಕತೆ ಹೇಳುವ ಹಾಗೂ ಕೇಳುವ ಎರಡೂ ಪ್ರಕ್ರಿಯೆಗಳು ಅವಸಾನಗೊಂಡವು ಎಂದು ಸೂಚಿಸುತ್ತಾನೆ. ಸುಶಿಕ್ಷಿತರಿಗೆ ಈಗ ಕತೆ ಕೇಳುವುದರಲ್ಲಿ ಆಸಕ್ತಿ ಇಲ್ಲ. ಸಮಯವೂ ಇಲ್ಲ. ಓದುವ ವ್ಯವಧಾನ ಮತ್ತು ಪುರುಸೊತ್ತು ಎರಡೂ ಇರುವ ಭಾಗ್ಯಶಾಲಿಗಳು, ಓದುವುದು ಪೇಪರು ಮತ್ತು ಮ್ಯಾಗಜೀನುಗಳನ್ನು ಮಾತ್ರ ಹೊರತು ಕತೆ ಕಾದಂಬರಿಗಳನ್ನಲ್ಲ. ಹಾಗಾಗಿ ನಮ್ಮ ಒಳಜೀವಕ್ಕೆ ಅಗತ್ಯವಾಗಿರುವ ಸುಖದುಃಖದ ಅನುಭವಗಳನ್ನು ಈಗ ಒದಗಿಸುತ್ತಿರುವುದು ಕತೆ ಕಾದಂಬರಿಗಳಲ್ಲ; ಆಪ್ತರ ಜೊತೆ ಹರಟೆ ಕೂಡ ಅಲ್ಲ; ಬದಲಾಗಿ ಮಾಧ್ಯಮಗಳಿಗೆ ಈಗ ಅವುಗಳ ವಿತರಣೆಯ ಗುತ್ತಿಗೆಯನ್ನು ವಹಿಸಿಕೊಟ್ಟಿದ್ದೇವೆ. ಮಾಧ್ಯಮಗಳು ಪ್ರತಿನಿತ್ಯವೂ ಜಗತ್ತಿನಾದ್ಯಂತದ ಸುದ್ದಿಗಳನ್ನು ನಮ್ಮ ಮುಂದೆ ರಾಶಿ ಹಾಕುತ್ತವೆ. ಅವುಗಳಲ್ಲಿ ತರತಮ ವ್ಯತ್ಯಾಸವಿಲ್ಲ. ದೂರ, ಸಮೀಪಗಳ ಅಂದಾಜೂ ನಾಪತ್ತೆ. ಆಫ್ರಿಕಾದ ಕ್ಷಾಮ, ಮಹಾರಾಷ್ಟ್ರದ ರೈತರ ಆತ್ಮಹತ್ಯೆ, ಬಿಜಾಪುರದ ಕೂಲಿಗಳ ವಲಸೆ ಮತ್ತು ನಮ್ಮೂರಿನ ಮಠಾಧೀಶರ ಅವಾಂತರಗಳು ಎಲ್ಲದಕ್ಕೂ ಅಲ್ಲಿ ಒಂದೇ ಬಗೆಯ ನಿರೂಪಣೆ. ನೋಡುಗನ ಸೂಕ್ಷ್ಮ ಸಂವೇದನೆಗಳನ್ನು ನಾಶಪಡಿಸಿ ಆತನನ್ನು ಜಡಗೊಳಿಸುವುದೇ ಅವುಗಳ ಉದ್ದೇಶ. ಕಣ್ಣೆದುರಿನ ಸತ್ಯ ಕೂಡ ಮಾಹಿತಿಯ ರೂಪದಲ್ಲೇ ದಕ್ಕಬೇಕು. ಗಾಢ ಅನುಭವವೂ ಅಂಕಿ ಸಂಖ್ಯೆಗಳಲ್ಲೇ ರೆಡಿಮೇಡ್ ಆಗಿ ಸಿಗಬೇಕು. ಹೆಚ್ಚೆಂದರೆ ಟಿ.ವಿ. ಸೀರಿಯಲ್‌ಗಳ ಹುಸಿ ಸಂಸಾರಗಳ ರೂಪದಲ್ಲಿ ದೊರೆಯಬೇಕು ಎಂದು ಬಯಸುವವರು ಜಡ ಬಳಕೆದಾರರಾಗಿ ಮಾತ್ರ ಉಳಿದಾರು. ಒಂದು ಸಂಪನ್ನ ಸಮುದಾಯವಾಗಿ ಯಾವತ್ತೂ ಬಾಳಲಾರರು. ಬಿಡಿ ಬಿಡಿಯಾಗಿ ಬದುಕುವ ಬಳಕೆದಾರರನ್ನೂ ಒಂದು ಸಮುದಾಯವಾಗಿ ಒಟ್ಟಂದದಲ್ಲಿ ಕತೆಯು ಕಟ್ಟಿಹಾಕುತ್ತದೆ. ಅನುಭವದ ಸಂವಹನ, ಸಹಸ್ಪಂದನ ಮತ್ತು ಸಹಾನುಭೂತಿಗಳು ಕಾಣೆಯಾಗಿರುವ ಸಮಾಜದಲ್ಲಿ ಕತೆಗಳೂ ಹುಟ್ಟಿಕೊಳ್ಳುವುದಿಲ್ಲ. ಮನುಷ್ಯರಲ್ಲಿ ನಂಬಿಕೆ ಇರಿಸದೆ ಕಥನ ಕ್ರಿಯೆ ಸಾಧ್ಯವಿಲ್ಲ. ನಮ್ಮ ಕಾಲದಲ್ಲಂತೂ ಕತೆ ಹೇಳುವುದೇ ಒಂದು ನೈತಿಕ ಕ್ರಿಯೆ. ಗೆಳೆಯ ಪ್ರಸನ್ನರಿಗೆ ಕತೆ ಕಟ್ಟುವ ಕಾಯಕದಲ್ಲಿ ಶ್ರದ್ಧೆಯಿದೆ. ತನ್ನ ಕತೆಯನ್ನು ಇತರರು ಕೇಳಿಸಿಕೊಳ್ಳಬೇಕು ಎಂಬ ಹಂಬಲವೂ ಇದೆ. ಸಿನಿಕರಾಗದೆ ಲೋಕ ಜೀವನವನ್ನು ಕಾಣುವವರಲ್ಲಿ ಮಾತ್ರ ಈ ಗುಣಗಳು ಇರುವುದು. ಇವಕ್ಕಾಗಿ ಪ್ರಸನ್ನ ಅವರನ್ನು ಮೊದಲಿಗೆ ಅಭಿನಂದಿಸಿ, ಪ್ರಸ್ತುತ ಸಂಕಲನದ ಕತೆಗಳ ಕುರಿತು ನನಗೆ ಹೊಳೆದ ನಾಲ್ಕು ಮಾತುಗಳನ್ನು ಹೇಳುತ್ತೇನೆ.

ಪ್ರಸನ್ನ ಅವರ ಕತೆಗಳ ಕಾಲ ವರ್ತಮಾನವಾದರೆ, 'ದೇಶ' ಕಾಲವಾಗಿದೆ. ಕತೆಗಳಲ್ಲಿ ಬರುವ ಊರುಗಳು ದಕ್ಷಿಣ ಕನ್ನಡದ ಕರಾವಳಿಯ ತುಳುನಾಡಿನ ಕಾಪು, ಪಡುಬಿದ್ರಿ, ಉಚ್ಚಿಲ, ಪೊಲ್ಯ, ಕುಚ್ಚೂರು, ಎರ್ಮಾಳು, ಎಲ್ಲೂರು, ಅದಮಾರು, ಮುಲ್ಕಿ ಮುಂತಾದ ಸಣ್ಣ ಊರುಗಳು. ಹೆಸರಿಗೆ ಇದು ತುಳು ನಾಡಾದಾರೂ ಈ ಪ್ರದೇಶ ಬಹು ಭಾಷಾ ಸಂಪನ್ನವಾಗಿರುವಂತದ್ದು. ತುಳು ಮತ್ತು ಕೊಂಕಣಿ ಇಲ್ಲಿ ಮನೆ ಮಾತು. ಅಲ್ಲದೆ ಶೂದ್ರ ಮತ್ತು ಬ್ರಾಹ್ಮಣರ ತುಳು, ಗೌಡ ಸಾರಸ್ವತರು, ಕ್ಯಾಥೋಲಿಕ್ ಕ್ರಿಶ್ಚಿಯನ್ನರು ಆಡುವ ಕೊಂಕಣಿ ಮತ್ತು ಭಟ್ಕಳದ ನವಾಯಿತರು ಆಡುವ ವಿಭಿನ್ನ ಕೊಂಕಣಿ ಹೀಗೆ ಅನೇಕ ಪ್ರಭೇದಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿವೆ. ಜೊತೆಗೆ ಹಲವಾರು ಪ್ರಾದೇಶಿಕ ವ್ಯತ್ಯಾಸಗಳು ಇವೆ. ಆದರೆ ಇಲ್ಲಿನ ಶಾಲೆ ಕಾಲೇಜುಗಳು ಕೋರ್ಟು ಕಛೇರಿಗಳು ಮತ್ತು ಪತ್ರಿಕೆಗಳ ಭಾಷೆ ಕನ್ನಡವಾಗಿದೆ. ಹಾಗಾಗಿ ತುಳುನಾಡಿನ ಕನ್ನಡವು ತನ್ನದೇ ಆದ ಬನಿಯನ್ನು ಪಡೆದುಕೊಂಡಿದೆ.

ಪ್ರಸನ್ನ ಅವರು ತನ್ನ ಎಲ್ಲಾ ಕತೆಗಳನ್ನು ಬರೆದಿರುವುದು ತುಳುನಾಡಿನಲ್ಲಿ ಚಾಲ್ತಿಯಲ್ಲಿರುವ ಹೈಬ್ರಿಡ್ ಕನ್ನಡದಲ್ಲಿ. ಈ ಭಾಷೆಯ ವಿಶಿಷ್ಟ ನುಡಿಗಟ್ಟುಗಳು, ಮಾತಿನ ನಮೂನೆಗಳು, ಶಾಪ ಮತ್ತು ಬೈಗುಳ ಹಾಗೂ ಧ್ವನಿಯ ಏರಿಳಿತಗಳನ್ನು ಪ್ರಸನ್ನ ಯಥಾವತ್ತಾಗಿ ಗ್ರಹಿಸಿದ್ದಾರೆ ಎನ್ನುವುದಕ್ಕೆ ಅವರ ಕತೆಗಳಲ್ಲಿ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ತುಳುನಾಡಿನಲ್ಲಿ ಬಳಕೆಯಾಗುತ್ತಿರುವ ಕನ್ನಡವು ಅವರ ಕತೆಗಳಲ್ಲಿ ಭಾಷಿಕ ಜಾನಪದವಾಗಿ ರೂಪುಗೊಂಡಿದೆ.

ಭಾಷೆ ಮಾತ್ರವಲ್ಲ ಇಲ್ಲಿನ ಕತೆಗಳಲ್ಲಿ ಚಿತ್ರಿತವಾಗಿರುವ ಸಂಸ್ಕೃತಿಯು ಹೈಬ್ರಿಡ್ ಸಂಸ್ಕೃತಿಯಾಗಿದೆ. ಈ ಕತೆಯಲ್ಲಿ ಬರುವ ಜನಜೀವನದ ವಿವರಗಳು, ಸ್ಥಳ ಪರಿಚಯ, ಕ್ಷೇತ್ರ ಮಹಾತ್ಮೆ, ದೇವಸ್ಥಾನಗಳ ಕಟ್ಟು ಕಟ್ಟಲೆಗಳು, ಯಕ್ಷಗಾನ ಮೇಳಗಳು ಹಾಗೂ ವಿಭಿನ್ನ ಜಾತಿಗಳು ಒಟ್ಟಾರೆಯಾಗಿ ಒಂದು ಜಾನಪದ ಸಂಸ್ಕೃತಿಯ ಚಿತ್ರಣವನ್ನು ಕಟ್ಟಿಕೊಡುತ್ತವೆ. ಆದರೆ ಇದು ನಮ್ಮ ಮಾಧ್ಯಮಗಳು ಹಾಗೂ ಸಂಸ್ಕೃತಿಯ ಹೋಲ್ಸೇಲ್ ಗುತ್ತಿಗೆದಾರರು ಟೂರಿಸ್ಟರಿಗಾಗಿ ಸಿದ್ದಪಡಿಸುವ ಪ್ರೆಟ್ಟಿ ಪ್ರೆಟ್ಟ ಚಿತ್ರಗಳಲ್ಲ. ಈ ಸಂಕಲನದ ಕತೆಗಳು ಚಿತ್ರಿಸುವ ತುಳುನಾಡಿನ ಸಂಸ್ಕೃತಿಯಲ್ಲಿ ಸೌಂದರ್ಯದ ಜೊತೆಗೆ ವಿಕಾರವೂ ಇದೆ. ಸಮುದಾಯದ ಬದುಕಿನ ಒಳಗೇ ಜಾತೀಯ ವೈಷಮ್ಯ, ವರ್ಗಭೇದ, ಮತೀಯ ದ್ವೇಷಗಳೂ ಹೊಗೆ ಆಡುತ್ತಿವೆ. ದೇವಸ್ಥಾನಗಳಲ್ಲಿ ಗಂಟುಕಳ್ಳರೇ ತುಂಬಿಕೊಂಡಿದ್ದಾರೆ. ಕಾಲ ಹೊರಳಿಕೊಳ್ಳುತ್ತಿದೆ. ಜೊತೆಗೆ ತುಳುನಾಡು ಎಂಬ ಪ್ರದೇಶವನ್ನು ದೇಶದ ಇನ್ನೊಂದು ಪರಿಕಲ್ಪನೆಯಾದ ರಾಷ್ಟ್ರ ಪ್ರಭುತ್ವ ಪ್ರಭಾವಿಸುತ್ತಿದೆ. ತುಳುನಾಡಿನ ವಿಭಿನ್ನ ಸಮುದಾಯಗಳ ಜನ ಈಗ, 'ಭಾರತದ ಪ್ರಜೆ' ಎಂಬ ಹೊಸ ಪಾತ್ರಕ್ಕೆ ಅಣಿಯಾಗುತ್ತಿದ್ದಾರೆ. ಅದಕ್ಕೆ ಅನುಗುಣವಾಗಿ ಅವರು ತಮ್ಮ ಹೊಸ ಪ್ರಜಾಸತ್ತಾತ್ಮಕ ಹಕ್ಕೊತ್ತಾಯಗಳನ್ನು ಊರ ದೈವಗಳ ಮುಂದೆ ಇರಿಸುತ್ತಿದ್ದಾರೆ. ತುಳುನಾಡು ದೇಶದ ಇತರ ಎಡೆಗಳಂತೆ ಹೊಸ ಸಮಾಜವೊಂದರ ಹೆರಿಗೆ ನೋವನ್ನು ಅನುಭವಿಸುತ್ತಿದೆ. ಪ್ರಸನ್ನ ಅವರು ಈ ಸಂಕಲನದಲ್ಲಿ ಹೇಳಿರುವುದು ಈ ನೋವು, ಸಂಘರ್ಷ ಮತ್ತು ಹೊಸ ಸಮಾಜದ ಆಶಯಗಳ ಕತೆಯನ್ನು.

ಆದರೆ ನಾನು ಕಷ್ಟಪಟ್ಟು ಹೇಳಲು ಪ್ರಯತ್ನಿಸುತ್ತಿರುವ ಸಂಸ್ಕೃತಿಯ ಕಥನವನ್ನು ಪ್ರಸನ್ನ ಅವರು ಸ್ವಾರಸ್ಯವಾಗಿ, ಸರಳವಾಗಿ ಹೇಳಿದ್ದಾರೆ.

ಸಂಸ್ಕೃತಿಯ ಸಂಘರ್ಷವನ್ನು ಸಮಕಾಲೀನ ಜಾನಪದದ ಹಾಗೆ ಚಿತ್ರಿಸುವ ಲೇಖಕರ ವಿಶಿಷ್ಟ ಶೈಲಿಗೆ ಸಂಕಲನದ ಶೀರ್ಷಿಕೆಯ ಕತೆಯೇ ಒಂದು ನಿದರ್ಶನ. 'ಗಣಪ ಮತ್ತು ಗಾಂಪ' ಕತೆಗೆ ಇಬ್ಬರು ನಾಯಕರು – ಉಚ್ಚಿಲದ ಗ್ರಾಮದೇವತೆ ಗಣಪತಿ ಮತ್ತು ಉಚ್ಚಿಲ ಪೇಟೆಯ ಉಂಡಾಡಿ ಗಾಂಪ. ಗಣಪತಿ ನಮ್ಮ ಅತ್ಯಂತ ಜನಪ್ರಿಯ ದೇವತೆಗಳಲ್ಲಿ ಒಬ್ಬ. ಎಲ್ಲ ಶುಭಕಾರ್ಯಗಳಿಗೂ ಅವನ ನೆನಪೇ ರಕ್ಷೆ. ಅವನಂಥ ಜಾನಪದೀಯ ದೇವತೆ ಇನ್ನೊಬ್ಬನಿಲ್ಲ. ಈ ಕತೆಯ ಇನ್ನೊಂದು ಮುಖ್ಯ ಪಾತ್ರವಾದ ಗಾಂಪನೂ, ನಮ್ಮ ನೂರಾರು ಮಕ್ಕಳ ಕತೆಗಳಲ್ಲಿ, ಹಾಸ್ಯ ನಾಟಕಗಳಲ್ಲಿ ಕಂಡು ಬರುವ ಮುಠ್ಠಾಳರ ಪ್ರತಿ ರೂಪ. ಈ ಮುಠ್ಠಾಳರು ಹಣ ಸಂಪಾದಿಸಿ, ಅದರಲ್ಲಿ ಸ್ವಲ್ಪ ಉಳಿತಾಯ ಮಾಡಿ, ಆರಕ್ಕೆ ಏರದೆ ಮೂರಕ್ಕೆ ಇಳಿಯದೆ ಸಂಸಾರ ತೂಗಿಸಿಕೊಂಡು ಹೋಗುವ ಈ ಜಗತ್ತಿನ ಎಲ್ಲ ಸಂಸಾರವಂದಿಗರ ದ್ರಾಬೆತನಕ್ಕೆ ಒಂದು ಅಳತೆ ಗೋಲು ಈ ಮುಠ್ಠಾಳರು. ಯಶಸ್ಸು, ಸಂಪಾದನೆಗಳ ದೃಷ್ಟಿಯಿಂದ ಪಡಪೋಶಿಗಳು ಎನ್ನಿಸಿದರೂ, ಊರಿನವರಿಗೆಲ್ಲ ಈ ಉಂಡಾಡಿ ಮುಠ್ಠಾಳರು ಜಗತ್ತಿನ ಎಲ್ಲ ಭಾಷೆಗಳ ಸಾಹಿತ್ಯದಲ್ಲೂ ಕಾಣಿಸಿಕೊಳ್ಳುತ್ತಾರೆ. ಪ್ರಸನ್ನ ಕೂಡ ತಮ್ಮ ಕತೆಗಳಲ್ಲಿ ಗಾಂಪನನ್ನು ಸ್ವಾರಸ್ಯವಾಗಿ ಚಿತ್ರಿಸಿದ್ದಾರೆ. ಗಾಂಪ ಮುಠ್ಠಾಳನಾದರೆ, ಮಳೆ ಬೆಳೆ ರಕ್ಷಿಸುವ ಊರ ದೈವ ಗಣಪ ಈಗ ಕಂಟ್ರಾಕ್ಟುದಾರರು ಮತ್ತು ಪುಢಾರಿಗಳ ಇಷ್ಟ ದೈವವಾಗಿದ್ದಾನೆ. ಅವನ ಕಾರಣಿಕವೂ ಸಮಕಾಲೀನಗೊಂಡಿದೆ. ಹಾಗಾಗಿ ಕತೆಯ ಕೊನೆಯಲ್ಲಿ ಗಾಂಪ ಲಕ್ಷಾಂತರ ರುಪಾಯಿ ಬೆಲೆಬಾಳುವ ಉಚ್ಚಿಲ ಮೇಳದ ಗಣಪತಿ ವಿಗ್ರಹವನ್ನು ಲಪಟಾಯಿಸುವುದು ಅಂಥ ದೊಡ್ಡ ಅನಾಹುತ ಎಂದು ಅನ್ನಿಸುವುದೇ ಇಲ್ಲ. ಬದಲಾಗಿ ಗಾಂಪನ ಚಾಲಾಕಿತನವನ್ನೇ ನಾವು ಮೆಚ್ಚಿಕೊಳ್ಳುತ್ತೇವೆ. ಆದರೆ ಈ ಕಥೆಯಲ್ಲಿ ಗಾಂಪ ಒಬ್ಬ ಅಮಾಯಕ ಹೆಣ್ಣಿನ ಶೀಲಭಂಗ ಮಾಡಿ ಆಕೆಯ ಆತ್ಮಹತ್ಯೆಗೆ ಕಾರಣವಾದದ್ದು ನನಗೆ ಅಷ್ಟೇನು ಸಮಂಜಸವಾಗಿ ಕಾಣುವುದಿಲ್ಲ. ಜನಪ್ರಿಯ ಟಿ.ವಿ. ಸೀರಿಯಲ್‌ಗಳ ಪ್ರೇಕ್ಷಕರು, "ಕಳೆದ ಎಪಿಸೋಡ್‌ನಲ್ಲಿ ನಾಯಕಿಗೆ ವಿಷ ಕೊಟ್ಟು ಕೊಲ್ಲಿಸಿದ್ದು ಸರಿಯೇ?" ಎಂದು ನಿರ್ದೇಶಕರನ್ನು ತರಾಟೆಗೆ ತೆಗೆದುಕೊಳ್ಳುವ ಹಾಗೆ ಕತೆಗಾರರನ್ನು ಪ್ರಶ್ನಿಸುವ ಪೈಕಿ ನಾನಲ್ಲ. ಕತೆಯೊಂದರ ಎಲ್ಲಾ ವಿವರಗಳೂ ಕತೆಗಾರನದ್ದೇ ಸೃಷ್ಟಿ ಮತ್ತು ಅವು ಕತೆಯ ಆಕೃತಿಯನ್ನು ಕಟ್ಟುವಂತಹ ಪರಿಕರಗಳು ಎಂಬ ಪರಿಜ್ಞಾನ ನನಗೆ ಇದೆ. ಆದರೆ ನನ್ನ ಆಕ್ಷೇಪ ಇರುವುದು, ಪ್ರಸನ್ನ ಅವರು ಮುಠ್ಠಾಳರ ಚಿತ್ರಣದ ಪರಂಪರೆಯ ಒಂದು ನಿಯಮವನ್ನು ನಿರುದ್ದಿಶ್ಯವಾಗಿ ಮುರಿದಿದ್ದಾರೆ ಎಂಬ ಕಾರಣಕ್ಕೆ. ಮುಠ್ಠಾಳರು ಸಮಾಜದ ಕಣ್ಣಲ್ಲಿ ನಿರುಪಯೋಗಿಗಳು ನಿಜ. ಆದರೆ ಅವರು ಎಂದೂ ಸಮಜದ ನೈತಿಕ ಕಟ್ಟುಪಾಡುಗಳನ್ನು ಮೀರಿ ವರ್ತಿಸುವವರಲ್ಲ. ಅವರು ಊರ ಸಮಸ್ತರಿಗೆ ಪ್ರಿಯರಾಗಿರುವುದು ಅದೇ ಕಾರಣಕ್ಕೆ. ಆದರೆ ಈ ಕತೆಯಲ್ಲಿ ಗಾಂಪ ಊರವರ ಕಣ್ಣಲ್ಲಿ ಮಾತ್ರವಲ್ಲ ನೈತಿಕವಾಗಿ ಕೂಡ ಒಂದು ಹೇಯ ಕೆಲಸ ಮಾಡಿದ್ದಾನೆ. ಉಂಡಾಡಿ ಈಗ

ಕ್ರಿಮಿನಲ್ ಆಗಿದ್ದಾನೆ. ಕತೆಗೆ ಈ ರೂಪಾಂತರವಿಲ್ಲದಿದ್ದರೂ ನಡೆಯುತ್ತಿತ್ತು.

ಲಘು ವೈನೋದಿಕ – ಈ ಸಂಕಲನದ ಹೆಚ್ಚಿನ ಕತೆಗಳ ಧಾಟಿ. ಹಾಗಾಗಿ ತುಳುನಾಡಿನ ಯಕ್ಷಗಾನ, ಭೂತ ದೈವಗಳ ಕೋಲ, ನೇಮ ಮುಂತಾದ ಆಚರಣೆಗಳು ಕರಾವಳಿ ನಿವಾಸಿಗಳ ಮುಂಬಯಿ ವಲಸೆ ಮತ್ತು ಇತ್ತೀಚೆಗೆ ಏರುಗತಿಗೆ ಬಂದಿರುವ ಹಿಂದುತ್ವದ ಚಳುವಳಿ ಮೊದಲಾದ ವಿದ್ಯಮಾನಗಳು ಇಲ್ಲಿ ಚಿತ್ರಿತವಾಗಿರುವುದು ಹಗುರವಾದ, ಲಾಘವದ ಗದ್ಯದಲ್ಲಿ. ನೇರವಾದ ಭರ್ತ್ಸನೆಗೆ ಭಾವುಕ ಲೇಖಕರು ತೊಡಗುವಂತಹ ಪ್ರಸಂಗಗಳಲ್ಲೆಲ್ಲ ಪ್ರಸನ್ನರದು ವ್ಯಂಗ್ಯ, ಕಟಕಿ, ವಕ್ರೋಕ್ತಿಗಳ ಅಡ್ಡಹಾದಿ. ಕಥಾನಕದ ಈ ಶೈಲಿಯಲ್ಲಿ ಕರಾವಳಿಯ ಸಂಸ್ಕೃತಿಯ ಸರಕಾರೀ ವಕ್ತಾರರು ಕೊಡುವ ಏರು ಹುಬ್ಬಿನ ವ್ಯಾಖ್ಯಾನಗಳನ್ನು ಪೂರ್ತಿ ಕೈಬಿಟ್ಟು ಲೇಖಕ ತನ್ನ ಕಾಮನ್ಸೆನ್ಸ್‌ಗೇ ಆತುಕೊಳ್ಳುವುದು ಅನಿವಾರ್ಯವಾಗಿದೆ. ಹಾಗಾಗಿ ಅವರಿಗೆ ಯಕ್ಷಗಾನ, ಭೂತಕೋಲಗಳ ಆಚರಣೆಯ ಕಲಾತ್ಮಕ ಸೌಂದರ್ಯ ಮತ್ತು ಜನರ ಶ್ರದ್ಧೆಗಳ ಜೊತೆ ಜೊತೆಗೇ ಅಲ್ಲಿ ಪ್ರಕಟವಾಗುವ ಜಾತಿ ವೈಷಮ್ಯವೂ ಗೋಚರವಾಗುತ್ತದೆ. ಊರ ದೇವಸ್ಥಾನದ ಜಾತ್ರೆಯಲ್ಲಿ ಊರವರೆಲ್ಲ ಒಟ್ಟು ಸೇರಿದರೂ ಸಮಾರಾಧನೆಯ ಮೊದಲ ಸುತ್ತು ಮಾತ್ರ ಬ್ರಾಹ್ಮಣರಿಗೆ ಎಂದು ಬ್ರಾಹ್ಮಣೇತರರು ಎದುರು ಮಾತಾಡದೇ ಒಪ್ಪಿಕೊಂಡ ಕಾಲ ಒಂದಿತ್ತು. ಅದು ಈಗ ಖಂಡಿತ ಮುಗಿದಿದೆ. ಶ್ರೇಣೀಕೃತ ಸಮಾಜದಲ್ಲಿ ಕೆಳಜಾತಿಯವರ ಮೇಲ್ಮುಖ ಚಲನೆ ಸಹ ಪಂಕ್ತಿ ಭೋಜನದಂತಹ ಒತ್ತಾಯಗಳ ಮುಖಾಂತರವೂ ಅಭಿವ್ಯಕ್ತವಾಗುತ್ತದೆ. ಲೇಖಕರು ಇಂತಹ ಒತ್ತಾಯಗಳ ಹಿಂದಿರುವ ಪ್ರಕಾಸತ್ತಾತ್ಮಕ ಆಶಯಗಳನ್ನು ವಾಚ್ಯವಾಗಿ ಹೇಳದಿದ್ದರೂ, ಓದುಗ ಅವುಗಳನ್ನು ಗುರುತಿಸುವಂತೆ ಮಾಡುವುದರಲ್ಲಿ ಸಫಲರಾಗಿದ್ದಾರೆ.

ಸಂಕಲದ ಒಂದೆರಡು ಕತೆಗಳಲ್ಲಿ ಯಕ್ಷಗಾನ ಮೇಳಗಳ ಜಾತಿ ಪೂರ್ವಾಗ್ರಹವು ಪ್ರಸ್ತಾಪಿತವಾಗಿದೆ. ದಹನ ಕತೆಯಲ್ಲಿ ಬೆಸ್ತರ ಜಾತಿಗೆ ಸೇರಿದ ಪರಿಣತ ಕಲಾವಿದರೊಬ್ಬರಿಗೆ ತನ್ನ ಊರಿನದ್ದೇ ಆದ ಯಕ್ಷಗಾನ ಮೇಳದಲ್ಲಿ ಸ್ಥಾನವಿಲ್ಲ. ಅದಕ್ಕೆ ಅವನ ಜಾತಿ ಅಡ್ಡ ಬರುತ್ತದೆ. ಇಂತಹ ಒಂದು ವಿವಾದ ಎರಡು ವರ್ಷಗಳ ಹಿಂದೆ ಕರಾವಳಿಯಲ್ಲಿ ತಲೆದೋರಿತ್ತು. ಬಿಲ್ಲವ ಕಲಾವಿದರೊಬ್ಬರಿಗೆ ನಾಡಿನಲ್ಲೇ ಹೆಸರುವಾಸಿಯಾಗಿರುವ ಮಂದರ್ತಿ ಮೇಳದಲ್ಲಿ ಅವಕಾಶ ನಿರಾಕರಿಸಲಾಗಿತ್ತು. ಇದು ಒಂದು ದೊಡ್ಡ ವಿವಾದವಾಗಿ ಬೆಳೆದು ನಿಂತಿತು. ಆಗ ಈ ಬಿಲ್ಲವ ಕಲಾವಿದನಿಗೆ ಒಂದು ಸವಾಲು ಎಂಬಂತೆ ಗೋಳಿಗರಡಿ ಮೇಳದಲ್ಲಿ ಬಿಲ್ಲವರು ಹರಿಜನರಿಗೆ ಯಾಕೆ ಪ್ರವೇಶವನ್ನು ನಿರಾಕರಿಸುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಕೆಲವರು ಎತ್ತಿದ್ದರು. ಈ ಪ್ರಶ್ನೆಗಳಿಗೆ ಸರಳ ಉತ್ತರಗಳಿಲ್ಲ. ಯಾರಿಗೂ ನೋವಾಗದಂತಹ ಪರಿಹಾರಗಳಂತೂ ಖಂಡಿತ ಇಲ್ಲ.

ಪ್ರಸನ್ನ ತನ್ನ ಕತೆಗಳಲ್ಲಿ ಜಾತಿ ಸಮಾಜದ ಈ ಸಂಘರ್ಷಗಳ ಕುರಿತು ಸಮಾಜ ಸುಧಾಕರನ ಗತ್ತಿನಲ್ಲೂ ಬರೆಯುವುದಿಲ್ಲ; ಸಲೀಸು ಬರವಣಿಗೆಯ ಕ್ರಾಂತಿಕಾರಿ ಪರಿಹಾರಗಳನ್ನು ಸೂಚಿಸುವುದಿಲ್ಲ. ಹಾಗೆ ನೋಡಿದರೆ ಅವರ ಕತೆಗಳಲ್ಲಿ ಈ ಸಮಾಜದ ರೂಢ ಮೂಲ ಆಚರಣೆಗಳನ್ನು ವಿರೋಧಿಸುವವರು ತಮ್ಮ ಬಂಡಾಯದಲ್ಲಿ ಸೋಲುತ್ತಾರೆ.

‘ದಹನ’ ಕತೆಯಲ್ಲಿ ತನ್ನ ಹಕ್ಕೊತ್ತಾಯದಿಂದ ತನ್ನ ಊರಿನ ಮೇಳದಲ್ಲಿ ಸ್ಥಾನ ಪಡೆದುಕೊಂಡ ಕಲಾವಿದನನ್ನು ಪಿತೂರಿಯ ಮೂಲಕ ರಂಗಸ್ಥಳದಲ್ಲೇ ಸುಟ್ಟು ಕೊಲ್ಲಲಾಗುತ್ತದೆ. ‘ಬಲಿ’ ಕತೆಯ ಬಂಡಾಯಗಾರನಾದ ಸುರೇಶನೂ ಹೀಗೆಯೇ ಮೋಸದಿಂದ ಕೊಲೆಯಾಗುತ್ತಾನೆ. ಆದರೆ ಇವರು ಸೋತರೂ ಇವರು ಎತ್ತಿರುವ ಪ್ರಶ್ನೆಗಳು ಜ್ವಲಂತವಾಗಿವೆ ಎಂಬುದು ಈ ಕತೆಗಳ ಧ್ವನ್ಯರ್ಥ.

ಯಕ್ಷಗಾನ, ಭೂತಕೋಲ ಮುಂತಾದ ಜಾನಪದೀಯ ಸಂಸ್ಕೃತಿಗೆ ಸಂಬಂಧಿಸಿದ ಸಂಗತಿಗಳು ಮಾತ್ರವಲ್ಲ. ಕರಾವಳಿಯ ಧರ್ಮದ ‘ಪ್ರಧಾನ ಧಾರೆ’ (ಯಾರ ಪ್ರಕಾರ ಪ್ರಧಾನ ಧಾರೆ?)ಯಾಗಿರುವ ಹಿಂದೂ ವೈದಿಕ ಧರ್ಮದ ಬಗ್ಗೆಯೂ ಲೇಖಕರದ್ದು ಇದೇ ಬಗೆಯ ತೀಕ್ಷ್ಣ ವಿಮರ್ಶೆಯ ಆದರೆ ಲಘು ವೈನೋದಿಕದ ಧಾಟಿ. ಉದಾಹರಣೆಗೆ ‘ದಹನ’ ಕತೆಯಲ್ಲಿ ಊರಿನ ದೇವಸ್ಥಾನದ ಮುಖ್ಯಸ್ಥರು ಊರಿನ ಮುಖಾರಿಯೂ ಆಗಿರುವ ಪದ್ಮನಾಭ ಉಡುಪರನ್ನು ಲೇಖಕರು ಓದುಗರಿಗೆ ಪರಿಚಯ ಮಾಡಿಸಿಕೊಡುವ ಈ ಮಾತುಗಳನ್ನು ಗಮನಿಸಿ, “ಪದ್ಮಾಬ ಉಡುಪ್ರು ದೇವಸ್ಥಾನದ ಮೈನ್ ಭಟ್ರು. ನಿಜವಾಗಿ ಅವರ ಅಣ್ಣ ತಮ್ಮಂದ್ರಿಗೆ, ಅವ್ರ ಮಕ್ಕಿಗೆ ಪೂಜೆಯಲ್ಲಿ ಹಕ್ಕುಂಟು. ಆದ್ರೆ ಪದ್ಮಾಬ ಉಡುಪ್ರು ಅವ್ರಿಗೆಲ್ಲ ಮಂಗಮಲ್ಕ ಮಾಡಿ ತಾವೇ ಪ್ರತಿ ವರ್ಷ ಪೂಜೆ ಮಾಡಿಕೊಂಡು ಬರ್ತಿದ್ದಾರೆ...... ಅವ್ರಿಗೆ ಎಲ್ಲ ಮಠಗಳ ಲಿಂಕುಂಟು. ಯಾವ ಮಠದಲ್ಲಿ ಸ್ವಾಮಿಗಳು ಗಟ್ಟಿಯಾಗಿ ಹೂಸು ಬಿಟ್ಟರೂ ಉಡುಪ್ರನ್ನು ಬರ್ಲಿಕ್ಕೆ ಹೇಳ್ತಾರೆ. ಉಡುಪ್ರು ಅಲ್ಲಿಗೆ ಹೋಗಿ ಸ್ವಾಮಿಗಳು ಬಿಟ್ಟ ಹೂಸೇ ಶ್ರೇಷ್ಠ ಅಂತ ಪಟಾಕಿ ಬಿಟ್ಟು ಬರ್ತಾರೆ......” ಈ ಉದ್ಧೃತದ ವ್ಯಂಗ್ಯ ಅದರ ಮಠದ ಸ್ವಾಮಿಗಳೇನೂ ಇವರಿಗಿಂತ ಉತ್ತಮರಲ್ಲ ಎನ್ನುವುದೂ ಇದರಲ್ಲಿ ಧ್ವನಿತವಾಗಿದೆ.

ಇಲ್ಲಿನ ಕತೆಗಳ ಚೌಕಟ್ಟಿನಲ್ಲಿ ಕಂಡುಬರುವ ಇನ್ನೊಂದು ಅಂಶ ಎಂದರೆ ಧರ್ಮದ ಕುರಿತಾದ ಜಿಜ್ಞಾಸೆ. ಇಲ್ಲಿ ಧರ್ಮ ಎಂದರೆ ಈಗ ಆಚರಣೆಯಲ್ಲಿರುವ ಧರ್ಮವೇ ಹೊರತು ಅದರ ಅಮೂರ್ತ ಮತ್ತು ಗ್ರಾಂಥಿಕ ವಿಚಾರಗಳಲ್ಲ. ಆಚರಣೆಯಲ್ಲಿರುವ ಧರ್ಮ, ಎಲ್ಲೇ ಆಗಲಿ, ಯಾವ ಕಾಲದಲ್ಲೇ ಆಗಲಿ ಲೋಕ ವ್ಯವಹಾರದಿಂದ ಕಲುಷಿತಗೊಂಡಿರುವಂತಹದ್ದು. ಸಂಕರ ಮತ್ತು ಮಾಲಿನ್ಯ ಆಚರಣೆಯಲ್ಲಿರುವ ಧರ್ಮಗಳಿಗೆ ತಪ್ಪಿಸಿಕೊಳ್ಳಲಾಗದ ಸೋಂಕುಗಳು. ಆದರೆ ಎಲ್ಲ ಮತಧರ್ಮಗಳ ಮೂಲಭೂತವಾದವೂ, ಈ ವಾಸ್ತವವನ್ನು ಅಲ್ಲಗಳೆದು ತಂತಮ್ಮ ಮತಧರ್ಮವನ್ನು ಅದರ ಅತ್ಯಂತ ಪರಿಶುದ್ಧ ಮತ್ತು ತಾತ್ವಿಕ ಸ್ವರೂಪದಲ್ಲೇ ಪರಿಭಾವಿಸಬೇಕು ಎಂದು ಒತ್ತಾಯಿಸುತ್ತವೆ. ಇದರಿಂದ ಕಣ್ಣೆದುರು ಎದ್ದು ಕಾಣುವ ಅನ್ಯಾಯ ಮತ್ತು ಬಗೆ ಬಗೆಯ ಅಸಮಾನತೆಗಳನ್ನು ನಿರಾಕರಿಸಿ ತಮ್ಮ ದೇವರ ಕಣ್ಣಲ್ಲಿ ಎಲ್ಲರೂ ಸಮಾನರು ಅಥವಾ ನಾವೆಲ್ಲ ಹಿಂದು ನಾವೆಲ್ಲ ಒಂದು ಇವೇ ಮುಂತಾದ ಬುರುಡೆ ಹೊಡೆಯಲು ಸಹ ಅನುಕೂಲವಾಗುತ್ತದೆ.

ಈ ಸಂಕಲನದ ಕತೆಗಳಲ್ಲಿ ಜನರ ನಂಬಿಕೆಗಳು ಮತ್ತು ನಡಾವಳಿಕೆಗಳು ಕಥನದ ವಿವರಗಳಾಗಿ ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಲೇಖಕ ಇಲ್ಲಿ ಮುಗ್ಧನಾಗಿ ತಾನು ಕಂಡ

ವಿವರಗಳನ್ನು ಚಿತ್ರಿಸುತ್ತಾನೆ. ಜೊತೆಗೆ ನಿಷ್ಠುರವಾಗಿ ಇಲ್ಲಿನ ಧರ್ಮದಲ್ಲಿ ತನಗೆ ಕಾಣಿಸಿದ್ದು ಇಷ್ಟೇ ಎಂದು ಹೇಳುತ್ತಾನೆ. ಊರಿನ ದೈವ ದೇವರುಗಳ ಕಾರಣಿಕದ ಬಗ್ಗೆ ಜನರು ಆಡಿಕೊಳ್ಳುವ ಮಾತುಗಳನ್ನೂ, ಜೊತೆಗೆ ಪದ್ನಾಬ ಉಡುಪರು ಆತಂಕದಲ್ಲಿ ಹೇಳುವ, "ಕಾಲ ಎಲ್ಲಿಗೆ ಬಂತು ಐತಾಳ್ರೇ........ ನಿನ್ನೆ ಮೊನ್ನೆವರೆಗೆ ನಮ್ಮನ್ನು ನೋಡಿದ್ರೆ ಒಂದು ಮಾರು ದೂರ ನಿಲ್ತಿದ್ದ ಶೂದ್ರರೆಲ್ಲ ಹೇಗೆ ಒಟ್ಟಾದ್ರು ಮಾರ್‍ರೆ......" ಎಂಬ ಮಾತನ್ನೂ ಲೇಖಕರು ಕಿವಿಗೊಟ್ಟು ಕೇಳಿಸಿಕೊಳ್ಳುತ್ತಾರೆ.

"ಚರಿತ್ರೆಯಲ್ಲಿ ನಾವು ಬಯಸುವ ಎಲ್ಲ ಬದಲಾವಣೆಯೂ ಆಗಿಯೇ ತೀರುತ್ತದೆ. ಆದರೆ ನಾವು ಬಯಸುವ ಸಂದರ್ಭದಲ್ಲೂ ಅಲ್ಲ, ನಾವು ಬಯಸುವ ರೀತಿಯಲ್ಲೂ ಅಲ್ಲ." ಎಂದು ಮಾರ್ಕ್ಸ್ ಒಂದೆಡೆ ಹೇಳುತ್ತಾನೆ. 'ಗಣಪ ಮತ್ತು ಗಾಂಪ' ಸಂಕಲನದ ಕತೆಗಳು ಹೇಳುತ್ತಿರುವುದೂ ಬದಲಾವಣೆಯ ಈ ವಿಪರ್ಯಾಸದ ಕತೆಗಳನ್ನೇ. ಇಲ್ಲಿನ ಬ್ರಾಹ್ಮಣ ತನ್ನ ಪರಂಪರಾಗತ ಅಸ್ಮಿತೆಯನ್ನು ಕಳೆದುಕೊಂಡು, ಆಸೆಬುರುಕತನ ಭ್ರಷ್ಟತೆಗಳಲ್ಲಿ ಸಿಲುಕಿ ಹಾಕಿಕೊಂಡಿದ್ದರೂ ತನ್ನ ನಾಯಕ ಸ್ಥಾನವನ್ನು ಬಿಟ್ಟುಕೊಡಲು ತಯಾರಿಲ್ಲ. ಆದರೆ ಸಮಾಜದ ಕೆಳಸ್ತರದಲ್ಲಿ ಚಲನೆ ಕಾಣಿಸಿಕೊಂಡಿದೆ. ದೇವರು ಮತ್ತು ದೈವಗಳಿಂದ ಬಿಡಿಸಿಕೊಂಡು 'ಸ್ವ'ವನ್ನು, ಅರಿಯುವ, ಸ್ವಂತದ ವ್ಯಕ್ತಿತ್ವವನ್ನು ರೂಢಿಸಿಕೊಳ್ಳುವ ಪ್ರಕ್ರಿಯೆ ಇದು. 'ದರ್ಶನ' ಕತೆಯ ಈ ಮಾತುಗಳನ್ನು ನೋಡಿ, "ದೇವಿದ್ದು ಕಾರ್ಣಿಕ ಅಂದರೆ ಕಾರ್ಣಿಕ ದೇವಿಯನ್ನು ಬೈದವ್ರು ಮೊನ್ನೆ ಮೊನ್ನೆ ತಂಕವೂ ರಕ್ತಕಾರಿ ಹೈವೆ ಸರ್ಕಲ್ಲಿನ ಹತ್ತಿರ ಬಿದ್ದು ಸಾಯ್ತಿದ್ರು. ಈಗ ಹೈವೇ ಸರ್ಕಲ್‌ನಲ್ಲಿ ಸೋಡಿಯಂ ಲೈಟು ಹಾಕಿದ್ರಿಂದ ರಕ್ತಕಾರಿ ಸಾಯುವವರ ಸಂಖ್ಯೆ ಕಡಿಮೆಯಾಗಿದೆ....." ಹೆದ್ದಾರಿಗಳಲ್ಲಿ ಸೋಡಿಯಂ ಲೈಟು ಹಾಕಿಸಿರುವ ಒಂದು ವಿವರವೇ ಕತೆಯಲ್ಲಿ ಕಾಲದ ಪಲ್ಲಟದ ಎಲ್ಲ ವಿವರಗಳನ್ನೂ ಧ್ವನಿಸುವಷ್ಟು ಶಕ್ತವಾಗಿದೆ. ಊರಿಗೆ ಚುನಾವಣೆಯ ರಾಜಕೀಯ ಕಾಲಿಟ್ಟದ್ದು, ಶಾಲೆಗಳು ಬಂದದ್ದು, ಹೆಣ್ಣು ಮಕ್ಕಳು ತಾವು ಗಂಡುಮಕ್ಕಳಿಗೆ ಕಡಿಮೆ ಎಂದು ತಮ್ಮ ಮನೆಗಳಲ್ಲಿ ಹಠ ಸಾಧಿಸಿದ್ದು, ಕೆಳಜಾತಿಯವರು ಸಮಾನತೆಗೆ ಒತ್ತಾಯಿಸಿದ್ದು – ಈ ಎಲ್ಲ ವಿದ್ಯಮಾನಗಳ ಜೊತೆಗೆ ಹೆದ್ದಾರಿಗೆ ಸೋಡಿಯಂ ಲೈಟು ಬಂದಿದೆ. ಇದು ದೇವಿಯ ಕಾರಣಿಕ ಇಳಿಮುಖ-ವಾಗಿರುವುದನ್ನು ಲೇಖಕ ವ್ಯಂಗ್ಯದಲ್ಲಿ ಕಾಣಿಸುವ ಒಂದು ವಿಧಾನ. ದೇವಿಯ ಕಾರಣಿಕದ ಬಗ್ಗೆ ಕತೆಯಲ್ಲಿ ಹಲವು ಸ್ತರದ ನಿರೂಪಣೆಗಳಿವೆ. ದೇವಿಯ ಕಾರಣಿಕದ ಬಗ್ಗೆ ಲೇಖಕರು ಸಂದೇಹಿಯಾಗಿದ್ದಾರೆ. ಆದರೆ ಅದನ್ನು ನಂಬುವ ಜನರ ಬಗ್ಗೆ ಅವರಿಗೆ ಪ್ರೀತಿ ಕುತೂಹಲಗಳಿವೆ. ಜನರ ಎಲ್ಲ ನಂಬಿಕೆಯನ್ನೂ ಸ್ವಂತದ ಲಾಭಕ್ಕೆ ದುಡಿಸಿಕೊಳ್ಳಬಲ್ಲ ಬಲ್ಲಾಳರು ಮತ್ತು ಐತಾಳರು ದೇವಿಯ ಕಾರಣಿಕದ ಕುರಿತು ಇತರರಿಗೆ ಒಪ್ಪಿಸುವ ನಿರೂಪಣೆ ಹಾಗೂ ದೇವಿಯಲ್ಲಿ ಜನರಿಗಿರುವ ನಿರ್ವ್ಯಾಜ ನಂಬಿಕೆಯ ನಿರೂಪಣೆಗಳು ಇದಕ್ಕೆ ಉದಾಹರಣೆಯಾಗಿವೆ. ಲೇಖಕರು ಈ ನಂಬಿಕೆಯನ್ನು ತಿರಸ್ಕಾರ ದೃಷ್ಟಿಯಿಂದ ನೋಡುವುದಿಲ್ಲ. ಆದರೆ ಅದರ ದಿನಗಳು ತೀರುತ್ತ ಬಂದಿವೆ ಎಂಬ ಸತ್ಯವನ್ನು ಮಾತ್ರ ಅವರು ಕತೆಯಲ್ಲಿ ಗುರುತಿಸುತ್ತಾರೆ. ಹುಂಬ ಪ್ರಗತಿಶೀಲತೆ ಅವರ ಕತೆಗಳಲ್ಲಿ ಎಲ್ಲಿಯೂ ಕಾಣಿಸದು.

ಪ್ರಸನ್ನ ಅವರ ಕತೆಗಳಲ್ಲಿ ಚಿತ್ರಿತವಾಗಿರುವ ಬ್ರಾಹ್ಮಣ್ಯ ಹಲವು ದೃಷ್ಟಿಗಳಿಂದ ಗಮನಾರ್ಹವಾಗಿದೆ. ಸಂಕಲನದ ಕತೆಗಳಲ್ಲಿ ಧರ್ಮವು ಹೇಗೆ ತನ್ನ ಪ್ರಭಾವಳಿಯಿಂದ ಕಳಚಿಕೊಂಡು ಕೇವಲ ಆಚರಣೆಯಲ್ಲಿರುವ ಧರ್ಮವಾಗಿ ಚಿತ್ರಿತವಾಗಿದೆಯೋ ಹಾಗೆಯೇ ಬ್ರಾಹ್ಮಣ್ಯವೂ ಅದರ ಬೌದ್ಧಿಕತೆ ಮತ್ತು ಆದರ್ಶಗಳಿಂದ ದೂರವಾಗಿ ಕೇವಲ ಕರ್ಮಠ ಬ್ರಾಹ್ಮಣ್ಯದ ರೂಪದಲ್ಲಿ ಚಿತ್ರಿತವಾಗಿದೆ. ಹಪಾಪಿತನ, ಶಾಠ್ಯ, ಗೊಡ್ಡು ಆಚರಣೆಗಳು ಮತ್ತು ಹುಸಿ ಅಹಮಿಕೆಗಳು ಬ್ರಾಹ್ಮಣ್ಯದ ಈ ಸವಕಲು ಸ್ಥಿತಿಯಲ್ಲಿ ಅಂತಃಕರಣ ಕೂಡ ಮಾಯವಾಗಿದೆ. ಉದಾಹರಣೆಗೆ 'ಆರೋಹಣ' ಕತೆಯಲ್ಲಿ ಸುಬ್ರಾಯ ಭಟ್ಟ ಮತ್ತು ಅವನ ದಾಯಾದಿ ವ್ಯಾಸಭಟ್ಟ ಎದುರಾಳಿಗಳು ಒಬ್ಬ ಗೊಡ್ಡು ಸಂಪ್ರದಾಯವಾದಿ, ಇನ್ನೊಬ್ಬ ಸೋಗಲಾಡಿ. ಇಡೀ ಕತೆಯ ಅಷ್ಟೂ ವಿವರಗಳು ಬ್ರಾಹ್ಮಣ್ಯದ ಅಕರಾಳ ವಿಕರಾಳ ಸ್ಥಿತಿಯನ್ನೇ ಪ್ರತಿಬಿಂಬಿಸುತ್ತವೆ. ಸುಬ್ರಾಯ ಭಟ್ಟ ತನ್ನ ಮಗನನ್ನು ಕಳೆದುಕೊಂಡು 'ಬಿಂಗ್ರಿ' ಯಾಗುವುದು, ಅಪನ ಆ ಸ್ಥಿತಿಯಲ್ಲೂ ತೀರಿಕೊಂಡವನ ಉತ್ತರ ಕ್ರಿಯೆಗಾಗಿ ಒತ್ತಾಯಿಸುವ ಮಠದ ಆಚಾರ್ರು, ಸುಬ್ರಾಯ ಭಟ್ಟನ ಮಗಳ ದುರಾಸೆ ಮತ್ತು ಹೊಟ್ಟೆಬಾಕತನ ಎಲ್ಲವೂ ಬ್ರಾಹ್ಮಣ್ಯದ ಅವನತಿಯ ರೂಪಕಗಳಂತಿವೆ. ಕತೆಯ ಕೊನೆಯಲ್ಲಿ ಬರುವ ಸುಬ್ರಾಯ ಭಟ್ಟನ ಬಂಡಾಯ ಕೂಡ ಬಿಡುಗಡೆಯ ಉದಾತ್ತ ಆಶಯಗಳನ್ನು ಪಡೆದದ್ದಲ್ಲ. ಪ್ರೀತಿಯ ಅಂತಃಕರಣದ ಸ್ಪರ್ಶವೇ ಇಲ್ಲದ 'ಬಿಂಗ್ರಿತನ' ಅದು.

'ಕಿಡಿ ಕೆದರಿದಾಗ' ಕತೆಯ ದೊಡ್ಡತಂತ್ರಿಗಳು ಸಾತ್ವಿಕರು. (ಇಡೀ ಸಂಕಲನದಲ್ಲಿ ಇದೊಂದೇ ಈ ಬಗೆಯ ಬ್ರಾಹ್ಮಣ ಪಾತ್ರ !) ಅವರಿಗೆ ತಮ್ಮ ಮೊಮ್ಮಗಳು ಸೌಮ್ಯ ಮುಸ್ಲಿಂ ಹುಡುಗನೊಟ್ಟಿಗೆ ಸಿನಿಮಾಕ್ಕೆ ಹೋಗಿ ಯಾವ ಅಪರಾಧವನ್ನೂ ಮಾಡಿಲ್ಲ ಎಂಬುದು ಗೊತ್ತಿದೆ. ಆದರೆ ಅವರು ನಂಬಿದ ದೈವ ಕೊಟ್ಟ ಪ್ರಸಾದ ಮಾತ್ರ ಅದಕ್ಕೆ ತದ್ವಿರುದ್ಧವಾಗಿದೆ. ದೈವವೇ ನ್ಯಾಯದ ವಿರುದ್ಧ ನಿಂತಿದೆ! ದೊಡ್ಡ ತಂತ್ರಿಯವರ ಧರ್ಮ ಅವರನ್ನು ರಕ್ಷಿಸಲಿಲ್ಲ. ಹಾಗಾಗಿ ಅದನ್ನು ಕೈಬಿಡುವುದು ಅವರಿಗೆ ಅನಿವಾರ್ಯವಾಗುತ್ತದೆ. ಅವರು ತಮ್ಮ ಧರ್ಮವನ್ನು ಕೈಬಿಟ್ಟದ್ದು ಸುಬ್ರಾಯ ಭಟ್ಟರ 'ಬಿಂಗ್ರಿ' ತನಕ್ಕಿಂತ ಹೆಚ್ಚು ಅರ್ಥಪೂರ್ಣವಾಗಿದೆ. ಆದರೂ ಅದು ಒಂದು ಸೋಲು.

'ಬಳ್ಳಿ' ಕತೆಯ ಉಡುಪರು ಇನ್ನೊಂದು ಬಗೆಯಲ್ಲಿ ಸೋತವರು. ಅವರು ಕಾಲದ ವಿರುದ್ಧ ಈಜಲು ಹೋಗಿ ಸೋತವರು. ತಮ್ಮ ಮಗ ಮತ್ತು ಸೊಸೆ ದೂರವಾದರೂ ಅವರು ತಮ್ಮ ಕೊಟ್ಟಿಗೆಯ ದನ ಕರುಗಳನ್ನು ಮಾರುವುದಿಲ್ಲ. ಆ ಕ್ಷಣಕ್ಕೆ ಅವರ ಹಟ ಗೆದ್ದುದ್ದು ನಿಜ. ಆದರೆ ಕತೆ ಮುಗಿಯುವುದು ಆ ಮನೆಯಲ್ಲಿ ಅವರದ್ದೇ ಕಡೆಯ ತಲೆಮಾರು ಎಂಬ ವಿವರಣೆಯೊಂದಿಗೆ! ಬ್ರಾಹ್ಮಣ್ಯದ ಸೋಲು ಮತ್ತು ಅವನತಿಗಳನ್ನು ಪ್ರಸನ್ನ ಯಾವುದೇ ಹಳಪಳಿಕೆ ಅಥವಾ ದುರಾಗ್ರಹಗಳಿಲ್ಲದೆ ವಸ್ತುನಿಷ್ಠವಾಗಿ ಚಿತ್ರಿಸುತ್ತಾರೆ ಎಂಬುದೇ ಈ ಸಂಕಲನದ ಕತೆಗಳ ಹೆಚ್ಚುಗಾರಿಕೆಯಾಗಿದೆ.

ನನ್ನಲ್ಲಿ ಅಭಿಮಾನವಿಟ್ಟು ತಮ್ಮ ಈ ಸಂಕಲನಕ್ಕೆ ನನ್ನಿಂದ ಮುನ್ನುಡಿ ಬರೆಯಿಸಿದ ಪ್ರಸನ್ನ ಅವರ ಪ್ರೀತಿ, ವಿಶ್ವಾಸಗಳಿಗೆ ನಾನು ಕೃತಜ್ಞ.

ಕೇರಳ ಭೇಟಿ : ಮರೆಯುವ ಮುನ್ನದ ಟಿಪ್ಪಣಿ

– ಕೆ.ಪಿ.ಮೃತ್ಯುಂಜಯ

90 ರ ದಶಕದಲ್ಲಿ ಕೇರಳಕ್ಕೆ ಮೊದಲು ನಾನು ಪ್ರವಾಸ ಹೋಗಿದ್ದು ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ (ಡಿ.ಪಿ.ಇ.ಪಿ) ಅಲ್ಲಿ ಹೇಗೆ ಅನುಷ್ಠಾನಗೊಂಡಿದೆ ಎಂಬ ಬಗೆಗಿನ ಅಧ್ಯಯನ ಪ್ರವಾಸ ಅದಾಗಿತ್ತು. ಮಂಡ್ಯ ಜಿಲ್ಲೆಯಿಂದ ಪ್ರವಾಸಗೈದಿದ್ದ ತಂಡದಲ್ಲಿ ಸಾಹಿತಿ ಎಚ್.ಎಲ್. ಕೇಶವಮೂರ್ತಿ ಇವತ್ತು ಸಚಿವರಾಗಿರುವ ಎನ್. ಚಲುವರಾಯಸ್ವಾಮಿ ಇನ್ನಿತರ ಗಣ್ಯರು ತಂಡದಲ್ಲಿ ಇದ್ದರು. ಆಗ ನಾನು ಪತ್ರಕರ್ತನಾಗಿ ಆ ತಂಡದಲ್ಲಿದ್ದು, ಕಾಸರಗೋಡು, ವೈನಾಡು, ಕೋಯಿಕೋಡ್ ಮತ್ತಿತರ ಭಾಗಗಳನ್ನು ಕಂಡುಬಂದಿದ್ದೆ. ಅಕ್ಷರ ಕಲಿಕೆ ಹೇಗೆ ಸಾಗಿದೆ ಎಂಬುದನ್ನು ಆ ಸಂದರ್ಭ ಹತ್ತಿರದಿಂದ ನಿರುಕಿಸಿದ್ದೆ. ಪರಿಶಿಷ್ಟ ಪಂಗಡಗಳ ಮಕ್ಕಳು ಅಕ್ಷರ ಬೆಳಕಿಗೆ ಹೇಗೆ ಕಣ್ಣುಬಿಟ್ಟಿವೆ ಎಂಬುದನ್ನು ಆಗ ನಾನು ಕಣ್ತೆರೆದು ನೋಡಿದ್ದೆ.

ನನ್ನ ಎರಡನೇ ಪ್ರವಾಸ ಕೂಡ ಒಂದು ರೀತಿಯಲ್ಲಿ ಅಕ್ಷರ ಲೋಕಕ್ಕೆ ಸಂಬಂಧಿಸಿದ್ದೇ. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಾಯೋಜಿಸಿದ್ದ ನನ್ನ ಕೇರಳ ಪ್ರವಾಸ ಅಲ್ಲಿಯ ಲೇಖಕರನ್ನು ಭೇಟಿ ಮಾಡಿ ಮಾತಾಡಿಸುವುದಾಗಿತ್ತು. ಅಕಾಡೆಮಿಯಿಂದ ಹೊರ ರಾಜ್ಯ ಪ್ರವಾಸಕ್ಕೆ ನನ್ನನ್ನು ಆಯ್ಕೆಗೊಳಿಸಿ ಪತ್ರ ಬಂದಾಗ, ಥಟ್ಟನೆ ಅಂದುಕೊಂಡದ್ದು ಕೇರಳಕ್ಕೆ ಹೋಗಿ ಬರುವುದೇ ಸರಿ ಎಂದು. ಆಮೇಲೆ ಈ ಕುರಿತಾಗಿ ಅಬ್ದುಲ್ ರಶೀದ್, ಶೂದ್ರ ಶ್ರೀನಿವಾಸ್ ಮತ್ತಿತರರೊಂದಿಗೆ ಮಾತನಾಡಿ, ಅವರುಗಳ ಸೂಚನೆ, ಸಲಹೆ, ಸಹಕಾರ, ಎಲ್ಲವನ್ನೂ ಪಡೆದು ಕಳೆದ ಡಿಸೆಂಬರ್ (2006) ಅಂತ್ಯದಲ್ಲಿ ನೇರ ತಿರುವನಂತಪುರಕ್ಕೆ ತೆರಳಿದೆ.

ಕೇರಳ ಕರ್ನಾಟಕದ ಹಾಗಲ್ಲ. ಮಲೆಯಾಳಿಗಳು ಕನ್ನಡಿಗರ ಹಾಗಲ್ಲ. ಕೇರಳ, ಕರ್ನಾಟಕದ ಹಾಗೆ ಪರ ಬಾಷೆಗಳ ದಾಳಿಗೆ ತುತ್ತಾದಂತಿಲ್ಲ. ಮಲೆಯಾಳಿಗಳು ಕನ್ನಡಿಗರ ಹಾಗೆ ತಾಯಿನುಡಿಯನ್ನು ಬಿಟ್ಟುಕೊಟ್ಟವರಲ್ಲ. ಇಲ್ಲಿಯ ಮುಸ್ಲಿಮರ ಹಾಗೆ ಅಲ್ಲಿಯ ಮುಸ್ಲಿಂಮರು ಉರ್ದು ಅಥವಾ ಬೇರೆ ಭಾಷೆಯನ್ನು ಏನೂ ಮಾತಾಡುವವರಲ್ಲ. ಅಪ್ಪಟ ಮಲೆಯಾಳಂನ್ನೇ ಪಟ್ಟು ಹಿಡಿದವರಂತೆ ಮಾತಾಡುತ್ತಾರೆ. ಇನ್ನು ಮಿಕ್ಕೆಲ್ಲಾ ಮಲೆಯಾಳಿಗಳು ಮಲೆಯಾಳಿಗಳೇ. ತಿರುವನಂತಪುರ ಯಾವತ್ತೂ ಬೆಂಗಳೂರು ಆಗುವುದಿಲ್ಲ–ತನ್ನ ನೆಲದ ಭಾಷೆ ಬಲಿಗೊಟ್ಟು. ಪ್ರಜಾವಾಣಿಯಂಥ ಪತ್ರಿಕೆಯೂ ಅಲ್ಲಿಯ

ಕೆ.ಪಿ.ಮೃತ್ಯುಂಜಯ, ಪ್ರಧಾನ ವರದಿಗಾರರು, 'ಆಂದೋಲನ', ಮಂಡ್ಯ

ಕೆ.ಪಿ.ಎಂ.ರವರು ತುಂಬ ಸೂಕ್ಷ್ಮ ಮನಸ್ಸಿನ ಕವಿ ಮತ್ತು ಪತ್ರಕರ್ತ. ಅವರ ಕೇರಳ ಪ್ರವಾಸದ ದೀರ್ಘ ಲೇಖನದಲ್ಲಿ ಶೂದ್ರಕ್ಕೆ ಹದಿನೈದು ಪುಟ ಬಳಸಿಕೊಂಡಿದ್ದೇನೆ. ಪೂರ್ಣ ಲೇಖನ ಪ್ರಕಟಿಸಲಾಗದ್ದಕ್ಕೆ ವಿಷಾದಿಸುತ್ತೇನೆ. ಕೇರಳ ಮತ್ತು ಅಲ್ಲಿಯ ಲೇಖಕರು ನನಗೆ ತುಂಬ ಪ್ರಿಯರಾದವರು.

– ಶೂದ್ರಶ್ರೀ

ರೈಲು ನಿಲ್ದಾಣದಲ್ಲಿ-ಸಿಗದ ಕಟ್ಟುನಿಟ್ಟಿನ ಮಲೆಯಾಳಂ ಊರಾಗೇ ತಿರುವನಂತಪುರ ಇನ್ನೂ ಬಹಳ ವರ್ಷ ಉಳಿಯಬಹುದೇನೋ. ಆದರೆ, ಮಲೆಯಾಳಿಗಳ ಮಲೆಯಾಳ ಮೋಹದ ಬಗ್ಗೆ ನನಗೆ ಸಿಟ್ಟು ಬಂದಿದ್ದು ತ್ರಿಶೂರಿನಲ್ಲಿ. ಅಲ್ಲಿಯ ರೈಲು ನಿಲ್ದಾಣದ ಮುಂಗಡ ಟಿಕೆಟ್ ಕೌಂಟರಿನಲ್ಲಿ ಇಟ್ಟಂಥ ಮುಂಗಡ ಟಿಕೆಟ್ ಪಡೆಯಲೋಸುಗದ ಅರ್ಜಿಗಳು ಪೂರಾ ಮಲೆಯಾಳಂನಲ್ಲೇ ಇದ್ದು, ನಾನು ತಬ್ಬಿಬ್ಬಾಗುವಂತೆ ಆಯಿತು. ತ್ರಿಭಾಷ ಸೂತ್ರ ಇಲ್ಲಿ ನಾಪತ್ತೆ. ಆ ಅರ್ಜಿಯನ್ನು ತುಂಬಲು ಸಾಲಿನಲ್ಲಿ ನಿಂತಿದ್ದ ಮಲೆಯಾಳಿ ಪ್ರಯಾಣಿಕರನ್ನು ಪೀಡಿಸಿ ಕೇಳಿ ತಿಳಿದುಕೊಳ್ಳಬೇಕಾಯಿತು.

ಅಪರಿಚಿತ ಮಲೆಯಾಳ ದೇಶವನ್ನು ಪರಿಚಯಿಸಿದ್ದು ಗಿರೀಶ್‌ಕುಮಾರ್. ಗಿರೀಶ್‌ಕುಮಾರ್ ನಾಯರ್ ಎಂದು ಕರೆದುಕೊಳ್ಳಬಯಸದ ಗಿರೀಶ್‌ಕುಮಾರ್‌ರವರನ್ನು ನಾನು ಸಂಧಿಸದೇ ಹೋಗಿದ್ದರೆ ಕೇರಳ ಪ್ರವಾಸ ಸ್ವಲ್ಪ ಕಷ್ಟವೇ ಆಗುತ್ತಿತ್ತು. ಮಂಡ್ಯದಲ್ಲಿ ಸಮೂಹ ಸಂವಹನ ವಿಷಯದಲ್ಲಿ ಪದವಿ ಕಲಿಯುತ್ತಿರುವ ಪ್ರತಿಭಾವಂತೆ ಸೀತಾಲಕ್ಷ್ಮಿ ನಾಯರ್. ಉ॥ ಸೀತಾನಾಯರ್ ಅವರು ತಮ್ಮ ಸಬಂಧಿಯಾದ ಗಿರೀಶ್‌ಕುಮಾರ್ ಅವರಿಗೆ ನಾನು ಕೇರಳಕ್ಕೆ ಬರುವ ಬಗ್ಗೆ ನನಗೆ ಅಲ್ಲಿ ಅನುಕೂಲ ಕಲ್ಪಿಸುವ ಬಗ್ಗೆ ಹೇಳಲಾಗಿ, ಗಿರೀಶ್‌ರವರು ಎಲ್ಲಾ ಸೌಕರ್ಯ ಒದಗಿಸಿಕೊಟ್ಟರು. ಅವರ ಸುಂದರ ಕಲಾತ್ಮಕ ಮನೆಯಲ್ಲೇ ಉಳಿದು ಕೇರಳ ಧ್ಯಾನ ಮಾಡುವಂತಾಯಿತು.

ಇಲ್ಲಿ ಗಿರೀಶ್‌ಕುಮಾರ್‌ರವರ ಬಗ್ಗೆ ಹೇಳಲೇಬೇಕು. ತಿರುವನಂತಪುರದ ಬ್ಯಾಂಕೊಂದರಲ್ಲಿ ಉದ್ಯೋಗಿಯಾಗಿರುವ ಗಿರೀಶ್ ಆರೇಳು ವರ್ಷಗಳ ಹಿಂದೆ ಸಂಭವಿಸಿದ ಅಪಘಾತದಲ್ಲಿ ತಮ್ಮ ಎಡಗಾಲು ಕಳೆದುಕೊಂಡರು. ತೊಡೆಯವರೆಗೆ ಮುರಿದುಹೋದ ಆ ಕಾಲಿಗೆ ಕೃತಕ ಅಂಗ ಜೋಡಣೆ ಮಾಡಿಸಿಕೊಂಡ ಬಳಿಕ ಗಿರೀಶ್ ಬುದ್ಧಧ್ಯಾನಾವಸ್ಥೆಗೆ ತಲುಪಿ ಕುಂಚ ಹಿಡಿದವರು. ರೇಖಾ ಚಿತ್ರ ಮತ್ತು ಪೇಯಿಂಟಿಂಗ್‌ನಲ್ಲಿ ತಮ್ಮ ಭಾವಜಗತ್ತನ್ನು ನಿರೂಪಿಸತೊಡಗಿದವರು. ಇವತ್ತು ಗಿರೀಶ್ ಕೇರಳದ ತುಂಬೆಲ್ಲಾ ಖ್ಯಾತಿ ಪಡೆದಿದ್ದಾರೆ. ಬಹುತೇಕ ಎಲ್ಲಾ ಲೇಖಕರು, ಬುದ್ಧಿ ಜೀವಿಗಳು, ನಟ-ಕಲಾವಿದರು ಅವರಿಗೆ ಪರಿಚಿತ. ಹೀಗಾಗಿ ಅವರ ಮೂಲಕ ನಾನು ಭೇಟಿಯಾಗಬೇಕಾಗಿದ್ದ ಲೇಖಕರ ಭೇಟಿಯಾಗುವಂತಾಯಿತು.

ಗಿರೀಶ್‌ರವರ ಮನೆಯಲ್ಲೇ ಆ ಸಂಜೆ ಉರಿವ ತೇಜದಂಥ ಕವಯತ್ರಿ ಅನಿತಾ ತಂಬಿರವರನ್ನು ಸಂದರ್ಶಿಸಿದೆ. ವೃತ್ತಿಯಲ್ಲಿ ಇಂಜಿನಿಯರ್ ಆಗಿರುವ ಅನಿತಾ ಮೊದಲ ನೋಟಕ್ಕೇ ಅತ್ಯಂತ ಪ್ರತಿಭಾವಂತೆ ಎನ್ನಿಸಿತು. ಮಾತಿಗಿಳಿದಾಗ ಅದು ದೃಢಪಟ್ಟಿತು. ಸಂಜೆ ದಣಿದು ಬಂದಿದ್ದ ಅನಿತಾ, ಮುಖಕ್ಕೆ ನೀರು ಸುರಿದುಕೊಂಡು ಒದ್ದೆ ಮುಖದಲ್ಲೇ ಲೋಕಾಭಿರಾಮ ಮಾತಿಗಿಳಿದರು. ಔಪಚಾರಿಕ ಸಂದರ್ಶನ ಬೇಡ ಎಂದೇ ಮಾತಿಗೆ ತೊಡಗಿದ ಅನಿತಾ ಎಂಬ ಹೊಳೆವ ಕಣ್ಣುಗಳ ಕವಯತ್ರಿ ಮಲೆಯಾಳಂ ಕಾವ್ಯ ಕುರಿತು, ಕನ್ನಡದ ಮಮತಾ ಸಾಗರ, ಹಾ.ಮ. ಕನಕ, ಮೊದಲಾದವರನ್ನು ಕುರಿತು ರಭಸದಿಂದ ಮಾತನಾಡಿದರು. ನನ್ನ ಕೋರಿಕೆಯ ಮೇರೆಗೆ ತಮ್ಮ ಕವಿತೆಯ ಸಾಲುಗಳನ್ನು ಭಾವಪೂರ್ಣವಾಗಿ ಹಾಡಿದರು. (ವಾಚನವಲ್ಲ, ಗಾಯನ!) ಇವತ್ತು ಬರೆಯುತ್ತಿರುವ ಜೊತೆಗಾರ ಕವಿಗಳ ಬಗ್ಗೆ ಅನಿತಾ ಉದಾರಭಾವದಲ್ಲಿ ಮಾತನಾಡಿದರು. ಅದರಲ್ಲೂ

ಮುಖ್ಯವಾಗಿ ಅನ್ವರ್ ಅಲಿಯ ಬಗ್ಗೆ. ಹಾಗೆಯೇ ಮುಂದೆ ನಾನು ಅನ್ವರ್ ಭೇಟಿಯಾದಾಗ ಕೂಡ ಅಷ್ಟೆ, ಅನಿತಾ ಬಗ್ಗೆ ಅನ್ವರ್ ಬಹಳ ಮೆಚ್ಚುಗೆಯಿಂದ ಮಾತನಾಡಿದರು. ಇಂಥದೊಂದು ಪರಸ್ಪರ ಮೆಚ್ಚುವ, ನಿರ್ಮತ್ಸರದ ವಾತಾವರಣ ಕನ್ನಡದಲ್ಲಿ ಇದೆಯಾ? ಎಂಬ ಪ್ರಶ್ನೆ ನನ್ನಲ್ಲಿ ಸಹಜ ಹುಟ್ಟಿಕೊಂಡಿತು.

ಎರ್ನಾಕುಲಂನಲ್ಲಿ ನಾನು ಮುಖ್ಯವಾಗಿ ಭೇಟಿಯಾಗಬೇಕೆಂದುಕೊಂಡಿದ್ದು ಸುಪ್ರಸಿದ್ಧ ಕವಯತ್ರಿ, ತೀವ್ರಸಂವೇದನಶೀಲ ಬರಹಗಾರ್ತಿ, ವಿವಾದಿತ ವ್ಯಕ್ತಿಯೂ ಆದ ಮಾಧವಿಕುಟ್ಟಿ ಉ॥ ಕಮಲಾದಾಸ್ ಉ॥ ಕಮಲಾಸುರಯ್ಯಾ ಅವರನ್ನು. ನಾನು ಇಳಿದುಕೊಂಡಿದ್ದ ಹೋಟೆಲ್‌ನಿಂದ ಸುಮಾರು 2.ಕಿ.ಮೀ. ದೂರದಲ್ಲಿ ಕಮಲಾರವರ ಮನೆ ಇದೆ ಎಂದು ಗೊತ್ತಾಗಿ ಖುಷಿಯಾದೆ. ಬಿಸಿಲು ಬಲಿತು ಮಧ್ಯಾಹ್ನವಾದಂತೆ ಎರ್ನಾಕುಲವೆಂಬ ಮಹಾನ್ ಊರು ಇದ್ದಕ್ಕಿದ್ದಂತೆ ಮಂಕಾಗಿ ಹೋಯಿತು. ಕ್ಷಣ ಮಾತ್ರದಲ್ಲಿ ಎಂಬಂತೆ ಎರ್ನಾಕುಲಂ ಬಿಕೋ ಎನ್ನುವಂತಾಯಿತು. ಅಘೋಷಿತ ಕರ್ಫ್ಯೂ ಅಲ್ಲಿ ನೆಲೆಯೂರಿತು. ಎಲ್ಲಾ ವಾಹನಗಳೂ ಸ್ತಬ್ಧಗೊಂಡು ಹೋಟೆಲ್ ಅಂಗಡಿ ಮುಂಗಟ್ಟುಗಳು ಏಕಾಏಕಿ ಬಂದ್ ಆಗಿ ಆತಂಕ ನೆಲೆಯೂರಿತು. ಕವಿಗಳನ್ನು ಭೇಟಿ ಮಾಡಬೇಕೆಂದುಕೊಂಡು ಗಡಿಬಿಡಿಯಲ್ಲಿದ್ದ ನಾನು ತೀವ್ರ ನಿರಾಶೆಗೊಂಡೆ. ಎರ್ನಾಕುಲಂ ಗರಬಡಿದ ಸ್ಥಿತಿ ತಲುಪಲು ಕಾರಣವಾದ ಸಂಗತಿ–ಅಮೆರಿಕಾ ಸದ್ದಾಂಹುಸೇನನ್ನು ಗಲ್ಲಿಗೇರಿಸಿದ್ದು.

ಮುಸ್ಲಿಂಮರು, ಕಮ್ಯುನಿಸ್ಟರೂ ಹೆಚ್ಚಿರುವ ಎರ್ನಾಕುಲಂ ಹಾಗೂ ಕೇರಳದ ಇತರೆ ಭಾಗಗಳಲ್ಲಿ ಸದ್ದಾಂನನ್ನು ಗಲ್ಲಿಗೇರಿಸಿದ ಸಂಗತಿ ಕಾಳ್ಗಿಚ್ಚಿನಂತೆ ಹಬ್ಬಿ ಭಯದ ವಾತಾವರಣವೇ ಸೃಷ್ಟಿಯಾಗಿ ಹೋಗಿತ್ತು. ಅಮೆರಿಕಾ ವಿರೋಧಿಗಳು ಆಕ್ರೋಶಪೂರಿತ ಪ್ರತಿಭಟನೆ ವ್ಯಕ್ತಪಡಿಸಲಾಗಿ ಎಲ್ಲೆಡೆ ಅಸ್ತವ್ಯಸ್ತತೆ ಉಂಟಾಗಿ ಹೋಗಿತ್ತು.

ಈಗ ಅಭಿನಯದಲ್ಲಿ ಬ್ಯುಸಿಯಾಗಿರುವ ಪ್ರಸಿದ್ಧ ಕವಿ, ಕೇರಳ ಸಾಂಸ್ಕೃತಿಕ ರಂಗದಲ್ಲಿ ತಾರೆಯೆನಿಸಿರುವ ಬಾಲಚಂದ್ರನ್ ಚುಳ್ಳಿಕ್ಕಾಡ್ ಅವರನ್ನು ನಾನು ಭೇಟಿಯಾಗುವುದು ಕಷ್ಟ ಸಾಧ್ಯ ಎಂಬ ಅಭಿಪ್ರಾಯ ಗಿರೀಶ್ ಅವರಿಂದ ವ್ಯಕ್ತವಾಗಿತ್ತು. ಆದರೆ, ನನ್ನನ್ನು ಪರಿಚಯಿಸಿದ್ದ ಚುಳ್ಳಿಕ್ಕಾಡ್‌ರವರ ಪತ್ನಿ, ಮಲೆಯಾಳಂನಲ್ಲಿ ಪ್ರಸಿದ್ಧ ಕವಯತ್ರಿಯೂ ಆದ ವಿಜಯಲಕ್ಷ್ಮಿಯವರೊಂದಿಗೆ ನಾನು ಎರ್ನಾಕುಲಂಗೆ ಬಂದಿಳಿದ ಕೂಡಲೇ ಮಾತನಾಡಿದ್ದೆ. ಅವರೇ ನನಗೆ ಕಮಲಾದಾಸ್‌ರವರ ಮನೆ ಇತ್ಯಾದಿಯ ಬಗ್ಗೆ ಮಾಹಿತಿ ನೀಡಿದ್ದರು. ಆದರೆ, ಮಧ್ಯಾಹ್ನದ ಹೊತ್ತಿಗೆ ಕವಿದ ಆತಂಕದ ಕಾರ್ಮೋಡದಲ್ಲಿ ಕಮಲಾರವರನ್ನು ಭೇಟಿಯಾಗುವ ಆಸೆ ಕಮರಿಹೋಯಿತು. ನಮ್ಮ ಪ್ರತಿಭಾ ನಂದಕುಮಾರ್ ಅವರ ಹಾಗೇ ಬರೆಯುತ್ತಾರೆಂದು ಅಂದಾಜಿಸಬಹುದಾದ ಮತ್ತೊಬ್ಬ ಪ್ರಸಿದ್ಧ ಕವಯತ್ರಿ ವಿ.ಎಂ. ಗಿರಿಜರವರನ್ನು ಭೇಟಿಯಾಗಲು ವಾಹನ ವ್ಯವಸ್ಥೆ ಇಲ್ಲದೆ ಹೋಯಿತು. ಆದಾಗ್ಯೂ ದೂರವಾಣಿ ಮೂಲಕ ಅವರೊಂದಿಗೆ ಮಲೆಯಾಳಂ ಕಾವ್ಯ ಕುರಿತು ಚರ್ಚಿಸಿದೆ.

ನಾನು ಇಳಿದುಕೊಂಡಿದ್ದ ಹೋಟೆಲಿನ ಹಿಂಭಾಗದಲ್ಲೇ ಇದ್ದ ಗೋವಿಂದಪಟ್ಟಣಂ ಫ್ಲ್ಯಾಟ್‌ನಲ್ಲಿ ವಾಸವಾಗಿರುವ ಹಿರಿಯ ಕಾದಂಬರಿಕಾರ ಇ. ಹರಿಕುಮಾರ್ ಅವರ ಮನೆಗೆ ಮಾತನಾಡಿಸಿದ್ದು ಹಗುರವೆನಿಸಿತು. ಇವತ್ತಿನ ಮಲೆಯಾಳಂ ಕಾವ್ಯದ ಬಗ್ಗೆ ಅವರಿಗೆ ಅಂತಹ ಮೆಚ್ಚುಗೆ ಭಾವ ಇದ್ದಂತಿರಲಿಲ್ಲ. ಆದರೆ, ಗದ್ಯ ಬರವಣಿಗೆ ಬಗ್ಗೆ

ಅವರಲ್ಲಿ ಧನಾತ್ಮಕ ಅಭಿಪ್ರಾಯ ಇತ್ತು. ಕಮಲಾದಾಸ್‌ರವರ ಬಗ್ಗೆ ಅಪಾರ ಗೌರವವನ್ನು ಈ ಕಾದಂಬರಿಕಾರ ವ್ಯಕ್ತಪಡಿಸಿದರು. ಪ್ರೀತಿ ಪೂರ್ವಕ ಆತಿಥ್ಯ ಸ್ವೀಕರಿಸಿ ಹೊರಹೊರಟಾಗ, ಈಗ ಈ ರಸ್ತೆಗಳಲ್ಲಿ ಅಡ್ಡಾಡಬೇಡಿ. ಜನ ಸರಿಯಿಲ್ಲ. ತಲೆಕೆಟ್ಟವರಿರುತ್ತಾರೆ. ಗಲಾಟೆಯಾದರೂ ಆಗಬಹುದು ಎಂದು ಎರ್ನಾಕುಲಂನ ಪರಿಸ್ಥಿತಿಯ ಬಗ್ಗೆ ಎಚ್ಚರಿಕೆಯನ್ನು ಹರಿಕುಮಾರ್ ನೀಡಿದರು. ಸಂಜೆ ರಾತ್ರಿಗೆ ತಿರುಗುವ ಹೊತ್ತಿಗೆ ಎರ್ನಾಕುಲಂ ನಿಧಾನಕ್ಕೆ ಆತಂಕ ಕಳೆದುಕೊಂಡಿತು.

ಎರ್ನಾಕುಲಂ ತ್ರಿಶೂಲಿಗೆ ಬಂದಿಳಿದು ಮೊದಲು ಕರೆ ಮಾಡಿದ್ದು ತುಂಬಾ ಹೆಸರುವಾಸಿಯಾಗಿರುವ ಕವಿ ಅನ್ವರ್‌ಅಲಿಗೆ, ಅಲಿ ತಿಳಿಸಿದಂತೆ ಮ್ಯೂಸಿಯಂ ಬಳಿ ಲಗೇಜಿನೊಂದಿಗೆ ನಿಂತು ಕೆಲಹೊತ್ತು ಕಾದಬಳಿಕ ಪಂಚೆಧಾರಿ ಅಲಿ ಪ್ರತ್ಯಕ್ಷರಾಗಿ ನನ್ನನ್ನು ಮನೆಗೆ ಕರೆದೊಯ್ದರು. ಇಬ್ಬರು ಪುಟ್ಟ ಮಕ್ಕಳು, ಮಡದಿಯೊಂದಿಗೆ ಉಲ್ಲಾಸದಿಂದಿರುವ ಅಲಿ, ಅವತ್ತು ಬಕ್ರೀದ್ಗೆ ನನ್ನನ್ನು ಅತಿಥಿಯಾಗಿಸಿ ಕಾವ್ಯಹಬ್ಬವನ್ನು ಉಣಬಡಿಸಿದರು. ಶಿವ (ಎಚ್.ಎಸ್. ಶಿವಪ್ರಕಾಶ್), ಬಿ.ವಿ.ಕಾರಂತ, ರಶೀದ್, ಮೊಗ್ಗಳ್ಳಿ, ಮೊದಲಾದ ಕನ್ನಡ ಲೇಖಕರ ಬಗ್ಗೆ ಮಾತನಾಡಿದ ಅನ್ವರ್ ಶಿವಪ್ರಕಾಶ್‌ರವರು ಅನುವಾದಿಸಿರುವ ಮುಸ್ತಾಫ ಎಂಬ ಕವಿತೆಯನ್ನು ನನ್ನಿಂದ ಓದಿಸಿ ಅಲಿ ಕನ್ನಡದ ಸೊಬಗನ್ನು ಸವಿದರು. ಅಲಿ ನನ್ನ ಮುಂದೆ ಹರಿಯಬಿಟ್ಟಿದ್ದು ದೀರ್ಘ ಸಾಹಿತ್ಯಭರಿತ ಮಾತಿನ ಯಾತ್ರೆಯನ್ನು.

ಅನ್ವರ್ ಅಲಿ ಅನಂತರ ಸಂಜೆ ಕೇರಳ ಸಾಹಿತ್ಯ ಅಕಾಡೆಮಿ ತಾಣದಲ್ಲಿ ನನ್ನನ್ನು ಒಪ್ಪಿಸಿದ್ದು–ನೋಡಲು ವಿಚಿತ್ರವೆನಿಸುವ ತರುಣ ಟೋನಿ ಅವರಲ್ಲಿ. ಸ್ಟಾರ್ ಹೋಟೆಲ್‌ನ ಲಾನ್‌ನಲ್ಲಿ ಸಂಜೆ ಸವಿಯಾದ ಮಾತುಕತೆ. ಅದರ ಜೊತೆಗೆ ಮೀನಿನ ನಂಚಿಕೆ. ವಿಚಿತ್ರವೆನಿಸುವ ಆಪ್ತ ಹುಡುಗ ಟೋನಿ ಬೆಚ್ಚನೆಯ ಅನುಭವ ತುಂಬಿದರು.

ನಾನು ಬೆಂಗಳೂರಿನಿಂದ ತಿರುವನಂತಪುರಕ್ಕೆ ಹೊರಡುವ ಸಂದರ್ಭ ಕವಯತ್ರಿ ಅಭಿನವದ ಪಿ.ಚಂದ್ರಿಕ ನನಗೆ ನೀಡಿದ ಮಲೆಯಾಳಂ ಕವಿತೆಗಳ ವಿಶೇಷ ಸಂಚಿಕೆಯನ್ನು ಕೊಟ್ಟದ್ದು ಉಪಕಾರವಾಯಿತು. ಎಚ್.ಎಸ್. ಶಿವಪ್ರಕಾಶ್‌ರವರೊಂದಿಗೆ ಕೇರಳದ ಎಂ. ಎ. ಪ್ರದಿಪ್‌ಕುಮಾರ್ ಗೌರವ ಸಂಪಾದಕತ್ವದಲ್ಲಿ ಈ ಸಂಚಿಕೆ ಹೊರಬಂದಿದ್ದನ್ನು ಈ ಮುಂಚೆ ನಾನು ಗಮನಿಸಿರಲಿಲ್ಲ. ಅನಿತಾ, ಅನ್ವರ್, ಟೋನಿ ಮೊದಲಾದವರನ್ನು ಕನ್ನಡಕ್ಕೆ ತಂದಿರುವ ಪ್ರದೀಪ್‌ಕುಮಾರ್ ಮಲೆಯಾಳಂನ ಹೊಸ ಕಾವ್ಯದ ಬಗ್ಗೆ, ತರುಣ ಕವಿಗಳ ಬಗ್ಗೆ ಬರೆದಿರುವ ಕೆಲವು ಮಾತುಗಳು ಸ್ವತಃ ಅನ್ವರ್, ಅನಿತಾ, ಟೋನಿ ಅವರಿಗೆ ಅಪಥ್ಯ ಉಂಟುಮಾಡಿದೆ. ಈ ಭಾವವನ್ನು ಈ ಕವಿಗಳು ಮಾತುಕತೆಯ ಸಂದರ್ಭ ವ್ಯಕ್ತಪಡಿಸಿದರು.

ಟೋನಿ ಭೇಟಿ ಬಳಿಕ ಮಲೆಯಾಳಂ ಕವಿತೆಗೆ ಹೊಸ ಅರ್ಥ ವಿನ್ಯಾಸ ತಂದುಕೊಟ್ಟವರಲ್ಲಿ ಒಬ್ಬರಾದ ಹಿರಿಯ ಕ್ರಾಂತಿಕಾರಿ ಕವಿ ಕೆ.ಜಿ. ಶಂಕರ ಪಿಳ್ಳೈ ಅವರನ್ನು ಅಕಾಡೆಮಿಯಲ್ಲಿ ಸಂಧಿಸಿದ್ದು ಮಹತ್ವಪೂರ್ಣ ಕ್ಷಣ. ಮಲೆಯಾಳಂ ಕಾವ್ಯಚರಿತ್ರೆಯಲ್ಲಿ ಮೈಲುಗಲ್ಲುಗಳಲ್ಲೊಂದೆನಿಸಿದ ಬಂಗಾಲ್ ಕವಿತೆಯನ್ನು ಬರೆದ ಶಂಕರ ಪಿಳ್ಳೈ ಅಕಾಡೆಮಿಯ ಸಭಾಂಗಣದಲ್ಲಿ ಯಾವುದೋ ಕಾರ್ಯಕ್ರಮ ಮುಗಿದ ಬಳಿಕ ನಗುನಗುತ್ತಲೇ ನನ್ನ ಜೊತೆಗೆ ಮಾತಿಗಿಳಿದರು. ತುಂಬ ಸೌಜನ್ಯ ಮೂರ್ತಿ ಪಿಳ್ಳೈ ಮನ ತೆರೆದು, ಹೃದಯಕ್ಕೆ

ತಟ್ಟುವ ಹಾಗೆ ಮಾತನಾಡುತ್ತಾ ಆಧುನಿಕ ಮಲೆಯಾಳದ ಸ್ಥಿತಿಗತಿ, ಮುಂದಿನ ಅದರ ಭವಿಷ್ಯ ಜಾಗತೀಕರಣ ಇತ್ಯಾದಿಯ ಬಗ್ಗೆ ಒಳನೋಟ ನೀಡಿದರು. ಈ ಸಂದರ್ಭ ಅವರು ಶಿವಪ್ರಕಾಶ್‌ರನ್ನು ನೆನೆದರು.

ಹೋತದ ಗಡ್ಡದ ದಢೂತಿ ವ್ಯಕ್ತಿಯೊಬ್ಬರನ್ನು ಟೋನಿ ಪರಿಚಯಿಸಿದರು. ಕವಿ, ಶಿಲ್ಪಕಲಾವಿದ, ಚಿತ್ರ ನಿರ್ಮಾಪಕ ಎಲ್ಲವೂ ಆದ ಸಿ.ಜಿ. ಪ್ರಿನ್ಸ್ ಆ ವ್ಯಕ್ತಿ. ಇವತ್ತಿನ ಕೇರಳ ಸಮಾಜ, ಸಾಹಿತ್ಯ, ಮೌಲ್ಯಗಳ ಪಲ್ಲಟ, ವಿಮರ್ಶೆ, ಲಾಬಿ, ಸಿನಿಮಾ, ಜಾಗತೀಕರಣ, ಇತ್ಯಾದಿ ಬಗ್ಗೆ ಸುಡುಸುಡು ಮಾತನ್ನಾಡಿದರು ಪ್ರಿನ್ಸ್.

ವಿದ್ಯೆಯಲ್ಲಿ ಮುಂದಿರುವ ಕ್ರಿಯಶೀಲಾ ಜನರುಳ್ಳ ಕೇರಳ ಆಧುನಿಕತೆಗೆ ತೆರೆದುಕೊಂಡ ಬಗೆ ವಿಶಿಷ್ಟವಾದುದು. ಒಟ್ಟೂ ಭಾರತೀಯರ ಪೈಕಿ ಈ ಮಲೆಯಾಳಿಗಳು ಅತಿ ಭಿನ್ನ ಜನರು. ಬಾಷಾ ಪ್ರೇಮ, ಸಂಸ್ಕೃತಿ ಆಚರಣೆ, ಜೀವನದಲ್ಲಿ ಮುಂದೆ ಬರಲು ವಲಸೆ ಹೋಗುವ ಗುಣ ಇವೆಲ್ಲಾ ಮಲೆಯಾಳಿಗಳನ್ನು ಪ್ರತ್ಯೇಕ ನೆಲೆಯಲ್ಲಿ ನಿಲ್ಲಿಸುತ್ತದೆ.

ಬಹುಮುಖ್ಯವಾಗಿ ಎಂ.ಟಿ.ವಿ. ನಾಯರ್ ಹಾಗೂ ಕಮಲಾದಾಸ್‌ರವರನ್ನು ನೋಡಲಾಗದಿದ್ದರೂ ಅವರುಗಳ ಎಲ್ಲ ಬಗೆಯ ಪ್ರಭಾವಗಳ ನೆಲೆಗಳಲ್ಲಿ ಕುರಿತು ಎದ್ದ ಅನುಭವ ಕೇರಳ ಸಾಹಿತ್ಯ ಪ್ರವಾಸದಿಂದ ಒದಗಿ ಬಂದಿತು. ನಾರಾಯಣ ಗುರುವಿನ ನಾಡಲ್ಲಿ ಓಡಾಡಿ ಬಂದಿದ್ದು ಅನಂದವನ್ನು ತುಂಬಿತು.

ಅನಿತಾ, ಅನ್ವರ್ ಮತ್ತಿತರನ್ನು ಮಾತನಾಡಿಸಿರುವುದು ಮುಂದಿನ ಭಾಗದಲ್ಲಿದೆ. ಧ್ವನಿಸುರಳಿಯಲ್ಲಿ ಅಡಕವಾಗಿದ್ದನ್ನು ಬರಹರೂಪಕ್ಕಿಳಿಸಿಕೊಟ್ಟ ಸೀತಾರವರಿಗೆ ಕೃತಜ್ಞತೆ ಸಲ್ಲಿಸಬಯಸುವೆ.

ಕೇರಳದ ಸಮಕಾಲೀನ ಸಾಹಿತ್ಯ ಕುರಿತು ಸಂದರ್ಶನದ ಮೂಲಕ ಒಂದು ಕಿರು ಅಧ್ಯಯನ.

ಶ್ರೀಮತಿ ಅನಿತ ತಂಬಿ:

ಗಿರಿಜ

* ಒಬ್ಬ ಉತ್ತಮ ಕವಯತ್ರಿಯಾಗಿ ನೀವು ಮಲಯಾಳಂ ಕಾವ್ಯವನ್ನು ಹೇಗೆ ವಿವರಿಸುತ್ತೀರಿ?

ಕಾವ್ಯವೆಂದರೆ ನಾನು ನನ್ನ ಸುತ್ತಲಿನ ಪ್ರಪಂಚವನ್ನು ವೀಕ್ಷಿಸುವ ವಿಧಾನ, ಅದರೊಂದಿಗಿನ ನನ್ನ ಸಂಬಂಧ ಹಾಗೂ ರಾಜಕೀಯ ವಾಸ್ತವಗಳನ್ನು ವಿಮರ್ಶಿಸುವ ರೀತಿ.

* ಕನ್ನಡ, ತಮಿಳು, ಬಂಗಾಳಿ ಇತ್ಯಾದಿ ಭಾರತೀಯ ಭಾಷೆಯ ಸಾಹಿತ್ಯದ ನಡುವೆ ಮಲಯಾಳಂ ಸಾಹಿತ್ಯದ ಸ್ಥಾನ ಹೇಗಿದೆ ?

ಅದು ನಿಜಕ್ಕೂ ನನಗೆ ಕಷ್ಟಕರವಾದ ಪ್ರಶ್ನೆ ಏಕೆಂದರೆ ನನಗೆ ಇಂದಿನ ಸಮಕಾಲೀನ ಭಾರತೀಯ ಸಾಹಿತ್ಯದ ಬಗ್ಗ ಅರಿವು ಕಡಿಮೆ. ಸಮಕಾಲೀನವಾದ ಪ್ರಾಪಂಚಿಕ ಸಾಹಿತ್ಯವನ್ನು

ವಿವರಿಸಬಹುದಾದರೂ ಸಮಕಾಲೀನವಾದ ಭಾರತೀಯ ಸಾಹಿತ್ಯವನ್ನು ವಿವರಿಸುವುದು ಕಷ್ಟಕರ. ನನಗೆ ತಮಿಳು ಸಾಹಿತ್ಯದ ಕುರಿತು ಅರಿವಿದೆ. ಆದರೆ ಆಧುನಿಕ ಕನ್ನಡ ಹಾಗೂ ತೆಲಗು ಸಾಹಿತ್ಯದ ಬಗ್ಗೆ ತಿಳಿದಿಲ್ಲ.

* ನನಗನಿಸುವ ಪ್ರಕಾರ ಕೇರಳದಲ್ಲಿ ಯಾವುದೇ ಭಕ್ತಿ ಚಳುವಳಿಗಳ ಪ್ರಭಾವವಿಲ್ಲ. ನಿಮ್ಮ ಅಭಿಪ್ರಾಯ ?

ಹೌದು ಭಕ್ತಿ ಚಳುವಳಿಯ ಪ್ರಭಾವ 13 ಶತಮಾನದಲ್ಲಿ ಹಾಗೂ 14ನೇ ಶತಮಾನದ ಆರಂಭದಲ್ಲಿ ಇತ್ತು. ಅಂದಿನ ಕಾಲದಲ್ಲಿ ಎಳುತ್ತಚ್ಚನ್, ಕೂಂದಾನಂ ಇತ್ಯಾದಿ ಕವಿಗಳಿದ್ದರು. ಆದರೆ ಕನ್ನಡ ಸಾಹಿತ್ಯದಷ್ಟು ಪ್ರಭಾವಿತವಾಗಿರಲಿಲ್ಲ. ಕನ್ನಡದಲ್ಲಿ ವಚನ ಸಾಹಿತ್ಯವಿತ್ತು ಆದರೆ ಅಂತಹ ಅದ್ಭುತ ಪ್ರಭಾವ ಮಲಯಾಳಂನಲ್ಲಿ ಇರಲಿಲ್ಲವೆಂಬುದು ಸತ್ಯ.

* ಕೋಮುವಾದ ಹಾಗೂ ಜಾಗತಿಕ ಭಯೋತ್ಪಾದನೆಯು ಮಲಯಾಳಿ ಸಾಹಿತ್ಯ ಹಾಗೂ ಮಲಯಾಳಿ ಜೀವನದ ಮೇಲೆ ಬೀರುತ್ತಿರುವ ಪ್ರಭಾವವೇನು ?

ವಾಸ್ತವದಲ್ಲಿ ನಾವು ಬಹುಪಾಲು ಕವಿಗಳ ಆಶಯವೂ ಕೋಮುವಾದ ಹಾಗೂ ಜಾಗತೀಕರಣ, ಜಾಗತೀಕ ಭಯೋತ್ಪಾದನೆಗಳನ್ನು ವಿರೋಧಿಸುವುದೇ ಆಗಿದೆ. ಪಿ ಎಸ್. ಗೋಪಕೃಷ್ಣನ್, ಟಿ.ಪಿ ರಾಜೀವನ್–ಇಂತಹ ಹಲವರು ರಾಜಕೀಯ ಸಾಹಿತ್ಯವನ್ನೇ ಕೇಂದ್ರೀಕರಿಸಿದವರು. ಆದರೆ, ಕವಿಗಳು ಅವಶ್ಯವಿರುವ ಮಟ್ಟಿಗೆ ಜನರ ಮೇಲೆ ಪ್ರಭಾವ ಬೀರುತ್ತಿದ್ದೇವೆ ಎಂದು ನನಗೆ ಅನ್ನಿಸುತ್ತಿಲ್ಲ. ಆದರೆ 19ನೆಯ ಶತನಮಾನದಲ್ಲಿ ಅಥವಾ ಸ್ವಾತಂತ್ರ್ಯ ಸಂಗ್ರಾಮದ ಕಾಲಘಟ್ಟದಲ್ಲಿ ತಮಿಳುನಾಡಿನಂತೆಯೇ ಕೇರಳದಲ್ಲಿ ವಳ್ಳತೋಳ್, ಕುಮಾರನ್ ಆಶಾನ್ ಹಲವಾರು ಜನರ ಮೇಲೆ ಪ್ರಭಾವ ಬೀರಿದ್ದಾರೆ. ಅವರು ಬಳಸುತ್ತಿದ್ದ ಶಬ್ದಗಳು ನೇರವಾಗಿ ಸಾಮಾನ್ಯ ಮನುಷ್ಯರ ಹೃದಯಕ್ಕೇ ನಾಟುತ್ತವೆ. ಆದರೆ ಇಂದಿನ ಸಾಹಿತ್ಯದಲ್ಲಿ ಅದರ ಕೊರತೆ ಎದ್ದು ಕಾಣುತ್ತದೆ. ಸಾಮಾನ್ಯವಾಗಿ ಸಾಹಿತ್ಯವೆಂಬುದು ಜನರ ಮೇಲೆ ಪ್ರಭಾವ ಬೀರಬೇಕು. ಆದರೆ, ಇಂದು ಅದರ ಸಾಧ್ಯತೆ ಕಡಿಮೆ. ಟಿ.ವಿ., ಸಿನೆಮಾದಂಥ ದೃಶ್ಯ ಮಾಧ್ಯಮಗಳು ಅಕ್ಷರ ಮಾಧ್ಯಮಕ್ಕಿಂತ ಹೆಚ್ಚು ಪರಿಣಾಮ ಬೀರುತ್ತಿವೆ.

* ನೀವು ಕವಯತ್ರಿಯಾಗಿ ಮಲಯಳಂನ ಸ್ತ್ರೀವಾದಿ ಕಾವ್ಯದ ಮೇಲೆ ಹಾಗೂ ಕಮಲಾ ದಾಸ್ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಕಮಲಾದಾಸ್ ನನಗೆ ಹೆಚ್ಚು ಮೆಚ್ಚುಗೆಯಾದವರು. ಅವರ ಪ್ರಭಾವ ನನ್ನ ಬರವಣಿಗೆಯ ಮೇಲೂ ಆಗಿದೆ. ನಾನು ಮಾತ್ರವಲ್ಲದೆ ಬಹುಪಾಲು ಬರಹಗಾರ್ತಿಯರು ಅವರಿಂದ ಪ್ರಭಾವಿತರಾಗಿದ್ದಾರೆ. ಅವರು ದಿಟ್ಟ ಮಹಿಳೆ. ಈಗವರಿಗೆ ವಯಸ್ಸಾಗಿರಬಹುದು. ಆದರೂ ಯುವ ಬರಹಗಾರರಿಗಿಂತಲೂ ಹೆಚ್ಚು ಧೈರ್ಯ ಹಾಗೂ ಕೆಚ್ಚೆದೆ ಅವರಿಗಿದೆ. ಅವರ ಮನಸ್ಸೇಚ್ಛೆಯಂತೆ ಮತ ಬದಲಿಸಿದರು. ಅವರ ಬರವಣಿಗೆಯಲ್ಲೂ, ಅವರ ದೃಷ್ಟಿಕೋನದಲ್ಲಿಯೂ, ಅವರ ಬದುಕಿನಲ್ಲಿಯೂ ಕೆಚ್ಚೆದೆಯ ಮನಸ್ಥೈರ್ಯ ಎದ್ದು ಕಾಣುತ್ತದೆ. ಕಾವ್ಯದ ಮೂಲಕ ನೇರವಾಗಿ ಮನಸ್ಸನ್ನು ಬಿಚ್ಚಿಡಲು ಅವರಿಗೆ ಮಾತ್ರ ಸಾಧ್ಯ. ಮಹಿಳೆ ಹಾಗೂ ಪುರುಷ ಸಂಬಂಧಗಳು ಹಾಗೂ ಇನ್ನಿತರ ಜೀವನ ಮೌಲ್ಯಗಳ ಬಗ್ಗೆ ಧೀರತನದಿಂದಲೇ ವಿವರಿಸಿದ್ದಾರೆ. ಅವರ ಬರವಣಿಗೆಯೂ ವ್ಯತ್ಯಾಸವಾಗಿದೆ.

ಮಾತ್ರವಲ್ಲದೆ ಸ್ತ್ರೀವಾದದಲ್ಲಿಯೂ, ಅವರು ಹೀಗೆಯೇ, ನಮ್ಮಲ್ಲಿ ಹಲವು ಕವಯತ್ರಿಗಳಿದ್ದಾರೆ. ಗ್ರೇಸಿ, ವತ್ಸಲ, ರೋಸ್ ಮೇರಿ ಇವರುಗಳು ಹೇಳುವುದು ನಾವು ಸ್ತ್ರೀವಾದಿಗಳೇ ಎಂದು. ಆದರೆ ಅವರ ಬರವಣಿಗೆಯಲ್ಲಿ ಸ್ತ್ರೀವಾದ ಪ್ರತಿಫಲಿಸುತ್ತದೆ. ಅವರ ಬರವಣಿಗೆಗಳು ಕೇರಳ ಮಹಿಳೆಯ ಜೀವನ ರೀತಿಗಳ ಮಹಿಳೆಯರ ಸಂಪ್ರದಾಯಗಳು, ಅವರ ವ್ಯತ್ಯಾಸವಾದ ಜೀವನ ರೀತಿಯನ್ನು ಕೇಂದ್ರೀಕರಿಸಿದೆ. ಒಂದು ರೀತಿಯಲ್ಲಿ ನೋಡಿದರೆ, ಸ್ತ್ರೀವಾದವೆಂಬುದು ಕೇರಳದಲ್ಲಿ ಕೇವಲ ನಗರದ ಅಥವಾ ಮಧ್ಯಮವರ್ಗದ ಮಹಿಳೆಯರ ಮೇಲೆ ಮಾತ್ರ ಪ್ರಭಾವ ಬೀರಿಲ್ಲ. ಬದಲಾಗಿ, ರಾಜ್ಯದ ಎಲ್ಲಾ ಮಹಿಳೆಯರ ಮೇಲೆಯೂ ಪ್ರಭಾವ ಬೀರಿದೆ.

* ದಲಿತ ಸಾಹಿತ್ಯ ಕೇರಳದಲ್ಲಿ ಹೇಗಿದೆ ?

ನನಗೆ ಅದರ ಬಗ್ಗೆ ಹೆಚ್ಚು ಅರಿವಿಲ್ಲ. ಆದರೆ ಮಲಯಾಳಂಗೆ ಹೋಲಿಸಿದರೆ, ಕನ್ನಡ, ತಮಿಳು ಹಾಗೂ ತೆಲುಗುಗಳಲ್ಲಿ ಪ್ರಭಾವ ಹೆಚ್ಚಿದೆ. ಆದರೆ, ಕೆಲವೊಂದು ವಿಶೇಷ ವಿನಾಯಿತಿಗಳೆಂದರೆ, ರಾಘವನ್ ತೋಳಿ ಇಂತಹ ಹಲವರು ತಮ್ಮ ಭಾಷೆಯಲ್ಲಿಯ ಶೈಲಿಯಲ್ಲಿ ಬರೆಯುತ್ತಾರೆ. ಮಹಾರಾಷ್ಟ್ರದಲ್ಲಿ ಪಾಮಗಳಂತಹವರೂ ದಲಿತ ಸಾಹಿತ್ಯದಲ್ಲಿ ಪ್ರಮುಖರು. ಬಹುಶಃ ನಮಗೆ ಆಧುನಿಕವಾದ ಮೌಲ್ಯಗಳಿವೆ. ಹಾಗೆಯೇ ಉತ್ತಮ ಜೀವನ ಶೈಲಿಯಿಂದಾಗಿರಬಹುದು ಹೆಚ್ಚು ಜಾತಿ ತಾರತಮ್ಯಗಳು ಕಾಣಸಿಗುವುದಿಲ್ಲ. ಈ ಹಿನ್ನಲೆಯಲ್ಲಿ ನನ್ನ ಪ್ರಕಾರ ದಲಿತ ಸಾಹಿತ್ಯ ಕೇರಳದಲ್ಲಿ ಬಲವಾಗಿಲ್ಲ.

* ಇನ್ನು ಹತ್ತು ವರ್ಷಗಳಲ್ಲಿ ಮಲಯಾಳಂ ಸಾಹಿತ್ಯ ಹೇಗಿರುತ್ತದೆ?

ಈ ಬಗ್ಗೆ ಉತ್ತರಿಸುವುದು ನನಗೆ ಕಷ್ಟವಾಗಬಹುದು. ಆದರೂ ಸಹ ನಾವೆಲ್ಲಾ ಸಾಹಿತಿಗಳೂ ಸಹ ಒಂದು ರೀತಿಯ ಬದಲಾವಣೆಗಾಗಿ ಕಾಯುತ್ತಿದ್ದೇವೆ. ನನ್ನ ಪ್ರಕಾರ, ನಾನು ಸಾಹಿತ್ಯದಿಂದಲೇ ಲೋಕವನ್ನು ಬದಲಾಯಿಸುತ್ತೇನೆಂಬ ನಂಬಿಕೆಯೇನೂ ನನಗಿಲ್ಲ. ಏಕೆಂದರೆ, ಆಧುನಿಕ ಜಗತ್ತು ನೀಡುತ್ತಿರುವ ಹಲವು ಸಮಸ್ಯೆಗಳನ್ನು ಎದುರಿಸಲು ಹಲವು ಸಂದರ್ಭಗಳಲ್ಲಿ ನಾವು ವಿಫಲರಾಗುತ್ತಿದ್ದೇವೆ. ಆದರೆ ನಿಜಕ್ಕೂ ಜನರು ಆಶಿಸುವಂತಹ ಸಾಹಿತ್ಯವನ್ನು ನಾವು ನೀಡಲು ಸಿದ್ಧರಾಗಬೇಕು.

* ನೀವು ಯಾವುದಾದರೂ ನಿಮ್ಮ ಕವಿತೆಯ ಒಂದೆರೆಡು ಸಾಲುಗಳನ್ನು ಹಾಡಬಲ್ಲಿರಾ?

ಲೋಕಂಪೋಲೆ ಎನ್ನ್ ಉಳ್ಳಿಲ್ ಎತ್ರಯೋ ವನ್ ಕಥಗಳ್,

(Several Epics with in me like this universe)

ಈ ಸಮಯಂ ಚಕ್ರ ತಿರುಗುಂ ಋತುಕ್ಕಳು, ಕಣ್ಣೀರ್ ಮಳ, ಸ್ವರ್ಣ ವೈಲುಮಾಯಿ ಸೂರ್ಯನ್, ಮಂಜು ಮೂಡುನ್ನ ಶುಭ ಶೈತ್ಯ ಮೇಘಲಗಳ್, ಉಳ್ಳಿಲ್ ತಿಳಕ್ಕುನ್ನ ಲಾವಯಾಯ್ ಓರ್ಮಗಳ್, ಸ್ನೇಹ ಸ್ಪರ್ಶವುಮಾಯ್ ನಿಲಾವುಣ ಒಣರುಗಳ್, ಏಕಾಂತತೆಯುಂ ಮಹಾಸಮುದ್ರಂಗಳ್, ಏಕಾಂತತನ್ ಮಹಾ ಸಮುದ್ರಂಗಳ್, ಮಂಜು ಭಾವಣಿಗಳ್ ಚೇಕ್ಕೇರುಂ ಮುಳು ಕುಹಗಳ್, ಪೂಕುನ್ನು ಮಾಮರಂಗಳ್, ಪಚ್ಚ ತಿಂಗುನ್ನ ಕಾಡುಗಳ್, ಉಳ್ಳ್ ಆಗೆ ಪಿಳರುನ್ನು ನಾನಾ ನಿರಂಗಳಾಯ್, ಪ್ರೇಮ್, ವಿದ್ವೇಷ, ವಿಲಾಪ

ಸ್ವರಂಗಳಾಯ್, ವಿಚಿತ್ರ ನಾಮ್ ಭಾಷಗಳಿಲ್, ಮರುಕುರಿ ಆರುಂ ಮಯಕ್ಕಾತ್ತ, ಪಿನ್ನೆ ದ್ವೀಪಂಗಳಾಯ್ ಎನ್ನುಳ್ಳಿಲ್, ಎತ್ರಯೋ ಪನ್ ಕಥಗಳ್, ಆಳುಗಳ್. (This time, rolling weathers, teargul rains, sun with a golden glimps, White Mountains covered with snow, Memories hich burning as Lava inside, moonlights with a touch of Love, Ocens of loneliness, Flowring mango trees, green exhibiting forests, Self is frightened with various hues, Love, hate, pleassures are becoming the music, In a strange language, After becomes an island with in me .... So many Epics, So many personalities)

ಅನ್ವರ್ ಅಲಿ :

* ಕನ್ನಡ ಸಾಹಿತಿಗಳೊಂದಿಗೆ ತಮ್ಮ ಸಂಬಂಧ ಹೇಗಿದೆ ?

ಬಹುಪಾಲು ಕವಿಗಳನ್ನು ನಾನು ವಿಚಾರ ಸಂಕಿರಣ ಅಥವಾ ಸಮ್ಮೇಳನಗಳ ಮೂಲಕವೇ ಭೇಟಿಯಾಗಿರುವುದು. ಒಂದು ಸಮ್ಮೇಳನದಲ್ಲಿ ನಾನು ನನ್ನ ಮಿತ್ರರಾದ ಥೋಮಸ್ ಇಬ್ಬರೂ ನಮಗೆ ನೀಡಿದ್ದ ವಿಶ್ರಾಂತಿ ಗೃಹದ ಹೊರಗಡೆಯ ಪೋರ್ಟಿಕೋನಲ್ಲಿ ಕುಳಿತು ಕವನಗಳನ್ನು ವಾಚಿಸತೊಡಗಿದೆವು. ಆಗ ಶಿವ (ಶಿವಪ್ರಕಾಶ್) ಹಾಸಿಗೆಯಿಂದೆದ್ದು ಹೊರಬಂದರು. ಹಾಗೂ ತಾವೂ ಸಹ ಕವಿಯೆಂದು ಹೇಳಿಕೊಂಡರು ಹಾಗೂ ಕವನಗಳನ್ನು ನಮ್ಮೊಂದಿಗೆ ವಾಚಿಸತೊಡಗಿದರು. ನಂತರ ನಾವು ಮುಂಜಾನೆಯವರೆಗೆ ಮಾತನಾಡುತ್ತಾ ಕುಳಿತೆವು. ಹಾಗೂ ನಂತರ ಬೆಳಿಗ್ಗೆಯಾಗುವಷ್ಟರಲ್ಲಿ ನಾವು ಸುಮಾರು 3–4 ವರ್ಷಗಳ ಪರಿಚಯವಿದೆಯೆಂದು ಭಾಸವಾಗುವ ಮಟ್ಟಿಗೆ ಉತ್ತಮ ಮಿತ್ರರಾಗಿದ್ದೆವು. ನಂತರ ನಾನು ಅವರನ್ನು ಬೆಟ್ಟಿಯಾಗಲು ಮೈಸೂರಿಗೂ ಸಹ ಬಂದಿದ್ದೆನು. ಎರಡನೆಯ ಬಾರಿ ಶಿವನ ಸಹಾಯದೊಂದಿಗೆ ನಾನು ಬಿ.ವಿ.ಕಾರಂತರನ್ನು ಸಂದರ್ಶನ ಮಾಡಲಿಕ್ಕೆ ಬಂದಿದ್ದೆ. ಆದರೆ ಭೋಪಾಲ್ ದುರಂತದ ಕಾಲವಾದ್ದರಿಂದ ಅವರಿಂದ ನಾನು ಉತ್ತಮ ಪ್ರತಿಕ್ರಿಯೆಯನ್ನು ನಿರೀಕ್ಷಿಸಲಾಗಲಿಲ್ಲ. ನಂತರ ನಾನು ಅವರನ್ನು ಮತ್ತೆ ಭೇಟಿಯಾಗಿ ನಾನು ಪತ್ರಕರ್ತನಲ್ಲ ಬದಲಾಗಿ ಸಾಹಿತಿ ಎಂದು ಪರಿಚಯಿಸಿಕೊಂಡು ರಂಗಭೂಮಿಯ ಮೇಲಿರುವ ನನ್ನ ಆಸಕ್ತಿಯ ಕುರಿತು ವಿವರಿಸಿದೆನು. ನಂತರ ಅವರು ನನ್ನೊಂದಿಗೆ ಒಂದು ಸಂದರ್ಶನಕ್ಕೆ ಸಿದ್ಧರಾದರು. ಕಾರಂತರ ಹಲವು ಭಾಷಣಗಳನ್ನು ನಾನು ಕೇಳಿದ್ದೇನೆ. ವೈಚಾರಿಕವಾಗಿ ಹೆಚ್ಚು ತೀಕ್ಷ್ಣರಾಗಿದ್ದರು. ಅವರ ಭಾಷಣಗಳು ಪ್ರಬುದ್ಧವಾಗಿದ್ದರೂ ಸಹ ಎಂತಹ ಕ್ಲಿಷ್ಟವಾದ ಅಥವಾ ತೀಕ್ಷ್ಣವಾದ ವಿಚಾರಗಳನ್ನೂ ಸರಳ ಭಾಷೆಯಲ್ಲಿ ಸಾಮಾನ್ಯರ ಮುಂದೆ ತೆರೆದಿಡುವ ಸಾಮರ್ಥ್ಯ ಅವರಿಗಿತ್ತು ಅನಂತಮೂರ್ತಿಯವರೂ ಸಹ ಉತ್ತಮ ಸಾಹಿತಿಗಳು, ಹಾಗೂ ಅವರು ಕೇರಳದಲ್ಲಿ ಒಬ್ಬ ತಾರೆ ಕೂಡ.

* ನೀವು ಲಂಕೇಶರ ಯಾವುದಾದರೂ ಕೃತಿಗಳನ್ನು ಓದಿರುವಿರಾ ?

ಅವರ ಕೆಲವು ಕೃತಿಗಳ ಮಲಯಾಳಂ ತರ್ಜುಮೆಗಳನ್ನು ನಾನು ಓದಿದ್ದೇನೆ. ನಾನು

ಇತ್ತೀಚೆಗೆ ಅವರ ಮಗಳಾದ ಕವಿತಾ ಲಂಕೇಶ್‌ರನ್ನು ಒಂದು ಚಲನ ಚಿತ್ರೋತ್ಸವದಲ್ಲಿ ಭೆಟ್ಟಿಯಾಗಿದ್ದೆ. ಅವರ ಚಿತ್ರವನ್ನು ನೋಡಿದೆ. ಅದು ಅಂತಹ ಪ್ರಮುಖ ಚಿತ್ರವಲ್ಲದಿದ್ದರೂ ಹಿಡಿತ ಇತ್ತು. ಹಾಗೂ ಅದರ ಕಥಾವಸ್ತು ಉತ್ತಮವಾಗಿತ್ತು. ನಾನು ಲಂಕೇಶರ ಕುರಿತು ಹೆಚ್ಚೇನೂ ಓದಿಲ್ಲ. ಅವರ ಕೆಲವು ಕೃತಿಗಳ ತರ್ಜುಮೆಗಳನ್ನು ಮಾತೃಭೂಮಿಯಲ್ಲಿನ ವಿಶೇಷ ಅಂಕಣಗಳಲ್ಲಿ ಓದಿರುವ ನೆನಪಷ್ಟೇ ಇದೆ.

* ಅನ್ವರ್ ಕನ್ನಡದಲ್ಲಿ ಈಗಿನ ಸಾಹಿತ್ಯ ಹೇಗಿದೆ ?

ಕನ್ನಡದಲ್ಲಿ ಉತ್ತಮವಾಗಿದೆ. ಇಂದಿನ ಕವಿಗಳಲ್ಲಿ ಎಸ್. ಮಂಜುನಾಥ್, ಎಲ್.ಸಿ. ನಾಗರಾಜ್ ಇತ್ಯಾದಿ ಹಲವರಿದ್ದಾರೆ. ನನಗೆ ಎಲ್.ಸಿ. ನಾಗರಾಜ್ ಪ್ರಿಯರು.

* ಅನ್ವರ್ ಡಿ.ಆರ್. ನಾಗರಾಜ್, ಕಿ.ರಂ. ನಾಗರಾಜ್ ಅವರು ನನಗೆ ಪರಿಚಿತರು. ಕೊಟ್ಟಾಯಂನಲ್ಲಿ ನಡೆದ ಭಾಷಾ ಅನುವಾದ ಶಿಬಿರದಲ್ಲಿ ನಾನು ಇವರಲ್ಲಿ ಒಬ್ಬರು ನಾಗರಾಜ್‌ರನ್ನು ನಾನು ಭೇಟಿಯಾಗಿದ್ದೆ. ಹಾಗೂ ಅವರ ಒಂದು ಕವಿತೆಯನ್ನೂ ಸಹ ನಾನು ಅನುವಾದಿಸಿದ್ದೆ. ಆದರೆ ರಶೀದ್ ಆ ಶಿಬಿರದಲ್ಲಿನ ಚುರುಕಾದ ಅಭ್ಯರ್ಥಿಗಳಾಗಿದ್ದರು. ಹಾಗೂ ಅವರು ಮಲಯಾಳಂನ ಅತ್ಯಂತ ಉನ್ನತವಾಗಿರುವ ಕವಿತೆಗಳನ್ನು ಕನ್ನಡಕ್ಕೆ ತರ್ಜುಮೆಗೊಳಿಸಿದರು. ನಾನು ಸಹ ಅವರ ಮುಸ್ಲಿಂ ಸಂಪ್ರದಾಯವನ್ನು ಪ್ರತಿನಿಧಿಸುವ ಕೆಲವು ಕವಿತೆಗಳನ್ನು ತರ್ಜುಮೆಗೊಳಿಸಿದ್ದೇನೆ. ಬಕ್ರೀದ್‌ನ ಕುರಿತು ಅವರು ರಚಿಸಿರುವ ನೋಸ್ಟಾಲ್ಜಿಕ್ ಆದ ಹಲವು ಕವಿತೆ ನನ್ನ ಮೇಲೆ ಹೆಚ್ಚು ಪರಿಣಾಮ ಬೀರಿದೆ. ನಂತರ 2 ವರ್ಷಗಳ ಬಳಿಕ ಅದೇ ಸಾರವಿರುವಂತಹ ಇನ್ನೊಂದು ಕವಿತೆಯನ್ನು ನಾನು ರಚಿಸಿದೆ. ಇದಾದ ಬಳಿಕವೇ ನಾನು ನನ್ನ ಆಧುನಿಕ ಅಸ್ಥಿತ್ವವನ್ನು ಕಂಡುಕೊಂಡೆ. ಮುಖ್ಯವಾಗಿ ನಾನು ನಗರದ ಹಾಗೂ ಕಮ್ಯುನಿಸ್ಟ್ ಸಿದ್ಧಾಂತದ ಹಿನ್ನಲೆಯಿರುವ ಮನೆತನದವನು. ಹಾಗಾಗಿ ನನಗೆ ಗ್ರಾಮದ ಮತ್ತು ಧರ್ಮದ ಬಗೆಗಿನ ಅನುಭವಗಳು ಕಡಿಮೆ. ಆದರೂ ನಾನು ನನ್ನ ಸುತ್ತಲಿನ ಸಮುದಾಯಗಳನ್ನು ಅಧ್ಯಯನದ ಮೂಲಕ ಕಲಿತೆ.

* ಮೊಗಳ್ಳಿ ಗಣೇಶ್‌ರನ್ನು ತಾವು ಭೇಟಿಮಾಡಿದ್ದೀರಾ ?

ಹೌದು. ಅವರನ್ನು ನಾನು ದೆಹಲಿಯಲ್ಲಿ ಭೇಟಯಾಗಿದ್ದೇನೆ. ಅವರು ಕಥಾಪ್ರಶಸ್ತಿ ಅಥವಾ ಸಾಂಸ್ಕೃತಿಕ ಪ್ರಶಸ್ತಿ ಅಂತಹ ಯಾವುದೋ ಪ್ರಶಸ್ತಿ ಸ್ವೀಕರಿಸುವ ಸಲುವಾಗಿ ದೆಹಲಿಗೆ ಆಗಮಿಸಿದರು. ನಾನು ದೆಹಲಿಯ ಶಿವರವರ ಕಛೇರಿಗೆ ತೆರಳಿದ್ದು, ಅಲ್ಲಿ ಅವರನ್ನು ಭೇಟಯಾದೆ. ಈಗ ಕರ್ನಾಟಕದಲ್ಲಿ ಗಣೇಶ್‌ರವರು ಸಣ್ಣಕಥೆಗಳಿಂದ ಗುರುತಿಸಲ್ಪಟ್ಟಿದ್ದಾರೆ. ಹಾಗೆಯೆ ನಾನು ಚಲನ ಚಿತ್ರ ನಟಿ ಹಾಗೂ ಬರಹಗಾರ್ತಿಯಾದ ಹಾ.ಮಾ. ಕನಕರವರನ್ನೂ ಬೇಟಿಯಾದೆ. ಮಾತ್ರವಲ್ಲದೆ ತಿರುವನಂತಪುರದಲ್ಲಿ ಭಾರತೀಯ ಯುವ ಬರಹಗಾರರ ಸಮ್ಮೇಳನ ನಡೆಯುತ್ತಿತ್ತು. ಆಗ ನಾನು ವಿವೇಕ್ ಶಾನ್‌ಭಾಗ್ ಹಾಗೂ ಕನಕರವರನ್ನು ಭೇಟ್ಟಿಯಾದೆ. ಕನಕ ಹಾಗೂ ನಾನು ಬಾಂಬೆಯಲ್ಲಿ ಯಾವುದೋ ಸ್ತ್ರೀ ಸಂಘಟನೆ ಆಯೋಜಿಸಿದ್ದ ಸ್ತ್ರೀವಾದಿ ಬರಹಗಾರರ ಕಾರ್ಯಕ್ರಮದಲ್ಲಿ ಭೇಟಯಾದೆವು. ನಂತರ ಅನಿತಾರವರ ಮುಖಾಂತರ ಕನಕರವರು ನನಗೆ ಅತ್ಯಂತ ಪರಿಚಿತರಾದರು.

* ಅನಿತಾರವರ ಸಾಹಿತ್ಯದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಅವರು ನಿಷ್ಣಾತರಾದ ಹಾಗೂ ಚುರುಕಾದ ಕವಯತ್ರಿ. ಸ್ವಲ್ಪ ಕೃತಿಗಳನ್ನು ಮಾತ್ರ ಬರೆದಿದ್ದಾರೆ, ಆದರೆ ಅವರ ಲೇಖನಗಳು ಎಲ್ಲಾ ರಾಷ್ಟ್ರೀಯ ಪತ್ರಿಕೆಗಳಲ್ಲಿ ಬರುತ್ತಿರುತ್ತದೆ. ಅವರು ಅವರ ಕಾಲೇಜು ವಿದ್ಯಾಭ್ಯಾಸದಿಂದಲೇ ಬರೆಯುವುದನ್ನು ಪ್ರಾರಂಭಿಸಿದ್ದರು. ವೃತ್ತಿಯಾಧಾರಿತವಾಗಿ ಅವರು ಇಂಜಿನಿಯರ್ ಆಗಿದ್ದು, ಮಹಿಳೆಯಾಗಿ ಸಂಸಾರದ ನಿರ್ವಹಣೆಯಲ್ಲಿ ಕಾಲ ವ್ಯಯಿಸಬೇಕಾಗಿ ಬರುವ ಸಮಸ್ಯೆಗಳಿಂದಾಗಿ ಹೆಚ್ಚು ಕ್ರಿಯಾತ್ಮಕವಾಗಲು ಸಾಧ್ಯವಾಗಲಿಲ್ಲ. ಆದರೆ ಈಗ ಮಲಯಾಳಂನಲ್ಲಿ ಅವರು ಉತ್ತಮ ಕವಯತ್ರಿ. ನನ್ನ ಉತ್ತಮ ಸ್ನೇಹಿತೆಯೂ ಕೂಡ.

* ಆಧುನಿಕ ಮಲಯಾಳಂ ಸಾಹಿತ್ಯದಲ್ಲಿ ನೀವು ಕಾಣುವ ಬದಲಾವಣೆಗಳೇನು ?

ಆಧುನಿಕ ಮಲಯಾಳಂ ಸಾಹಿತ್ಯ ಹೆಚ್ಚು ಗ್ರಾಹ್ಯವುಳ್ಳದ್ದಾಗಿದೆ. ಇತರ ಭಾರತೀಯ ಭಾಷೆಗಳಿಗೆ ಹೋಲಿಸಿದರೆ, ಮಲಯಾಳಂ ಬಾಷೆಯ ಸಾಹಿತ್ಯ ಆಧುನಿಕ ಮೌಲ್ಯಗಳಿಂದ ಹೇರಲ್ಪಟ್ಟಿಲ್ಲ ಹಾಗೂ ಸಾಂಪ್ರದಾಯಿಕತೆಯನ್ನು ತಕ್ಕಮಟ್ಟಿಗೆ ಉಳಿಸಿಕೊಂಡಿದೆ. ಹಾಗೂ ಇಂದಿನ ಮಂದವಾದ ಸಾಹಿತ್ಯ ಶೈಲಿಯೂ ಸಹ ಮುಖ್ಯ ಬಲಹೀನತೆ. ಆದರೆ ಬಹುಪಾಲು ಸಾಹಿತಿಗಳು ಸಾಹಿತ್ಯವನ್ನು ರಾಜಕೀಯದ ಲೇಪನದಲ್ಲಿ ವೈಭವೀಕರಿಸುತ್ತಿದ್ದಾರೆ. ಇದು ಬಹುಶಃ ಕೇರಳದಲ್ಲಿರುವ ಮಾರ್ಕ್ಸ್ ಹಾಗೂ ಮಾವೋ ಪ್ರಭಾವದಿಂದಿರಬಹುದು. 80 ರ ನಂತರ ಸಾಹಿತ್ಯದಲ್ಲಿ ಆಧುನಿಕ ಶೈಲಿಯ ಬರವಣಿಗೆ ಪ್ರವೇಶವಾಯಿತು. ಆ ಕಾಲಘಟ್ಟದಲ್ಲಿ ರಾಮಚಂದ್ರನ್, ಇ. ರಾಜೀವನ್, ಹಾಗೂ ಇನ್ನೂ ಕೆಲವು ನಮ್ಮಂತಹವರು ಇಡೀ ವ್ಯವಸ್ಥೆಯ ಕುರಿತು ಗೊಂದಲದಲ್ಲಿರುವ ಸಮಯ. ಹಾಗೂ ಅದು ತರ್ಜುಮೆಗಳ ಹಾಗೂ ಅನುವಾದದ ಕಾಲವಾಗಿತ್ತು. ಆಗ ನಮಗೆ ಆಧುನಿಕ ಸಾಹಿತ್ಯದ ಬಗ್ಗೆ ಹಲವು ಗೊಂದಲಗಳೂ, ಹಲವಾರು ಅಡೆತಡೆಗಳು ಎದುರಾದವು. ಆ ಸಮಯದಲ್ಲಿ ರಾಜೀವ್‌ರವರು ಆ ಅಡೆತಡೆಗಳನ್ನು ಮೀರಿ ನಿಂತರು. ಅವರು ರಾಜಕೀಯವಾದ ಹೆಚ್ಚು ಅಂತರ್ಮುಖಿಯವಾದ ಹಾಗೂ ಹೆಚ್ಚು ವಾಸ್ತವಗಳನ್ನು ಪ್ರತಿನಿಧಿಸುವ ಸಾಹಿತ್ಯವನ್ನು ಬರೆಯಲು ಪ್ರಾರಂಭಿಸಿದರು. ಆದರೆ ಈ ಮೂಲಕ ಒಂದು ಸಾಹಿತ್ಯ ಚಳುವಳಿಯೇನೂ ಉಂಟಾಗಲಿಲ್ಲ. ಇದಾದ ಬಳಿಕ ಸಾಹಿತ್ಯವನ್ನು ನಾವು ಆಧುನಿಕ ಪೂರ್ವ ಸಾಹಿತ್ಯ ಎಂದು ಸರ್ವೇಸಾಮಾನ್ಯವಾಗಿ ಭಾರತದಾದ್ಯಂತ, ಜಗತ್ತಿನಾದ್ಯಂತ ಕರೆಯುತ್ತೇವೆ. ಆದರೆ ಆಧುನಿಕ ಪೂರ್ವ ಸಾಹಿತ್ಯದ ಕುರಿತು ವ್ಯಾಖ್ಯಾನಿಸುವ ಮಟ್ಟಿಗಿನ ಗೋಚರಿಸಲ್ಪಡುವ ಅಭಿವೃದ್ಧಿಗಳೇನೂ ಸಹ ಕೇರಳದ ಸಾಹಿತ್ಯದಲ್ಲಿ ಉಂಟಾಗಿಲ್ಲ. ಕರ್ನಾಟಕದಲ್ಲಿ ಇದರ ಪ್ರಭಾವ ಹೇಗಿದೆಯೆಂಬುದು ನನಗೆ ತಿಳಿದಿಲ್ಲ? ಕೆಲವು ಸಂದರ್ಭಗಳಲ್ಲಿ ಅಧ್ಯಯನದ ದೃಷ್ಟಿಕೋನದಲ್ಲಿ ನಾವು ಹೀಗೆ ಹೆಸರಿಸಬಹುದಾದರೂ ಅದು ಪ್ರಾಯೋಗಿಕವಾಗಿ ಪತ್ತೆ ಹಚ್ಚಲಾಗದ ಬೆಳವಣಿಗೆ. ಕಾಲಾನುಸಾರದಲ್ಲಿ ಉಂಟಾದ ಬದಲಾವಣೆಗಳನ್ನು ಮಾತ್ರ ನಾವು ಕಾಣಬಹುದು. ವಿವಿಧ ಬಗೆಯ ಹಾಗೂ ಶೈಲಿಯ ಬರವಣಿಗೆಗಳು, ಗದ್ಯಸಾರವನ್ನು ಅಥವಾ ಪದ್ಯಸಾರವನ್ನು ಜೋಡಿಸುವ ರೀತಿ, ಇವುಗಳಲ್ಲಿ ಬದಲಾವಣೆಗಳಾದವು. ಇದು ಇಂದಿನ ಮಲಯಾಳಂ ಸಾಹಿತ್ಯದ ಲಕ್ಷಣಗಳಲ್ಲೊಂದು. ಅನಿತರವರ ಪದ್ಯಗಳು ಇದಕ್ಕೆ ಉದಾಹರಣೆಗಳು. ಅವರ ಪದ್ಯಗಳು ಹೆಚ್ಚು ಮಹಿಳಾ ಸಂಬಂಧಿ ಭಾವನೆ ಹಾಗೂ

ವಿಚಾರಗಳನ್ನು ಕೇಂದ್ರಿಕರಿಸಿದ್ದರೂ ಸಹ ವ್ಯತ್ಯಸ್ಥ ರೀತಿಯಲ್ಲಿ ಅದನ್ನು ವ್ಯಕ್ತಪಡಿಸುವ ಕೌಶಲ್ಯ ಅವರಿಗಿದೆ. ಬರವಣಿಗೆಯಲ್ಲಿ ಯಾವುದೇ ರೀತಿಯಾದ ಹೇಳಿಕೆಗಳಾಗಲಿ ಅಥವಾ ಅದರ ಮೂಲಕ ಒಂದು ತೀರ್ಪನ್ನು ನೀಡುವುದಾಗಲೀ ಇಲ್ಲ ಹಾಗೂ ಆಧುನಿಕ ರೀತಿಯ ರೂಪಾಲಂಕಾರಗಳ ಮೂಲಕ ಆಂತರಿಕ ಭಾವನೆಗಳನ್ನು ವ್ಯಕ್ತಪಡಿಸುವ ವಿಧಾನ .... ಇವುಗಳು ಯಶಸ್ಸಿಗೆ ಕಾರಣವಾಗುತ್ತವೆ. ಹಾಗೂ ಈಗಾಗಲೇ ನಾನು ತಿಳಿಸಿದ ಪ್ರಕಾರ, ರಾಜೀವನ್, ನಾನು, ರಾಮಚಂದ್ರನ್, ಟೋನಿ ಓಗೆ ಹಲವರು ಅನುವಾದದ ಕಾಲಘಟ್ಟದ ಅಂತ್ಯದಲ್ಲಿ ತೆರೆಗೆ ಬಂದವರು. ತದನಂತರ ರಾಮಚಂದ್ರನ್ ನಾವೆಲ್ಲ ಉತ್ತಮ ಕವನಗಳನ್ನು ರಚಿಸಲು ಪ್ರಾರಂಭಿಸಿದೆವು. ಹಾಗೆಯೇ ನಾವು ಸಹ ಆ ಮಾರ್ಗದಲ್ಲಿ ಮುನ್ನಡೆದವು. ನಂತರ ಅವರ ಕವನ ಸಂಕಲನವೂ ಬಿಡುಗಡೆಯಾಯಿತು. ನಿಜಕ್ಕೂ ಅವರ ಬರವಣಿಗೆ ಭಯಂಕರವಾದದ್ದು. ಕವನದಲ್ಲಿ 2–3 ಸಾಲುಗಳಿದ್ದರೂ ಕ್ರಿಯತ್ಮಕವಾಗಿ, ತೀಕ್ಷ್ಣವಾಗಿರುತ್ತದೆ. ಆದರೆ ಅವರಿಂದ ಯಾವುದೇ ಸಾಂಪ್ರದಾಯಿಕವಾದ ಮಲಯಾಳಂ ಸಾಹಿತ್ಯವನ್ನು ನಿರೀಕ್ಷಿಸುವುದು ಅಸಾಧ್ಯ. ಏಕೆಂದರೆ ಸಾಮಾನ್ಯವಾಗಿ ಅದು ದೀರ್ಘವಾಗಿರುತ್ತದೆ. ಅವರು ಹಲವು ರಾಜಕೀಯ ವಿಮರ್ಶೆಗಳನ್ನು ಬರೆದಿದ್ದಾರೆ. ಮುಖ್ಯವಾಗಿ ಕೇರಳದಲ್ಲಿ ಯಾವುದೇ ವಿಷಯಗಳಾದರೂ, ಸಾಹಿತ್ಯವಾದರೂ ರಾಜಕೀಯದ ಚೌಕಟ್ಟಿನ ವಿಮರ್ಶೆಯೊಳಗೆ ಒಳಪಡುತ್ತದೆ. ಎಲ್ಲಾ ವಸ್ತುಗಳು ರಾಜಕೀಯ ಸಿದ್ಧಾಂತದ ಪರಿಧಿಯಲ್ಲಿಯೇ ಒಳಪಡುತ್ತದೆ. ಆದರೆ ಇಂದಿನ ದಿನಗಳಲ್ಲಿ ಸಾಹಿತ್ಯ ಕ್ಷೇತ್ರದಲ್ಲೇ ಆಂತರಿಕವಾದ ಹಲವು ರಾಜಕೀಯಗಳು ಉದ್ಭವವಾಗಿದೆ. ಈ ಸಂದರ್ಭದಲ್ಲಿ ಹಲವು ಕಾಲ್ಪನಿಕ ಕಥೆಗಳು (Fictions) ಹೊರಬಂದವು. ಅನಿತಾರವರು ಇದರಲ್ಲೂ ತಮ್ಮ ಜಾಣ್ಮೆಯನ್ನು ತೋರಿದ್ದಾರೆ. ಹಾಗೆಯೇ ದಿವ್ಯರವರು ಕೂಡ ಉತ್ತಮ ಬರಹಗಾರ್ತಿ. ಅವರು ಕಾವ್ಯಾತ್ಮಕವಾಗಿ ಕೊಂಚ ಧಾರಾಳಿ ಹಾಗಾಗಿ ಎಲ್ಲಾ ವಿಷಯಗಳ ಕುರಿತೂ ಬರೆಯುತ್ತಾರೆ. ಅವರು ರಮ್ಯವಾದ ಹಾಗೂ ಭಾವನಾತ್ಮಕ ಕಾವ್ಯಕ್ಕೆ ಒತ್ತನ್ನು ನೀಡುತ್ತಾರೆ. ಸಾಮಾಜಿಕ ಸಂದಿಗ್ದತೆಗಳೊಂದಿಗೆ ದೇಹ–ಮನಸ್ಸು–ಪ್ರೇಮ–ಕಾಮ ಇತ್ಯಾದಿಗಳನ್ನು ವಿಮರ್ಶಿಸುವುದು ಅವರ ಕಾವ್ಯಗಳ ಮುಖ್ಯ ಉದ್ದೇಶ. ಹಾಗೂ ನಾವು ಭಾಷಾವಿಜ್ಞಾನದ ಹಿನ್ನಲೆಯಲ್ಲಿ ಹಲವು ರಮ್ಯವಾದ ಕವಿತೆಗಳನ್ನೂ ಬರೆದೆವು.

* ಕಮಲಾ ದಾಸ್ ಹಾಗೂ ದಿವ್ಯರವರ ಕುರಿತಾಗಿ ನಿಮ್ಮ ಅಭಿಪ್ರಾಯವೇನು ?

ಕಮಲಾ ದಾಸ್ ಪ್ರಮುಖ ಹಾಗೂ ಪ್ರಸಿದ್ಧಿ ಪಡೆದ ಬರಹಗಾರ್ತಿ. ಆದರೆ ಕಮಲಾ ದಾಸ್ ಗಿಂತಲೂ ಆಳವಾಗಿ ದಿವ್ಯ ಚಿತ್ರಿಸಿದ್ದಾರೆ. ಆಕೆ 3 ಲೈಂಗಿಕ ಸಮ್ಮಿಲನಗಳ ಬಗ್ಗೆ ಹಾಗೂ ಇಂತಹ ಹಲವು ವಿಚಾರಗಳ ಕುರಿತು ಬರೆಯುತ್ತಾರೆ. ಅದರ ವೈಭವೀಕರಣದ ಮೇಲೆ ಅವರಿಗೆ ಹಿಡಿತವಿದೆ. ದಿವ್ಯರಂತಹ ಮಹಿಳೆ ಇಷ್ಟು ನೇರವಾಗಿ ಬರೆಯುತ್ತಾರೆ ಎಂದು ಊಹೆಮಾಡಲೂ ಸಾಧ್ಯವಾಗದ ಮಟ್ಟಗೆ ಅವರ ಕಥಾವಿಷಯಗಳ ಆಳವಿದೆ.

* ಈಗ ಕೇರಳದಲ್ಲಿ ಉತ್ತಮ ವಿಮರ್ಶಕರಾರು ?

ಸಾಹಿತ್ಯಕ ವಿಮರ್ಶೆಗಳು ಕೇರಳದಲ್ಲಿ ಬಲಹೀನಗೊಂಡಿವೆ. ಸಾಮಾಜಿಕ ಸಾಹಿತ್ಯ ಹಾಗೂ ಕಾಲ್ಪನಿಕ ಸಾಹಿತ್ಯಗಳ ಮೇಲೆ ಕೆಲವು ವಿಮರ್ಶೆಗಳಿವೆ. ಆದರೆ ಇವುಗಳೆಲ್ಲಾ ನೈಜವಾದ

ಅಥವಾ ವಾಸ್ತವದ ತಳಹದಿಯ ಮೇಲೆ ವಿಮರ್ಶೆಯಾಗುವುದಕ್ಕಿಂತಲೂ ಶೈಕ್ಷಣಿಕ ಹಿನ್ನಲೆಯ ಅಧ್ಯಯನದ ಮೆರುಗಿನಲ್ಲಿ ವಿಮರ್ಶೆಯಾಗುತ್ತಿವೆ. ಇವುಗಳಿಗೆ ಹಲವು ವಿಶ್ವವಿದ್ಯಾನಿಲಯಗಳೂ ಇವೆ. ಆದರೆ ಮುದ್ರಿತವಾಗುವ ವಿಮರ್ಶೆಗಳಿಗಿಂತ ಉತ್ತಮ ವಿಮರ್ಶೆಗಳು ಕವಿಗಳ ಒಟ್ಟುಗೂಡುವಿಕೆಯಿಂದ ಮೌಖಿಕವಾಗಿಯೇ ನಡೆಯುತ್ತವೆ. ಈ ಹಿನ್ನಲೆಯಲ್ಲಿ ನಾನೂ ಅನಿತಾರವರು ಸೇರಿ ಹಲವು ಸಾಹಿತ್ಯಿಕ ಚರ್ಚೆಗಳನ್ನು ಏರ್ಪಡಿಸಿ ಕವಿಗಳನ್ನು ಕಲೆಹಾಕಲು ಪ್ರಯತ್ನಿಸಿದ್ದೇವೆ. ತಿಂಗಳಿಗೆ 3–4 ಬಾರಿಯಾದರೂ ನನ್ನ ಮನೆಯಲ್ಲಿ ಅಥವಾ ಅನಿತಾ, ಗಿರಿಜಾ ಅಥವಾ ದಿವ್ಯರವರ ಮನೆಗಳಲ್ಲಿ ಸೇರುತ್ತಿರುತ್ತೇವೆ. ಆಗ ನಮ್ಮನ್ನು ನಾವೇ ಅರ್ಥೈಸಿಕೊಳ್ಳಲು ಸಾಧ್ಯವಾಗುತ್ತದೆ. ಈಗ ನಮ್ಮ ಕೆಲವು ಬರಹಗಳನ್ನು ಗಾಂಧಿ ವಿಶ್ವವಿದ್ಯಾನಿಲಯದ ಪಠ್ಯಗಳಾಗಿವೆ. ಈಗ ನಾನು ಎಂ.ಜಿ.ಉನ್ನಿಕೃಷ್ಣನ್‌ರವರದ ಮೇಲೆ ಕವಿತೆಯೊಂದನ್ನು ಬರೆಯಲಿಚ್ಛಿಸಿದ್ದೇನೆ. ಅವರು ನಮಗಿಂತಲೂ ಹಿರಿಯರು. ಅವರು ಬಾಲುರವರಿಗಿಂತಲೂ ವಯಸ್ಸಾದವರು. ಅವರು ಸದಾ ವ್ಯತ್ಯಸ್ತ ರೀತಿಯಲ್ಲಿ ಕವಿತೆಗಳನ್ನೆಣೆಯುತ್ತಿರುತ್ತಾರೆ. ಸಾಂಪ್ರದಾಯಿಕತೆಯನ್ನು ಮೀರುತ್ತಲೇ ಇರುತ್ತಾರೆ. ಸಾಮಾನ್ಯವಾಗಿ ವಿಜೃಂಭಣೆಯ ಮನೋಭಾವದವರು. ಇಲ್ಲಿಗೆ ಬರುವಾಗಲೂ 2–3 ಬಾಟಲಿಗಳೊಂದಿಗೇ ಬರುತ್ತಾರೆ. ವಿಶೇಷವೆಂದರೆ ಅವರು ಇಂಗ್ಲೀಷ್‌ನಲ್ಲಿಯೂ ಸಹ ಕವಿತೆಗಳನ್ನು ಬರೆಯುತ್ತಾರೆ.

ನನಗೆ ವಿಮರ್ಶೆಯ ಬಗ್ಗೆ ಅಭಿಪ್ರಾಯವಿಲ್ಲ. ಆದರೆ ನಾನು ಹೆಚ್ಚು ತೊಡಗಿಸಿಕೊಂಡಿರುವುದು ಕಾವ್ಯದಲ್ಲಿ. ನಿಮ್ಮ ಬರವಣಿಗೆ ಪ್ರಜ್ಞಾಪೂರ್ವಕವಾಗಿದೆಯೆಂದು ನಿಮಗೆ ಭಾಸವಾದರೆ ನೀವು ಬರೆಯಿರಿ. ಇದೇ ನನ್ನ ಸಿದ್ಧಾಂತ. ನನ್ನ ವಿಮರ್ಶೆಗಳ ಕುರಿತು ಅನಿತಾರವರನ್ನು ಒಳಗೊಂಡಂತೆ ಹಲವು ಸಾಹಿತಿಗಳಿಗೆ ಗೊಂದಲವಿದೆ ಹಾಗೂ ವಿಮರ್ಶೆಯಿದೆ. ನಾನು ಒಂದರಲ್ಲಿ ಗಮನ ಹರಿಸಬೇಕೆಂಬುದು ನನ್ನ ಬಯಕೆ. ಏಕೆಂದರೆ ಈಗ ನಾನು ಸಿನಿಮಾಗಳಿಗೂ ಕಥೆ ಹಾಗೂ ಸಾಹಿತ್ಯಗಳನ್ನು ಬರೆಯುತ್ತಿದ್ದೇನೆ. ಆದರೆ ವಾಣಿಜ್ಯ ಚಿತ್ರಗಳಿಗಲ್ಲ ಕಲಾತ್ಮಕ ಚಿತ್ರಗಳಿಗೆ. ಆಧುನಿಕ ಸಾಹಿತ್ಯದ ಬಗ್ಗೆ ಹಲವು ವಿಮರ್ಶೆಗಳಿವೆ. ಸಚ್ಚಿದಾನಂದರವರು ಆಧುನಿಕತೆಯ ಬಗ್ಗೆ ಉತ್ತಮ ವಿಮರ್ಶೆಯನ್ನು ಹೊರತಂದಿದ್ದಾರೆ. ನಮ್ಮಲ್ಲಿ ಹಲವರು ಶೈಕ್ಷಣಿಕ ವಿಮರ್ಶಾಕಾರರಿದ್ದಾರೆ. ಆದರೆ ಅವರೆಲ್ಲಾ ಇನ್ನೂ ಆಳವಾಗಿ ವಿಮರ್ಶೆ ಮಾಡುತ್ತಿಲ್ಲ. ಹಲವು ಸಂದರ್ಭಗಳಲ್ಲಿ ಕೃತಿಯ ಮೇಲೆ ಇತರ ಸಾಹಿತಗಳ ದೃಷ್ಟಿಕೋನಗಳನ್ನು ಹೆಚ್ಚು ವೈಭವೀಕರಿಸುತ್ತಾರೆ. ಉತ್ತಮ ವಿಮರ್ಶಕರೊಬ್ಬರಿದ್ದರು, ನರೇಂದ್ರ ಪ್ರಸಾದರವರು, ಆದರೆ ಅವರೀಗ ತೀರಿಕೊಂಡಿದ್ದಾರೆ. ಕೆಲವೇ ಕೃತಿಗಳನ್ನು ವಿಮರ್ಶಿಸಿದ್ದಾರಾದರೂ ತೀಕ್ಷ್ಣತೆಯಿತ್ತು. ಅವರು ನನಗೆ ಗುರುಗಳೂ ಆಗಿದ್ದರು. ಅವರು ಉತ್ತಮ ಚಲನಚಿತ್ರ ನಟರೂ ಆಗಿದ್ದರು.

ಕೆ.ಜಿ. ಶಂಕರನ್ ಪಿಳ್ಳೈ :

* ನೀವು ಕಾವ್ಯವನ್ನು ಹೇಗೆ ವಿವರಿಸುತ್ತಿರಿ ?

ಕಾವ್ಯವನ್ನು ಹಲವು ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಆದರೆ ನನ್ನ ಪ್ರಕಾರ, ವೈಯಕ್ತಿಕವಾಗಿ

ಹಾಗೂ ಪ್ರಾಪಂಚಿಕವಾಗಿ ತನ್ನನ್ನು ತಾನು ಕಂಡುಕೊಳ್ಳವುದು ಹಾಗೂ ನಾನು ನನ್ನ ವರ್ತಮಾನದ ಇತಿಹಾಸವನ್ನು ಕಂಡುಕೊಳ್ಳುವುದರೊಂದಿಗೆ, ಇಡೀ ಚರಿತ್ರೆಯನ್ನು ವಿಶ್ಲೇಶಿಸುವುದು.

* ನೀವು ಬಂಡಾಯ ಕವಿಯೆಂದು ಗುರುತಿಸಲ್ಪಟ್ಟಿದ್ದೀರಿ... ಈ ಹಿನ್ನೆಲೆಯಲ್ಲಿ ಸಾಹಿತ್ಯದ ಸಾಮಾಜಿಕ ಜವಾಬ್ದಾರಿ ಏನು?

ಅದು ನನಗೆ ನಿಜಕ್ಕೂ ಭಾರವಾದ ಗುಣವಾಚಕ. ಸಾಮಾಜಿಕ ಜವಾಬ್ದಾರಿಯನ್ನು ಇಂದಿನ ಆಧುನಿಕ ಸನ್ನಿವೇಶವನ್ನೇ ಆಧಾರವಾಗಿರಿಸಿಕೊಂಡು ಹೇಳುವುದು ಉತ್ತಮ. ಕಾವ್ಯವೆಂಬುದು ಇಂದು ಹೆಚ್ಚು ತಳಸ್ಥರದ ಸಂಸ್ಕೃತಿಯನ್ನು ಪ್ರತಿನಿಧಿಸಬೇಕಾದ ಅನಿವಾರ್ಯತೆಯಿದೆ. ಆದರೆ, ಒಂದು ಸಣ್ಣ ಎಳೆಯಷ್ಟರ ಮಟ್ಟಿಗೆ ಬದಲಾವಣೆಗಳಾಗುತ್ತಿದ್ದು, ಹಾಗೂ ಎಲ್ಲೋ ಒಂದು ವಿಭಾಗದ ಓದುಗಾರರು ಎಚ್ಚೆತ್ತುಕೊಂಡು ಅವರ ಸಂಖ್ಯೆಯಲ್ಲಿ ವೃದ್ಧಿಕಾಣಸಿಗುತ್ತದೆ. ಮುಖ್ಯವಾಗಿ ಕಳೆದ 10 ವರ್ಷಗಳಿಂದೀಚೆಗೆ ಹೆಚ್ಚು ಚುರುಕಾದ ಹಾಗೂ ನಿಷ್ಣಾತರಾದ ಯುವ ಬರಹಗಾರರು ಬರುತ್ತಿದ್ದಾರೆ. ಅಷ್ಟೇ ಗುಣಮಟ್ಟವನ್ನೂ ಕಾಪಾಡುತ್ತಿದ್ದಾರೆ.

* ಬಂಡಾಯ ಸಾಹಿತಿಗಳ ಯಾವುದಾದರೂ ಸಂಘಟನೆ ಅಥವಾ ಚಳುವಳಿಗಳಿವೆಯೇ?

ಪವರತಿಯೊಬ್ಬ ಕವಿಯೂ ಸಹ ಒಂದೊಂದು ಚಳುವಳಿಯಾದ್ದರಿಂದ ಅದರ ಅವಶ್ಯಕತೆ ಬರಲಿಲ್ಲ. ಹಾಗೆಯೇ ಮಹಿಳಾ ಬರಹಗಾರ್ತಿಯರೂ ಸಹ ಇಂದಿನ ದಿನಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತೆರೆಯ ಮೇಲೆ ಬರುತ್ತಿದ್ದಾರೆ. ಅವರು ತೀಕ್ಷ್ಣವಾಗಿ ಬರೆಯುತ್ತಿದ್ದಾರೆ. ಹಾಗೂ ಲಿಂಗತ್ವದ ಕುರಿತು ಒಂದೆಡೆ ಬರೆದರೆ, ಸಾಮಾಜಿಕ ವಾಸ್ತವಗಳ ಕುರಿತೂ ಬರೆಯುತ್ತಿದ್ದಾರೆ. ಮುಖ್ಯವಾಗಿ ಸಾಮಾಜಿಕ ಸ್ಥಿತಿಗತಿಗಳನ್ನೂ ಹಾಗೂ ಮಹಿಳೆಯರಲ್ಲಿನ ಆಂತರಿಕ, ಭಾವನಾತ್ಮಕ ವಾಸ್ತವಗಳನ್ನು ಹೊರಗೆಡುವುತ್ತಿದ್ದಾರೆ. ಮಹಿಳೆಯೊಬ್ಬರ ಸಮಕಾಲೀನ ಚರಿತ್ರೆಯ ಓದುವಿಕೆಯನ್ನು ಹಿಡಿದಿಡುವುದು ಅತಿ ಮುಖ್ಯ.

* ಇತ್ತೀಚಿನ ದಿನಗಳಲ್ಲಿ ಯಾರು ಉತ್ತಮ ಯುವ ಕವಿಗಳು ಎಂಬುದು ನಿಮ್ಮ ಅನಿಸಿಕೆ?

ಪಿ.ಎನ್. ಗೋಪಿಕೃಷ್ಣನ್, ಟಿ.ಪಿ.ರಾಜೀವನ್, ಟಿ.ಪಿ. ರಾಮಚಂದ್ರನ್, ಅನ್ವರ್ ಅಲಿ, ವಿ.ಎಂ. ಜಿರಿಜಾ, ಅನಿತಾ ತಂಬಿ, ವೀರನ್ ಕುಟ್ಟಿ, ಪಿ. ರಾಮನ್... ಹೀಗೆ ಹಲವರಿದ್ದಾರೆ. . . ಅವರೆಲ್ಲಾ 2–3 ಕವನ ಸಂಕಲನಗಳನ್ನಷ್ಟೇ ಬಿಡುಗಡೆಗೊಳಿಸಿದ್ದರೂ ಸಕ್ರಿಯವಾಗಿ ಇದರಲ್ಲಿ ತೊಡಗಿದ್ದಾರೆ ಹಾಗೂ ಅವರದೇ ಆದ ಎಲ್ಲಾ ವೈಯಕ್ತಿಕ ಹಾಗೂ ಸಾಮಾಜಿಕ ಕಟ್ಟುಪಾಡುಗಳನ್ನು ಮೀರಿ ನಿಂತಿದ್ದಾರೆ. ಹಾಗೂ ಅವರ ಭಾಷಾಶೈಲಿಯೂ ಸಹ ತೀಕ್ಷ್ಣ ಸಂಭಾಷಣೆಗಳಿಂದ ಕೂಡಿದ್ದು, ಸಮಕಾಲೀನ ಸನ್ನಿವೇಶವನ್ನು ಎತ್ತಿ ಹಿಡಿಯುತ್ತದೆ.

* ಗಾಂಧೀವಾದ ಅಥವಾ ಕಮ್ಯೂನಿಸ್ಟ್‌ವಾದ ಇಂತಹ ಯಾವುದಾದರೂ ಸಿದ್ಧಾಂತಗಳು ಸಾಹಿತ್ಯದ ಮೇಲೆ ಪ್ರಭಾವ ಬೀರಿವೆಯೇ?

ಇಲ್ಲ. ಯಾವುದೇ ರೀತಿಯಾದ ಸಿದ್ಧಾಂತಗಳು ಕವಿಗಳ ಮೇಲೆ ಪ್ರಭಾವ ಬೀರಲು ಸಾಧ್ಯವಿಲ್ಲ. ಅಥವಾ ಯಾವುದೇ ರಾಜಕೀಯ ಸಿದ್ಧಾಂತಗಳು ಅವರನ್ನು ಆಳುವಷ್ಟರ

ಮಟ್ಟಿಗೆ ಬಂದಿಲ್ಲ. ಮುಖ್ಯವಾಗಿ ಈ ಎಲ್ಲಾ ಸಾಹಿತಿಗಳೂ ಅವರ ಸ್ವ-ಅನುಭವಗಳ ಉತ್ತೇಜನದಲ್ಲಿ ಬೆಳಕಿಗೆ ಬಂದವರು. ಅವರ ರಚನೆಗಳಲ್ಲಿ ಮೌಲಿಕವಾದ ಹಾಗೇ ನೈತಿಕವಾದ ಧೃಡತೆ ಹಾಗೂ ಬದ್ಧತೆಗಳಿವೆ. ಹಾಗೂ ನನ್ನ ಪ್ರಕಾರ ಸಿದ್ಧಾಂತವನ್ನು ಅಳವಡಿಸಿಕೊಳ್ಳುವುದು ಸಲ್ಲ. ಏಕೆಂದರೆ ಅಳವಡಿಸಿಕೊಂಡರೂ ಯಾವುದೇ ಪರಿಣಾಮವಾಗುವ ನಿರೀಕ್ಷೆಯಿಲ್ಲ. ಏಕೆಂದರೆ, ಕಮ್ಯೂನಿಸಂ ಬಲಹೀನಗೊಂಡಿದೆ ಹಾಗೂ ಗಾಂಧೀವಾದ ಬಲಹೀನಗೊಂಡು ಛಿದ್ರವಾಗಿದೆ. ಮೊದಲನೆಯದಾಗಿ ಯುವ ತಲೆಮಾರಿಗೆ ಈ ಸೈದ್ಧಾಂತಿಕ ಭ್ರಾಂತಿ ಹೊರಟುಹೋಗಿದೆ. ಇನ್ನು ಮುಂದೆ ಅವರು ಅವರನ್ನು ರಾಜಕೀಯ ಕವಿಯೆಂದು ಗುರುತಿಸಿಕೊಳ್ಳಲ್ಪಡಲು ಇಷ್ಟಪಡುವುದಿಲ್ಲ.

* ಸಾಹಿತ್ಯ ಜಾಗತೀಕರಣದ ಛಾಯೆಯಲ್ಲಿ ಹೇಗಿದೆ ?

ನಾವು ಸಾಹಿತಿಗಳು ಜಾಗತೀಕರಣವನ್ನು ಒಂದು ಸ್ಥಿತಿಯೆಂಬಂತೆ ವೀಕ್ಷಿಸುತ್ತಿದ್ದೇವೆ. ಜಾಗತೀಕರಣದ ಕುರಿತಾದ ವೈಯಕ್ತಿಕ ಮನಸ್ಸುಗಳ ಅಭಿಪ್ರಾಯಗಳು ಬಹುಪಾಲು ಎಲ್ಲಾ ಕಾವ್ಯಗಳಲ್ಲಿ ಕಾಣಸಿಗುತ್ತದೆ. ನಿಜಕ್ಕೂ ಜಾಗತೀಕರಣ ಎಲ್ಲವನ್ನೂ ವ್ಯಾಪಾರೀಕೃತಗೊಳಿಸಿ ವಾಣಿಜ್ಯಮಯವಾದ ಹಲವು ನೀತಿಗಳ ಮೂಲಕ ನಮ್ಮ ಜನರ ಸೃಜನಾತ್ಮಕವಾದ ಬದುಕನ್ನು ಕಸಿದುಕೊಳ್ಳಲಾಗುತ್ತಿದೆ. ಹಾಗಾಗಿ ಇದು ಸಂಪೂರ್ಣವಾಗಿ ಸಾಹಿತ್ಯಕ ಹಾಗೂ ಸಾಮಾಜಿಕ ವಾತಾವರಣವನ್ನು ಕಲುಷಿತಗೊಳಿಸುತ್ತಿದೆ.

* ಹಾಗಾದರೆ ಕೇರಳದಲ್ಲಿ ಯಾವುದೇ ರಾಜಕೀಯ ಸಂಘಟನೆಗಳು ಅಥವಾ ಕಾವ್ಯಾತ್ಮಕವಾದ ಸಂಘಟನೆಗಳು ಇಲ್ಲವೇ ?

ಆದರೆ, ಒಂದು ರೀತಿಯ ಬಾಂಧವ್ಯಪೂರಕವಾದ ಸಂಬಂಧಗಳು ಹಲವು ಜನಸಂಘಟನೆ ಹಾಗೂ ಸಾಹಿತ್ಯದ ನಡುವೆ ಬೆಸೆದುಕೊಂಡಿದೆ. ಹಾಗು ನೈಸರ್ಗಿಕ ಅಧ್ಯಯನ ಹಾಗೂ ಸಾಹಿತ್ಯಕ್ಕೆ ನೇರವಾದ ಸಂಬಂಧವಿದೆ. ಹಾಗೆಯೇ ಸಾಹಿತ್ಯಕ್ಕೆ ಹಾಗೂ ಲಿಂಗತ್ವಕ್ಕೆ ಜಾತಿಗೆ ನೇರವಾದ ಸಂಬಂಧವಿದೆ, ಹಾಗೆಯೇ ಕಮ್ಯೂನಿಸ್ಟರೊಂದಿಗೆ, ದಲಿತ ಸಂಘಟನೆಗಳೊಂದಿಗೆ ಹಾಗೂ ಗಾಂಧಿವಾದಿಗಳೊಂದಿಗೆ ಹೀಗೆ ನೇರವಾದ ಸಂಪರ್ಕವಿದೆ.

* ಕೇರಳದಲ್ಲಿ ದಲಿತ ಸಂಘಟನೆಗಳು ಹೇಗಿವೆ ?

ನಿಜಕ್ಕೂ ಶಕ್ತಿಯುತವಾಗಿದೆ. ಆದರೆ ಅವರಲ್ಲಿಯೇ ಗುಂಪುಗಾರಿಕೆಯು ಬಹಳಷ್ಟಿದೆ. ಹಾಗೂ ದಲಿತ ಸಾಹಿತ್ಯ ಹೆಚ್ಚು ನೈಜವಾದದ್ದು ಹಾಗೂ ಬಲಶಾಲಿಯಾದದ್ದು. ಇವರಲ್ಲಿ ಕೆಲವೊಬ್ಬರು ನಿಜಕ್ಕೂ ಉತ್ತಮ ಕಾವ್ಯವನ್ನು ರಚಿಸಿದ್ದಾರೆ. ರಾಘವನ್ ಅತ್ತೋಳಿ, ಪುರುಷೋತ್ತಮನ್, ಎಂ.ಪಿ. ಮನೋಜ್ ಇವರು ಪ್ರಾಮುಖ್ಯರು.

* ಕೇರಳದಲ್ಲಿ ಸ್ತ್ರೀವಾದ ಹೇಗಿದೆ ?

ಕೇರಳದಲ್ಲಿ ಸ್ತ್ರೀವಾದ ಕುರಿತಾದ ಪುಸ್ತಕಗಳಿಗೇನೂ ಸಮಸ್ಯೆಯಿಲ್ಲ. ಆದರೆ ಕಾವ್ಯಕ್ಕಿಂತ ಹೆಚ್ಚಾಗಿ ಈ ಕುರಿತ ಸಣ್ಣ ಕಥೆಗಳನ್ನು ರಚಿಸಿದ್ದಾರೆ. ಸಾರಾ ಜೋಸೆಫ್, ಕಮಲಾ ದಾಸ್, ಗಿರಿಜಾ, ದಿವ್ಯ ಈ ರೀತಿ ಹಲವು ಸೃಜನಶೀಲರು ಮುಖ್ಯವಾಗಿ ಸ್ತ್ರೀವಾದಿ ದೋರಣೆಗಳಿಗಾಗಿಯೇ ಉತ್ತಮ ಕೆಲಸ ನಿರ್ವಹಿಸುತ್ತಿದ್ದಾರೆ. ಆಧುನಿಕ ಯುವ

ಬರಹಗಾರರು ಸಾಮಾನ್ಯವಾಗಿ ಸಾಮಾಜಿಕ ಸಮಸ್ಯೆಗಳ ಯಾವುದಾದರೂ ಒಂದು ವಿಷಯವನ್ನು ಮಾತ್ರ ಕೇಂದ್ರೀಕರಿಸಿದ್ದಾರೆ. ಸಾಮಾನ್ಯವಾಗಿ ಪರಿಸರ, ಕೋಮುವಾದ, ಮಾನವ ಹಕ್ಕುಗಳು, ಜಾಗತೀಕರಣ, ದಲಿತ ಚಿಂತನೆ, ಲಿಂಗತ್ವದ ವಿಚಾರಗಳು, ರೈತ ವಿರೋಧಿ ನಿಲುವುಗಳು ಇತ್ಯಾದಿಗಳು. ಆದರೆ ಇಂತಹ ಕವನಗಳು ಪ್ರಚಾರ ಯೋಗ್ಯವಾಗಿರುವುದಿಲ್ಲ. ಸೈದ್ಧಾಂತಿಕವಾದ ಉದ್ವೇಗದಲ್ಲಿ ಇಂತಹ ಹಲವು ಸಾಹಿತ್ಯಗಳು ಬರುತ್ತಿವೆ.

* ನಾವು ನಮ್ಮ ದೇಶದ ಇತರ ಭಾಷೆಗಳಿಗೆ ಹೋಲಿಸಿದರೆ, ಮಲಯಾಳಂ ಸಾಹಿತ್ಯ ಹೇಗಿದೆ ?

ನನ್ನ ಪ್ರಕಾರ ಮಲಯಾಳಂ ಸಾಹಿತ್ಯ ಇಂದಿನ ಸಮಾಕಾಲೀನ ಭಾರತೀಯ ಹಾಗೂ ವಿಶ್ವದ ಸಾಹಿತ್ಯಕ್ಕೆ ಸಮನಾಗಿ ಸಾಗುತ್ತಿದೆ. ನಾನು ಇಂಡೋನೇಷ್ಯಾದ, ಲ್ಯಾಟಿನ್ ಅಮೇರಿಕಾದ ಹಾಗೂ ಇತ್ತೀಚೆಗೆ ಲಂಡನ್ನಿನ, ಬೀಜಿಂಗ್, ಕರಾಚಿಯ ಸಾಹಿತ್ಯವನ್ನು ಓದಿದ್ದೇನೆ. ಆದರೆ ಅವೆಲ್ಲಾ ನನಗೆ ಸಹೋದರ/ರಿ ಸಾಹಿತ್ಯಗಳೆನಿಸಿವೆ! ಅದೇ ರೀತಿಯಾದ ಮನಸ್ಸು-ಭಾವನೆಗಳು, ಅಷ್ಟೇ ಜವಾಬ್ದಾರಿ, ಅಷ್ಟೇ ಕಾವ್ಯಾತ್ಮಕ ಸಾಮರ್ಥ್ಯ ಹಾಗೂ ಗ್ರಾಹ್ಯತ್ವ, ಅಷ್ಟೇ ಶಕ್ತಿ-ಸಾಧನೆಗಳ ತುಡಿತವಿದೆ. ಇನ್ನು ಮಲಯಾಳಂ ಸಾಹಿತ್ಯಕ್ಕೆ ಹಿಂದುರಿಗಿ ನೋಡುವ ಅನಿವಾರ್ಯತೆ ಎದುರಾಗುವುದೇ ಇಲ್ಲ. ಕೆಲವೊಮ್ಮೆ ನಾವು ಪ್ರಾಪಂಚಿಕವಾದ ಸಾಹಿತ್ಯವನ್ನೂ ಮೀರಿದ್ದೇವೆಂದು ಭಾಸವಾಗುತ್ತದೆ!

* ಮುಂದಿನ 10 ವರ್ಷಗಳಲ್ಲಿ ಮಲಯಾಳಂ ಸಾಹಿತ್ಯ ಹೇಗಿರುತ್ತದೆ ?

ನಿಜಕ್ಕೂ ಅದ್ಭುತವಾಗಿರುತ್ತದೆ. ಮುಖ್ಯವಾಗಿ ನಾವು ನಮ್ಮ ಪಾರಂಪರಿಕ ಸಾಹಿತ್ಯವನ್ನು ಮರಳಿ ತರಬೇಕಿದೆ, ಸೌಂದರ್ಯ ಶಾಸ್ತ್ರದ ಹಿನ್ನಲೆಯಲ್ಲಿ ಕಾವ್ಯ ರಚಿಸಬೇಕಿದೆ, ಇತರ ಭಾಷೆಗಳಿಂದ ತರ್ಜುಮೆಗಳಾಗಬೇಕಿದೆ, ಶಿವಪ್ರಕಾಶ್‌ರವರ ಹಲವು ಕೃತಿಗಳು ತರ್ಜುಮೆಗಳಾಗಿವೆ. ಬಹುಶಃ ನಿಮ್ಮ ಕವಿತೆಗಳೂ ಕೆಲವು ದಿನಗಳಲ್ಲಿ ಬರಬಹುದು! ಮಲಯಾಳಿ ಜನರ ಮನಸ್ಸೇ ಹೀಗೆ ಸದಾ ಜಾಗೃತವಾಗಿರುತ್ತದೆ. ಮಾತ್ರವಲ್ಲದೆ ಎಲ್ಲಾ ಭಾಷೆಗಳಿಂದಲೂ ಸಂಪನ್ಮೂಲವನ್ನು ಸಂಗ್ರಹಿಸುವುದು ನಮ್ಮ ಪ್ರಾಂತೀಯ ಬೆಳವಣಿಗೆಗೆ ಸಹಾಯಕ.

* ಮುಂದಿನ ಯುವ ಪೀಳಿಗೆಗೆ ನಿಮ್ಮ ಸಲಹೆಯೇನು ?

ನಿಮ್ಮ ಕುರಿತು ನೀವು ಹೆಮ್ಮೆಯಿಂದಿರಿ. ನೀವು ಶ್ರಮವಹಿಸಿದರೆ ನಿಮ್ಮಿಂದ ಅದ್ಭುತವಾದ ಮಹಾಕಾವ್ಯಗಳೂ ಸಹ ಹುಟ್ಟುತ್ತವೆ. ನೀವು ಹೇಡಿಗಳಾಗಿದ್ದರೆ ಕವನಗಳೂ ಸಹ ಹೊರಬರುವುದಿಲ್ಲ.

* ಯಾವುದಾದರೂ ನಿಮ್ಮ ಕಾವ್ಯದ ಎರಡು ಸಾಲುಗಳನ್ನು ಹೇಳುವಿರಾ ?

"ಮೊಳಿಯೆರಿಯಲುಗಳುಡೆ ಪಚ್ಚನಿರಯುಮ ಮೇಲ್ ನಮ್ಮುಡೆ ಶವದಾಹಂ"

(We are buried throughout our life, from the never ending excuses)

●

ಡಾ॥ ಎಸ್.ವಿ. ಪ್ರಭಾವತಿಯವರ ಎರಡು ಕವನಗಳು

ಒಡೆದ ಕನಸು

ಕನಸುಗಳು ಒಡೆಯುತ್ತದೆ ಕೈ
ಜಾರಿ ಕೆಳ ಬಿದ್ದು ಚೂರಾಗುತ್ತದೆ.
ಹೊಸ ಕನಸುಗಳು ಹುಟ್ಟುತ್ತವೆ.
ಅಸ್ಪಷ್ಟ ಆಕಾರ ಕಣ್ಣು ಮೂಗು

ಮೂಡಿ ರಾಗ ತಾಳ ಲಯಗಳೇ
ಕಾಣದಂತೆ ಹಾಡಿ ಕೊನೆಗೊಮ್ಮೆ
ಆಕಾರ ಪಡಕೊಳ್ಳುತ್ತವೆ ಮತ್ತೆ
ಒಡೆದು ಬೀಳುವ ಭಯದಲ್ಲೇ

ಬೆಳೆಯುತ್ತದೆ ಹೆಮ್ಮರವಾಗಿ
ಎಲೆಯುದುರಿಸಿ ಬೋಳಾಗಿ
ವರ್ಷಕ್ಕೊಮ್ಮೆ ಇದೇ ಆಟ
ಚೆಲ್ಲಾಟ ಪಾಪ ವಿಧಿಯ ಕಾಟ

ಡಾ॥ ಪ್ರಭಾವತಿ ನೋ.301, ಪಲ್ಲವ ಅಪಾರ್ಟ್‌ಮೆಂಟ್ಸ್, ಜಯನಗರ, 6ನೇ ಬ್ಲಾಕ್, ಬೆಂಗಳೂರು–560 082.

ದೇವಕಿ

ದೇವಕಿಯ ಮೇಲೊಂದು ಕತೆ
ಬರೆಯಲು ಕುಳಿತೆ ಗರ್ಭದಲ್ಲಿ
ಮಗು ಹೊತ್ತೂ ಹೊತ್ತೂ ಹೆರುವ
ಗದ್ದಲದಲ್ಲಿಯೇ ಇದ್ದ ದೇವಕಿ
ನಿನಗೆ ಕೇಳಿಸಲಿಲ್ಲವೆ ಆ ಕಂಸನ
ಆರ್ಭಟ! ಜೊತೆ ಜೊತೆಗೆ ಶ್ರೀ
ಕೃಷ್ಣನ ಅಳು! ಒಳ್ಳೆಯದರ ಜೊತೆ
ಜೊತೆಗೆ ಕೆಟ್ಟದ್ದೂ ಇರುತ್ತದೆ ಎಂದು
ನಂಬಿಯೇ ಮತ್ತೆ ಮತ್ತೆ ವಸುದೇವನ
ಜೊತೆ ಮಲಗಿದೆಯಾ? ಒಂದು ಮಗು
ವಿನ ತಲೆ ಒಡೆದ ರಕ್ತದ ಕೆಂಪಿನೊಂದಿಗೇ
ಹೊಸ ಮಗುವಿನ ಹೆರಿಗೆಯ ಕೆಂಪ ಬೆರೆಸಿದೆಯಾ?
ಬಲುಗಟ್ಟಿಗಿತ್ತಿ ನೀನು. ನಮಗೂ ಎರೆಯೇ ಆ ನಿನ್ನ ಬಾಡದ ಮೈಯ,
ಹೆರುವ ಒಡಲು, ಕರಗದ ದುಃಖದ ಸರಪಳಿಯೊಳಗೇ
ಚಿಗುರುವ ತಾಯ್ತನವ

– ಡಾ|| ಎಸ್.ವಿ. ಪ್ರಭಾವತಿ

ಉತ್ತರ – ದಕ್ಷಿಣ ಭಾರತಕ್ಕೆ ಕೊಂಡಿಗಳು

- ಬಿ. ವೈ. ಲಲಿತಾಂಬ

ಚಿಕ್ಕ ಹರೆಯದ ವಿದ್ಯಾರ್ಥಿ ದೆಸೆಯಲ್ಲಿ ಎಂ. ಎಸ್. ಪುಟ್ಟಣ್ಣನವರು ಬರೆದಿದ್ದ 'ಮಾಡಿದ್ದುಣ್ಣೋ ಮಹರಾಯ' ಕಾದಂಬರಿಯನ್ನು ಓದಿದ್ದು ಅದರಲ್ಲಿ ವರ್ಣಿಸಿದ್ದ ಕೆಲವು ಘಟನೆಗಳು ನನ್ನ ಮನಸ್ಸಿನಲ್ಲಿ ಇನ್ನೂ ಹಚ್ಚಹಸುರಾಗಿ ಉಳಿದಿದೆ.

ಕನ್ನಡದ ಆರಂಭ ಕಾಲದ ಕಾದಂಬರಿ ಅದು. ಒಬ್ಬ ಘೋರನಾದ ಕಳ್ಳನನ್ನು ಅತಿ ಚತುರತೆಯಿಂದ ಹಿಡಿದ ಸತ್ಯ ಕತೆಯೊಂದನ್ನು ಆಧರಿಸಿ ಅದನ್ನು ರಚಿಸಿದ್ದರು.

ಆ ಕಾದಂಬರಿಯಲ್ಲಿ ಇಂದೋರ್ ಸಂಸ್ಥಾನದ ಉಲ್ಲೇಖ ಬರುತ್ತದೆ. ಅಂದರೆ ಕನ್ನಡ–ಮರಾಠಿಯ ನಡುವೆ ಇದ್ದ ಬಾಂಧವ್ಯದ ಅಂಶ ಅದರಿಂದ ತಿಳಿಯುತ್ತದೆ.

ಇತ್ತೀಚೆಗೆ ನಾನು ಇಂದೋರಿನಿಂದ ಹಿಂದಿರುಗಿದ ಮೇಲೆ ಡಾ॥ ಚಿದಾನಂದ ಮೂರ್ತಿಯವರು ಸಂಶೋಧನೆಗಾಗಿ ನನಗೊಂದು ಅಂಶ ತಿಳಿಸಿ ಅದರ ತಪಾಸಣೆ ನಡೆಸುವಂತೆ ಸೂಚಿಸಿದರು. ಅವರಿಗೆ ಡಾ॥ ವಿ.ಕೆ. ಗೋಕಾಕರು ಹೇಳಿದ್ದರಂತೆ, ಇಂದೋರಿನ ಹೋಳ್ಕರ್ ಮನೆತನದವರು ಕನ್ನಡದ ಸೋಬಾನೆ ಪದಗಳನ್ನು ಹಾಡುವ ರೂಢಿ ಇತ್ತು ಎಂದು. ಅದಿನ್ನೂ ಹಾಗೆಯೇ ಮುಂದುವರಿದಿದೆಯೋ ಎಂದು ತಲಾಶಿಸಲು ಅವರು ನನಗಪ್ಪಣೆ ಇತ್ತಿದ್ದಾರೆ.

ಈ ವಿಷಯ ಪ್ರಸ್ತಾಪಿಸುತ್ತಿರುವಾಗ ನನಗೆ ನೆನಪಾಗುತ್ತಿದೆ, ಇಂದೋರಿನ ಆಡುಭಾಷೆ ಅನ್ನಲೋ ಹಳೆಯ ಜನಭಾಷೆ ಅನ್ನಲೋ ಅವರೆಲ್ಲ ಮಾಳವಿ ಭಾಷೆ ಆಡುತ್ತಾರೆ. ಮಾಳವಿ ಭಾಷೆ ವೈಜ್ಞಾನಿಕವಾಗಿ ಹಿಂದಿಯ ಉಪಭಾಷೆ ಅನ್ನಿಸಿಕೊಳ್ಳುತ್ತಿದೆ. ಮಾಳವಿಯ ಜಾನಪದ ಸಾಹಿತಿಗಳು ಹಲವಾರು ಜನರಿದ್ದಾರೆ. ಸಂಪ್ರದಾಯದ ಹಾಡುಗಳನ್ನು ಅವರು ಗಟ್ಟಿಯಾಗಿ ಇಟ್ಟುಕೊಳ್ಳಲು ಹೆಣಗುತ್ತಿದ್ದಾರೆ.

ಶ್ರೀ ನರಹರಿ ಪಟೇಲ್ ಅವರಿಗೆ ಈಗ ಸುಮಾರು 80ರ ಹರೆಯವಿರಬಹುದು.

ಗಂಡ ಹೆಂಡಿರಿಬ್ಬರೂ ಕೂಡಿದರೆಂದರೆ ಸರಿ, ಮೈ ಮರೆತು ಈ ಹಾಡುಗಳನ್ನು ಹಾಡುತ್ತಾರೆ.

1304, 3ನೇ ಹಂತ, 9ನೇ ವಿಭಾಗ, ನಾಗರಭಾವಿ, ಬೆಂಗಳೂರು–72.

ಪ್ರೊ. ಬಿ.ವೈ. ಲಲಿತಾಂಬರವರು ತುಂಬು ಉತ್ಸಾಹದ ಹಿಂದೀ ಭಾಷಾ ಅಧ್ಯಾಪಕಿ, ಉತ್ತಮ ಅನುವಾದಕಿ. ಬೆಂಗಳೂರಿನಿಂದ ಮಧ್ಯಪ್ರದೇಶದ ಇಂದೂರಿಗೆ ಸಂಶೋಧನೆಯ ದೃಷ್ಟಿಯಿಂದ ಓಡಿಹೋಗಿದ್ದವರು. ನಿವೃತ್ತಿ ಹೊಂದಿ ಮತ್ತೆ ಇಲ್ಲಿಗೆ ವಾಪಸ್ಸು ಬಂದಿದ್ದಾರೆ.

– ಸಂ.

ಪಟೇಲರು ಕೃತಿಗಳನ್ನೂ ರಚಿಸುತ್ತಾರೆ. ನಾನೊಮ್ಮೆ ಕನ್ನಡ-ಮಾಳವಿಯ ನಡುವೆ ಒಂದು ತೌಲನಿಕ ಕಾರ್ಯಕ್ರಮವನ್ನು ಯೋಜಿಸಬೇಕೆಂದು ಹಂಬಲಿಸಿದೆ.

ಹಂಬಲ ಪ್ರಾಮಾಣಿಕವಾಗಿತ್ತು. ಅದಕ್ಕೆ ತಕ್ಕಂತೆ ನಮ್ಮ ಕನ್ನಡದ ಲೇಖಕಿ ಶ್ರೀಮತಿ ಶಾಂತಾ ನಾಗರಾಜ ಅವರ ಅಳಿಯ ನೌಕರಿಯ ಮೇಲೆ ದೇವಾಸ್‌ಗೆ ಬಂದು ಸೇರಿದರು. ದೇವಾಸ್‌ಗೆ ಇಂದೋರಿನಿಂದ ಸುಮಾರು 40 ನಿಮಿಷ ಯಾತ್ರೆ.

ಅವರು ಬಂದರು. ಕನ್ನಡದ ಸಂಪ್ರದಾಯದ ಹಾಡುಗಳು, ಅವುಗಳನ್ನ ಮಾಳವಿ ಶೈಲಿಯಲ್ಲಿ ಹಾಡುವದು ನರಹರಿ ಪಟೇಲ್ ಹಾಗೂ ಅವರ ಶ್ರೀಮತಿಯವರ ಪಾಲಿಗೆ ಬಂದದ್ದು, ಅಂತೆಯೇ ಮಾಳವಿಯ ಪಾರಂಪರಿಕ ಗೀತೆಗಳನ್ನ ಶಾಂತಾ ಅವರು ಕನ್ನಡದ ಸಂಪ್ರದಾಯದಲ್ಲಿ ಹಾಡುವುದು, ಹೀಗೆ.

ಶಾಂತಾ ಅವರಿಗೆ ಅಲ್ಪ-ಸ್ವಲ್ಪ ಹಿಂದಿ ಬರುತ್ತಿತ್ತು. ಹಾಗಾಗಿ ಅವರು ಪಟೇಲರ ಬಳಿಯಲ್ಲಿ ಕುಳಿತು ಹಾಡುಗಳನ್ನು ಅರ್ಥ ಮಾಡಿಕೊಂಡರು. ರಾಗ ಜೋಡಿಸಿದರು.

ಪಟೇಲರಿಗೆ ಈ ಕೆಲಸ ಸ್ವಲ್ಪ ಕಬ್ಬಿಣದ ಕಡಲೆ ಅಗಿಯುವ ಕೆಲಸ. ಆದರೆ ಅವರ ಈ ಇಳಿ ವಯಸ್ಸಿನಲ್ಲೂ ಪ್ರಯೋಗಧರ್ಮಿ ಮನೋಭಾವಕ್ಕೆ ಯಾವ ಕೊರತೆಯೂ ಇರಲಿಲ್ಲ. ಕಷ್ಟಪಟ್ಟರು, ಕಲಿತರು.

ಕಾರ್ಯಕ್ರಮಕ್ಕೆ ಡಾ॥ ನರೇಂದ್ರ ಮೆಹ್ತಾ ಮುಖ್ಯ ಅತಿಥಿಗಳು ದಿಗ್ಭ್ರಮಿತರಾಗಿ ಕುಳಿತು ಕೇಳಿದರು, ಆನಂದಿಸಿ ತಲ್ಲೀನರಾದರು.

ರಸಪ್ರಜ್ಞೆ ಭಾಷೆಯಲ್ಲಿ ಅಲ್ಲ – ಭಾವನೆಗಳ ತಾದಾತ್ಮ್ಯದಲ್ಲಿ ಬೆಳೆಯಿತು, ವೃದ್ಧಿಸಿತು.

ನಾನು ಕರ್ನಾಟಕದಲ್ಲಿ ಸುಮಾರು 30 ವರ್ಷಗಳ ಕಾಲ ಹಿಂದಿ ಪಾಠವನ್ನೇ ಹೇಳಿದ್ದರೂ ಮೂಲತಃ ಕನ್ನಡದವಳು. ಕನ್ನಡವನ್ನು ಮೇಜರ್ ವಿಷಯವಾಗಿ ತೆಗೆದುಕೊಂಡು ಓದಿದವಳು, ಕನ್ನಡದಲ್ಲೇ ಓದು ಬರಹ ನಡೆಸಿ ಕನ್ನಡದ ಅಭಿಮಾನವನ್ನು ಗಟ್ಟಿಪಡಿಸಿಕೊಂಡವಳು.

ಇಂದೋರ್ ಹೇಳಿ-ಕೇಳಿ ಹಿಂದಿ ಪ್ರದೇಶ, ಅಲ್ಲಿ ಆಕಸ್ಮಿಕ ಅನ್ನುವಂತೆ ಹೊಳ್ಕರ್ ಪರಿವಾರದವರು ರಾಜ್ಯ ನಡೆಸಿದ್ದುದರಿಂದ ಮರಾಠಿ ಭಾಷೆಯು ಜನ ಅತಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಅಂದರೆ ಮಾಳವಿ ದಾಲ್-ಬಾಧಫಲೆ ಒಂದು ಕಡೆ, ಮರಾಠಿಯ ಪೂರಣ್ ಪೂರಿ (ಹೋಳಿಗೆ-ಒಬ್ಬಟ್ಟು) ಇವೆರಡರ ಸಡಗರ ಅಂತೆಯೇ ಅಲ್ಲಿಯ ಸರಾಫಾ ಬಜ್ಹಾರ್, ಬೆಳಿಗ್ಗೆ ಹೊತ್ತು ಅಸಲಿ-ನಕಲಿ ಒಡವೆ ಕೊಳ್ಳುವ ತರಾತುರಿ, ಬಡಾ ಸರಾಫಾದಲ್ಲಿ ಬರಿಯ ಚಿನ್ನದ ಬೆಳ್ಳಿಯ ಆಭರಣಗಳು. ಜನ ಬಹಳ ಕೊಳ್ಳುವ ಆಸಕ್ತಿ ತೋರಿಸುತ್ತಾರೆ.

ರಾತ್ರೆ ಆಯಿತೆಂದರೆ ಸರಿ, ಇಂದೋರ್ ಎರಡನೆ ಮುಂಬಯಿ ಅನಿಸಿಕೊಂಡಿದೆ.

ಅಂಗಡಿ ವ್ಯಾಪಾರ ಇದರಲ್ಲಿ ತೊಡಗಿದ ಜನ, ಅಂಗಡಿ ಬಾಗಿಲು ಮುಚ್ಚಿ ಗಾಡಿ ತೆಗೆದುಕೊಂಡು ರಾತ್ರೆ ಇಡೀ ಪರಿವಾರದೊಂದಿಗೆ ಸರಾಫಾ ತಿಂಡಿಗಳನ್ನು ತಿನ್ನುವುದಕ್ಕೆಂದು, ಜೀವನದ ಸವಿಯನ್ನು ಅನುಭವಿಸಲೆಂದು ಹಾಜರಾಗುತ್ತಾರೆ.

ತಿಂಡಿಗಳಿಗೆ ಹೆಸರು ಹೊತ್ತ ಊರು ಇಂದೋರ್. ಎಲ್ಲ ತರಹದ ಇಡೀ ದೇಶ-ಪ್ರಪಂಚದ ತಿಂಡಿಗಳೂ ಅಲ್ಲಿ ಸಿಗುತ್ತದೆ. ಹಾಗಿದ್ದೂ ಇಂದೋರಿನ ಪೋಹಾ ಅಂದರೆ ಎಂದಿಗೂ ಮರೆಯದ ರುಚಿ ಅದು. ನಾವು ಅವಲಕ್ಕಿ ಉಪ್ಪಿಟ್ಟು ಅನ್ನುತ್ತೀವಿ. ಈಗಿನ ಮಕ್ಕಳಿಗೆ ಅದು ಇಷ್ಟ ಆಗುವುದೇ ಇಲ್ಲ, ಆದರೆ ಇಂದೋರಿನ ಪೋಹಾ ಮರೆಯಕ್ಕಾಗದ ರುಚಿ. ಅರ್ಧ ರಾತ್ರಿಯಲ್ಲಿ ಯಾತ್ರೆ ಮಾಡುವಾಗ ಅಂಗಡಿ ಮುಂದೆ ನಿಮ್ಮ ಗಾಡಿ ನಿಂತರೂ ನಿಮಗೆ ಬಿಸಿ ಪೋಹಾ ಸಿಗುತ್ತೆ.

ಬೆಳಿಗ್ಗೆ ಹೊತ್ತು ನಿಮಗೆ ಪೋಹಾ-ಜಿಲೇಬಿ ಕಾಂಬಿನೇಷನ್, ಅದರ ಸವಿ ಸ್ವರ್ಗಸುಖ. ಇನ್ನು ಕಚೋಡಿ ಸಮೋಸೆ. ಕಚೋಡಿಯಲ್ಲೂ ಎರಡು ತರಹ, ಒಂದು ಬೇಳೆ ತುಂಬಿದ್ದು, ಇನ್ನೊಂದು ಆಲೂ ಕಚೋರಿ. ಆ ಮಾಡಿಹಾಕುವವನ ಆಸಕ್ತಿ ಮರೆಯಲಾಗದ್ದು.

ಇನ್ನೊಂದು ವಿಶೇಷವೆಂದರೆ, ಅಂಗಡಿಯವರಿಗೆ ಅಸೂಯೆ ಇಲ್ಲ. ನೀವು ಎಲ್ಲೇ ತಿಂದರೂ ಅವರು ತಿಂಡಿಯ ಸವಿಯನ್ನು ತೆಗಳುವುದಿಲ್ಲ.

ನಿಮ್ಮ ಜೊತೆಯಲ್ಲಿ ಅತಿಥಿಯನ್ನು ಕರೆದೊಯ್ದರೆ ಅವರ ಆತಿಥ್ಯ ಹೀಗಿರುತ್ತೆ. ನಿಮ್ಮ ಅತಿಥಿಗೆ ಅವರೇ ಮುಂದುವರಿದು ಹೇಳ್ತಾರೆ, ನಮ್ಮವರು ಹಣ ಕೊಡ್ತಾರೆ, ನಿಮ್ಮ ಹತ್ತಿರ ತೆಗೆದುಕೊಳ್ಳುವುದಿಲ್ಲ. ಅದು ಇಂದೋರಿನ ರೀತಿ ಅಂತ.

ಇಂದೋರಿನಲ್ಲಿ ಹಾಲು-ತುಪ್ಪ-ಬೆಣ್ಣೆ-ಮೊಸರಿನಲ್ಲಿ ಸ್ನಾನ ಮಾಡಬಹುದು. ಪ್ರಪಂಚದಲ್ಲಿ ನೀರಿನ ನದಿ ಇದ್ದರೆ ಇಂದೋರಿನಲ್ಲಿ ಎಮ್ಮೆಯ ಉತ್ಪಾದನೆಗಳ ನದಿ. ಮಳೆಗಾಲ ಕಳೆದ ನಂತರವಂತೂ ಈ ನದಿ ಪ್ರವಾಹ ಮತ್ತೂ ಹೆಚ್ಚಾಗುತ್ತೆ. ಅಂತೆಯೇ ಹಾಲು ಉತ್ಪಾದಕರು ಬೆಲೆ ಕಡಿಮೆ ಮಾಡ್ತಾರೆ. ಏಪ್ರಿಲ್ ಬಂದರೆ ಮತ್ತೆ ಹೆಚ್ಚು ಮಾಡ್ತಾರೆ.

ಇಂದೋರಿನ ಸಂಸ್ಕೃತಿ ಅಂದರೆ ಪಾನ್ ಗುಟಕಾ ಚಟ. ನಿವೇನಾದರೂ ಮಾತನಾಡಿಸಿದರೆ, ಅರ್ಧ ಬಾಯಿ ಉತ್ತರ ನಿಮಗೆ ಸಿಗುತ್ತೆ. 'ಹೌ' ನಿಮ್ಮ ಪ್ರತಿಯೊಂದು ಪ್ರಶ್ನೆಗೆ ಸಿಗುವ ಜವಾಬು. ಇಂದೋರಿನಲ್ಲಿ ಜನಕ್ಕೆ ಸಿಟಿಬಸ್‌ನ ಪ್ರಯಾಣ ಗೊತ್ತೇ ಇಲ್ಲ. ಅಲ್ಲೆಲ್ಲಾ ಟೆಂಪೋಗಳು. ಇತ್ತಿಚೆಗೆ ಕೈಲಾಶ್ ವಿಜಯ ವರ್ಗಿಯ ಮೇಯರ್ ಆಗಿದ್ದಾಗ ದೇಶದ ಮಹಾನಗರಗಳಲ್ಲೆಲ್ಲಾ ಯಾತ್ರೆ ಮಾಡಿ ಇಂದೋರನ್ನ ಬೆಂಗಳೂರಿನಂತೆ ಮಾರ್ಪಡಿಸಬೇಕೆಂದು ಸಾಕಷ್ಟು ಪ್ರಯತ್ನಪಟ್ಟ.

ಆಂದರೆ ಇಂದೋರ್ ನಗರದ ಯಾತ್ರಾ ವಾಹನವೆಂದರೆ ಹಳೆಯ ಮುರುಕಲು ಟೆಂಪೋಗಳು. ಅದರಲ್ಲಿ ನೀವು ಕುಳಿತರೆ ನಿಮಗೆ ಟೆಂಪೋ ಚಾಲಕರು ನಿರ್ವಾಹಕರ ಉದಾರ ಹೃದಯದ ಪರಿಚಯವಾಗುತ್ತೆ. 8-10 ಜನ ಕುಳಿತುಕೊಳ್ಳುವಂತೆ ಮಾಡಿರುವ

ಟೆಂಪೋದಲ್ಲಿ ಏನಿಲ್ಲವೆಂದರೆ 20 ಜನಗಳನ್ನಾದರೂ ಸೇರಿಸಿ, ಜನರ ಭಾರಕ್ಕೆ ಒಂದು ಕಡೆಗೆ ವಾಲಿದ ಟೆಂಪೋವನ್ನ ಯುದ್ಧ ವೀರನಂತೆ ಇವರಿಬ್ಬರೂ ನಡೆಸುತ್ತಾರೆ. ಕುಳಿತವರಿಗೆ ಕೇಳಿಸುವ ಒಂದು ಶಬ್ದ 'ಸಕ್ಕೋ ಸಕ್ಕೋ' ಭಾಷಾವಿದಳಾದ ನನಗೆ ಹಿಂದಿಯ ಸರಕೋನ. ಈಗ ಅತಿ ಸುಂದರವಾದ ವಾಲ್ವೊ ಸಿಟಿ ಬಸ್‌ಗಳು, ಮಾಲ್‌ಗಳು, ಟ್ರೆಷರ್ ಐಲೆಂಡ್, ಬ್ಲೂವಾಟರ್ ಪಾರ್ಕ್ ಬಂದು ಇಂದೋರಿನ ಟೆಂಪೋ 'ಸರಕೋ' ಸರಿದುಹೋಗಿದೆ. ಲೋಪವಾಗಿ ಸಿಕ್ಕಿದ್ದು ಮರೆಯಲಾರದ ಅನುಭವ.

ಇಂದೋರಿನ 'ಬಾಯಿ'ಗಳು ಸಮಾಜಶಾಸ್ತ್ರದ ಹಾಗೂ ಸಮಾಜವಾದದ ಎಲ್ಲರೂ ಒಂದೇ ಎನ್ನುವ ಭಾವನೆಯನ್ನು ಬೀರುವ ಸಾಮಾಜಿಕ ಭಾಷೆಯ ಬಳಕೆಯ ಪದ 'ಬಾಯಿ', ಮೂಲತಃ ಮರಾಠಿಯ ಮಹಿಳೆಗಾಗಿ ಪ್ರಯೋಗಿಸುವ ಗೌರವಸೂಚಕ ಪದ, ಗಂಡ ಕೂಡ ಹೆಂಡತಿಯನ್ನು ಕುರಿತಾಗಿ ಬೇರೆಯವರೊಂದಿಗೆ ಮಾತನಾಡುವಾಗ ಬಾಯಿ ಎಂದೇ ಬಳಸುತ್ತಾನೆ. ಬಾಯಿ ಅಜ್ಜಿಯಾಗಬಹುದು, ಮಾಲಿಕಳಾಗಬಹುದು, ಹೆಂಡತಿ, ಅಡಿಗೆಯವಳು, ಪಾತ್ರೆ ತೊಳೆಯುವ, ಕಸಬಳಿಯುವ, ಅಥವಾ ಬಾತ್‌ರೂಮ್ ತೊಳೆಯುವ ಮಹಿಳೆ ಎಲ್ಲರಿಗೂ ಬಳಸುವ ಪದ 'ಬಾಯಿ'.

ಮತ್ತೊಂದು ಮಾತು ನಮ್ಮೂರಿನಲ್ಲಿ ನಮ್ಮ ಮನೆಗೆ ಯಾರಾದರೂ ಬಂದರೆ ಆಯಾಸಗೊಂಡು ಬಂದಿರುವರೆಂದು ಅವರಿಗೆ ನೀರುಣಿಸುವ ಸೌಜನ್ಯ ಇತ್ತೀಚೆಗೆ ಮರೆಯಾಗಿದೆಯೆಂದೆ ಹೇಳಬಹುದು. ಇಂದೋರಿನಲ್ಲಿ ನೀವು ಯಾವುದೇ ಅಂಗಡಿಗೆ ಹೋದರೂ ಮೊದಲು ನಿಮಗಲ್ಲಿ ಕುಡಿಯಲು ನೀರು ಸಿಗುತ್ತದೆ.

ನಿಮ್ಮ ಮನೆಯ ಪಾತ್ರೆ ತೊಳೆಯುವ 'ಬಾಯೀ' ಮನೆಗೇನಾದರೂ ನೀವು ಹೋದರೆ ಅವಳು ಚಾಯ್ ಮಾಡಿಕೊಟ್ಟೇ ನಿಮ್ಮನ್ನ ವಾಪಸು ಕಳುಹಿಸುವುದು.

ಇಂದೋರಿನ ಇತಿಹಾಸ ಕಾಲದಲ್ಲೂ ಬಹುಶಃ ಬೆಂಗಳೂರಿನ ಆದರ್ಶದಲ್ಲಿ ಅದನ್ನ ಕಟ್ಟುವ ಪ್ರಯತ್ನ ನಡೆದಿತ್ತೆನಿಸುತ್ತದೆ. ಪ್ರತಿಯೊಂದು ಪದಾರ್ಥಕ್ಕೂ ಒಂದೊಂದು ಬಜಾರ್ ಇದ್ದೇ ಇರುತ್ತೆ. ಲೋಹಾ ಬಜಾರ್ ಅಂದರೆ ಕಬ್ಬಿಣದ ಪಟ್ಟಿಯ ಬಜಾರ್, 'ಮಾರೋಠಿಯಾ ಬಜಾರ್', ಪನ್ಸಾರಿಗಳ ಬಜಾರ್, ಆ ಇಡೀ ಬೀದಿಯಲ್ಲಿ ನಿಮ್ಮ ಕಣ್ಣನ್ನ ಸೂರೆಗೊಳ್ಳುವ ಗೋಡಂಬಿ, ದ್ರಾಕ್ಷಿ, ಬಾದಾಮಿ, ಅಕ್ರೋಟ್, ಪಿಸ್ತಾಗಳ ರಾಶಿ ಪೇರಿಸಿದ ಅಂಗಡಿಗಳು ಇಡೀ ಬೀದಿಯಲ್ಲಿ ಸಜ್ಜಾಗಿರುತ್ತವೆ. ಸಾಂಬ್ರಾಣಿ, ಧೂಪ, ಮಾಲೆ, ದೇವರ ಬಟ್ಟೆ, ಅರಿಶಿಣ-ಕುಂಕುಮ, ಪನ್ಸಾರಿ ಸಾಮಾನುಗಳು ಏನೆಲ್ಲಾ ಸಾಮಾಜಿಕ ಹವ್ಯಾಸದ ವಸ್ತು ನಿಮಗಲ್ಲಿ ಸಿಕ್ಕೇ ತೀರುತ್ತೆ. ಮೆಹಂದಿ ಅಂಗಡಿಗಳು ಸಾಲು ಸಾಲಾಗಿವೆ. ಜಡೀ-ಬೂಟಗಳು ಅಂದರೆ ಮೂಲಿಕೆಗಳು - ಈ ಬಜಾರ್‌ನಲ್ಲಿ ಹೋಗುವ ಆನಂದವೆ ಬೇರೆಯದು.

ಅತಿ ದೊಡ್ಡ ಕಪಡಾ ಬಜಾರ್ ಎಲ್ಲರಿಗೂ ಎಲ್ಲ ತರಹೆಯ ಬಟ್ಟೆಗಳು. ಯಾವುದಿಲ್ಲ ಅಂತ ಇಲ್ಲ. ಯಾವಾಗ ನೋಡಿ, ಗಿಜಿ-ಗಿಜಿ ಅಂತಿರುತ್ತೆ. ಅದರ ಮಧ್ಯದಲ್ಲೆ ಪ್ಲಥ್ವೀಲೋಕ

ಹೋಟೆಲ್ ಮೂರನೆಯ ಅಂತಸ್ತಿನ ಮೇಲೆ, ಈರುಳ್ಳಿ-ಬೆಳ್ಳುಳ್ಳಿ ಇಲ್ಲದ ಅಪ್ಪಟ ತುಪ್ಪದಿಂದ ಊಟ. ಮನೆಯ ಊಟದ ಸವಿ! ಭಾನುವಾರದ ದಿನವಂತೂ ಬಾಫಲೆ ಊಟ. ಬಾಫಲೆ ಅದರ ಮೇಲೆ ತುಪ್ಪ ಸುರಿಯುತ್ತಾರೆ. ಗೋಧಿಹಿಟ್ಟಿನ ಲಾಡು, ತೊಗರಿ ದಾಲ್, ಅಲೂ ಸಬ್ಜಿ! ಎಷ್ಟು ಹೊಟ್ಟೆ ಬೇಡಿದರೆ ಅಷ್ಟು ತಿನ್ನಿ, ಈರುಳ್ಳಿ-ಬೆಳ್ಳುಳ್ಳಿ ಇಲ್ಲದ ಸವಿಯಾದ ಊಟ. ಒಂದು ಊಟಕ್ಕೆ 50 ರೂಪಾಯಿ.

ಹೋಟೆಲಿನ ಮಾತು ಬಂತೆಂದರೆ ಸರಿ ನೀಲಕಂಠನ ನೆನಪಾಗದೆ ಇರುವುದಿಲ್ಲ. ರೈಲ್ವೆ ಸ್ಟೇಷನ್ ಪಕ್ಕದಲ್ಲಿ ಹಲವಾರು ಹೋಟೆಲುಗಳಿದ್ದರೂ ನೀಲಕಂಠ್‌ಗೆ ಮಾತ್ರ ಜನ ತಪ್ಪಿಸಿಕೊಳ್ಳುವುದಕ್ಕೆ ಇಷ್ಟಪಡಲ್ಲ.

ಎಣ್ಣೆ-ತುಪ್ಪ ಹಾಕದೆ, ಈರುಳ್ಳಿ-ಬೆಳ್ಳುಳ್ಳಿ ಇಲ್ಲದೆ ಒಲೆಯಲ್ಲಿ ಸುಟ್ಟ ರೊಟ್ಟಿ, ಹೊಸ ಮಾವಿನಕಾಯಿ ಉಪ್ಪಿನಕಾಯಿ, ಮೆಣಸಿನಕಾಯಿ ಚಟ್ನಿ, ರಾಯತ, ಸಲಾಡ್, ಪುದೀನಾ-ಧನಿಯ ಚಟ್ನಿ, ಎರಡು ತರಹ ಸೂಖಿ ಸಬ್ಜಿ, ಎರಡು ರಸ್‌ವಾಲಿ ಸಬ್ಜಿ, ದಾಲ್, ಮೊಸರು, ಹಪ್ಪಳ, ಅನ್ನ, ಬಡಿಸುವವರು ಹತ್ತಾರು ಜನ-ಹೋಟೆಲ್ ಮಾಲೀಕರು ಮೂರು-ನಾಲ್ಕು ಜನ ಒಬ್ಬರ ಹಿಂದೆ ಇನ್ನೊಬ್ಬರು ಬಂದು ನಿಮ್ಮನ್ನ ಮುಗುಳ್ನಕ್ಕು ವಿಚಾರಿಸಿಕೊಳ್ತಾರೆ.

ನಿಮ್ಮ ಹೊಟ್ಟೆ ಕೆಟ್ಟಿದ್ದರೂ ನೀಲಕಂಠ ನಿಮ್ಮ ಹೊಟ್ಟೆ ವಿಷವನ್ನ ಕರಗಿಸಿಬಿಡ್ತಾನೆ.

ಇಂದೋರ್ ಅಷ್ಟೇನೂ ದೊಡ್ಡದು ಅನಿಸದಿದ್ದರೂ ಮಧ್ಯಪ್ರದೇಶದ ಅತಿ ದೊಡ್ಡ ಊರು, ಮಧ್ಯ ಪ್ರದೇಶದ ಸಾಂಸ್ಕೃತಿಕ ನಗರ ಅಂತ ಅದನ್ನ ಅಂತಾರೆ. ಇಲ್ಲಿ ಪಂಡಿತ ಅಂದರೆ ಬ್ರಾಹ್ಮಣರಿಗೆ ಬಹಳ ಗೌರವ ಕೊಡ್ತಾರೆ. ತಿಲಕ್‌ಧಾರಿ ಬ್ರಾಹ್ಮಣ ಧೂರ್ತ ಆಗಿದ್ದರೂ ಅವನ 'ಪಾಯ್‌ಲಾಗೆ' ಅವರ ಕಾಲಿಗೆ ಬಿದ್ದು ಪುಣ್ಯ ಪಡೆಯುವ ಹಂಬಲ ಇಲ್ಲಿ ಜನರಿಗೆ ಹೆಚ್ಚು.

ಊರ ಮಧ್ಯೆ ಅಹಲ್ಯಾ ಬಾಯಿ ಹೋಳ್ಕರಳ ರಾಜವಾಡ ಇದೆ. 1984ರಲ್ಲಿ ಸಿಕ್ಖರ ವಿರುದ್ಧ ನಡೆದ ಹಲ್ಲೆಗಳಲ್ಲಿ ರಾಜವಾಡ ಕೂಡ ಸುಟ್ಟು ಹೋಗಿದೆ. ಹಾಗಾಗಿ ಅದರ ಜೀರ್ಣೋದ್ಧಾರದ ಪ್ರಯತ್ನ ನಡೆಯುತ್ತಲೇ ಇದೆ.

ಸಂಜೆ ವೇಳೆಯಲ್ಲಿ ಜನ ತಮ್ಮ ವಿರಾಮ ಕಾಲದಲ್ಲಿ ಅದರ ಎದುರಿಗಿನ ಚಿಕ್ಕ ಉದ್ಯಾನವನದಲ್ಲಿ ಹೋಗಿ ಕುಳಿತುಕೊಳ್ಳುತ್ತಾರೆ. ಇತ್ತೀಚೆಗೆ ಕೈಲಾಶ್ ವಿಜಯ ವರ್ಗೀಯ ಬಂದ ನಂತರ ಸಂಜೆ ಹೊತ್ತು ಅಲ್ಲಿ ಸಂಗೀತದ ರೆಕಾರ್ಡ್ ಇತ್ಯಾದಿಗಳನ್ನು ಹಾಕಿಸುತ್ತಿದ್ದಾರೆ.

ಕುದುರೆ ಸವಾರಿ ಇತ್ಯಾದಿ ಕೂಡ ನಡೆಯುತ್ತೆ.

ಊರಿಗೆಲ್ಲ ಒಂದು ವಿಶ್ವವಿದ್ಯಾನಿಲಯ. ಅಹಿಲ್ಯಾಬಾಯಿ ಅಂದರೆ ಜನಕ್ಕೆ ಬಹಳ ಆದರ-ಪ್ರೀತಿ ಇರುವುದರಿಂದ ಎಷ್ಟೋ ಸಂಸ್ಥೆಗಳಿಗೆ ಅವಳ ಹೆಸರನ್ನೇ ಇಟ್ಟಿದ್ದಾರೆ.

ಇಂದೋರ್ ವಿಶ್ವವಿದ್ಯಾನಿಲಯಕ್ಕೂ ಅಷ್ಟೆ, ದೇವಿ ಅಹಿಲ್ಯಾ ವಿಶ್ವವಿದ್ಯಾಲಯ ಅಂತಲೇ ಹೆಸರು.

ಇಡೀ ಮಧ್ಯಪ್ರದೇಶದಲ್ಲಿ ಅಷ್ಟೇ ಅಲ್ಲ, ಇಡೀ ದೇಶದಲ್ಲಿ ಈ ವಿಶ್ವವಿದ್ಯಾಲಯಕ್ಕೆ ಒಳ್ಳೆಯ ಹೆಸರಿದೆ. ಸುಮಾರು 200 ಎಕರೆ ಭೂಮಿಯ ನಡುವೆ ಇರುವ ಈ ವಿಶ್ವವಿದ್ಯಾನಿಲಯದಲ್ಲಿ ಇಂದಿನ ಅಗತ್ಯವನ್ನರಿತುಕೊಂಡು ವಿಜ್ಞಾನ ವಿಷಯಗಳಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲಾಗಿದೆ. ಮ್ಯಾನೇಜ್‌ಮೆಂಟ್, ಕಂಪ್ಯೂಟರ್ ಸೈನ್ಸ್, ಇನರ್ಜಿ, ಬಯೋಟೆಕ್ನಾಲಜಿ, ಬಯೋಕೆಮಿಸ್ಟ್ರಿ, ಇಲೆಕ್ಟ್ರಾನಿಕ್ಸ್, ಮೈಕ್ರೋ ಬಯೋಲಜಿ ಇತ್ಯಾದಿ ವಿಷಯಗಳು, ಮಾನಸಿಕ ವಿಷಯಗಳೆಂದರೆ ತೌಲನಿಕ ಭಾಷಾ ಸಂಸ್ಕೃತಿ ಅಧ್ಯಯನ ಸಂಸ್ಥೆ, ಸಮೂಹ ಸಂಚಾರ ಅಧ್ಯಯನ ಸಂಸ್ಥೆಗಳು, ಸಮಾಜ ವಿಜ್ಞಾನ ಅಂದರೆ ಅರ್ಥಶಾಸ್ತ್ರ ಅಧ್ಯಯನ ಸಂಸ್ಥೆ ಇಷ್ಟೆ.

ಹಣ ಸಂಪಾದಿಸುವ ಸಂಸ್ಥೆಗಳೆಂದರೆ ಕುಲಪತಿಗಳಿಗೆ ಪ್ರೀತಿ.

ಅದಿಲ್ಲವೆಂದರೆ ರಾಜಕೀಯ ಪ್ರಭಾವ ಇರಬೇಕು. ಇಲ್ಲವೇ ನೀವು ರಾಜಕೀಯ ಮಾಡ್ಬೇಕು.

ಅದಿಲ್ಲವೆಂದರೆ ನಿಮ್ಮ ಶಾಲೆಗೆ ಅಧೋಗತಿ, ವಿದ್ಯಾರ್ಥಿಗಳ ಪಾಡು ಹೇಳತೀರದ್ದು.

ಆಡಳಿತ ತಂತ್ರ ಅತಿ ಸೂಕ್ಷ್ಮದ್ದು. ಬದುಕಬೇಕೆಂದವರು ಯಾವ ಶಿಕ್ಷಣ ತಜ್ಞನೊಂದಿಗೂ ಹೃದಯವಂತಿಕೆಯನ್ನ ತೋರಿಸಬಾರದು.

ಕುಲಪತಿಗಳಿಗೆ ಅಗದವರನ್ನ ಯಾರು ಹಲೋ ಅಂತ ಕೂಡ ಹೇಳಬಾರ್ದು, ಹೇಳಿದರೆ ಬ್ರಾಂಡೆಡ್ ಆಗ್ತಾರೆ.

ಇಂದೋರಿನ ಪಕ್ಕದಲ್ಲೇ ಎರಡು ಐತಿಹಾಸಿಕವಾದ ಸ್ಥಳಗಳಿವೆ ಮತ್ತೊಂದು ಭಾರತದ ಫೌಜುದಾರರ ಪ್ರಶಿಕ್ಷಣದ ಬೀಡು ಮತ್ತೆ ಮಾನವವಾದಿ ಡಾ॥ ಅಂಬೇಡ್ಕರರ ಹುಟ್ಟೂರು MHOU ಮ್ಹಾ.

ಖಂಡವಾ ಕಡೆಯಿಂದ ಹೋದರೆ ಮೊದಲು ಓಂಕಾರೇಶ್ವರ ಸಿಗುತ್ತೆ. ಜ್ಯೋತಿರ್ಲಿಂಗ ಮತ್ತೆ ಶಂಕರಾಚಾರ್ಯರು ಪ್ರತಿಷ್ಠಾಪನೆ ಮಾಡಿದ್ದ ಲಿಂಗ ಅಲ್ಲದೆ, ಅದಕ್ಕೂ ಹೆಚ್ಚಾಗಿ ನರ್ಮದೆ ಅಲ್ಲಿ 'ಓಂ'ನ ಆಕಾರ ಹೊತ್ತು ಹರಿಯುತ್ತದೆ.

ನಿಮಗೆ ದೇಶ ನಮ್ಮದು ಅನ್ನಿಸುವ ಮತ್ತೊಂದು ಅಂಶವೆಂದರೆ ಈ ನರ್ಮದೆಯ ನಡುವಿನಲ್ಲೇ ಒಂದು ಸಣ್ಣ ತೊರೆ ಹರಿಯುತ್ತದೆ. ಅದರ ಹೆಸರು ಕಾವೇರಿ ಅಂತ. ಕರ್ನಾಟಕದ ಕಾವೇರಿಗೂ ಅದಕ್ಕೂ ಯಾವುದೇ ಸಂಬಂಧವಿರದಿದ್ದರೂ ನಮ್ಮ ನದಿಯ ಜೊತೆ ಅದಕ್ಕೆ ಹೆಸರಿನ ಸಂಬಂಧವಿದೆ.

ಅಲ್ಲಿಂದ ಕಾಡು-ಘಟ್ಟ ಪ್ರದೇಶದ ಏರಿಳಿತಗಳನ್ನ ದಾಟಿದರೆ ಇಂದೋರ್ ಸಿಗುತ್ತೆ. ಇಂದೋರಿಗೆ ಬಂದರೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಭಕ್ತರ ನೆನಪುಗಳು. ಮಧ್ಯ ಭಾರತ ಹಿಂದಿ ಸಾಹಿತ್ಯ ಸಮಿತಿ – ಗಾಂಧೀಜಿ 1918ರಲ್ಲಿ ಆ ಭವನಕ್ಕೆ ಗುದ್ದಲಿ ಪೂಜೆ ಮಾಡಿದ್ದರಂತೆ. ಅಲ್ಲಿ ಕುಳಿತುಕೊಂಡು ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ದಕ್ಷಿಣ ಭಾರತದಲ್ಲಿ ಹಿಂದಿ ಪ್ರಚಾರ ಸಭೆಯನ್ನು ರಚಿಸಬೇಕೆಂದು ನಿರ್ಣಯಿಸಿ ತಮ್ಮ ಮಗ ದೇವದಾಸ ಗಾಂಧಿಯನ್ನ ಕಳುಹಿಸಿಕೊಟ್ಟಿದ್ದರಂತೆ. 1936ರಲ್ಲಿ ಭವನ ಎದ್ದು ನಿಂತಾಗ ಆ ಭವನದ ಉದ್ಘಾಟನೆಯನ್ನು ಕೂಡ ಗಾಂಧೀಜಿ ನೆರವೇರಿಸಿದ್ದರಂತೆ.

ಅಲ್ಲೊಂದು ಹಿಂದಿ ವಿಶ್ವವಿದ್ಯಾನಿಲಯವನ್ನು ರಚಿಸಬೇಕೆಂದು ಸಾಕಷ್ಟು ದೊಡ್ಡ ನಿವೇಶನವನ್ನು ಕೂಡ ನೀಡಿದ್ದರು. ಆ ಕೆಲಸ ಇಂದಿಗೂ ನೆರವೇರಿಲ್ಲ.

ಇಂದೋರಿನಲ್ಲಿ ಸಾಮಾಜಿಕ ಸಾಂಸ್ಕೃತಿಕ ಚಟುವಟಿಕೆಗಳು ನಡೆಯುತ್ತಲೇ ಇರುತ್ತವೆ.

ಶ್ರೀಮತಿ ಕೃಷ್ಣಾ ಅಗರವಾಲ್ ನಿರ್ಮಿಸಿದ್ದ ಜೀವನ ಜ್ಯೋತಿ ಗ್ರಾಮೀಣ ಮಹಿಳಾ ವಿಕಾಸ ಸಂಸ್ಥೆ ಇಂದಿಗೂ ಸಕ್ರಿಯವಾಗಿದೆ. ರಾಷ್ಟ್ರಪತಿಗಳಿಂದ ಪುರಸ್ಕೃತಳಾದ ಪದ್ಮಶ್ರೀ ಶಾಲಿನಿ ತಾಯಿ ಮೊಘ ತಮ್ಮ 90ರ ಹರೆಯದಲ್ಲಿ ಇಂದಿಗೂ ಈ ಸಂಸ್ಥೆಯ ಅಧ್ಯಕ್ಷಳು.

ಹಳ್ಳಿಯ ಕೊಳದಲ್ಲಿ ಈಜಾಡಿ ವಿಶೇಷಜ್ಞಳಾದ ಮಹಿಳೆಯರು ಅಲ್ಲಿ ಇತರ ಮಹಿಳೆಯರಿಗೆ ಈಜಾಡುವ ತಂತ್ರವನ್ನ ಕಳುಹಿಸಿಕೊಡುತ್ತಾರೆ.

'ಬರ್ಲಿ ಗ್ರಾಮೀಣ ಮಹಿಳಾ ವಿಕಾಸ ಸಂಸ್ಥಾನ' ಇಂತಹ ಮತ್ತೊಂದು ಸಮಾಜ ಕಾರ್ಯ ಸಂಸ್ಥೆ. ಸುಮಾರು 30 ವರ್ಷಗಳ ಇತಿಹಾಸ ಪಡೆದ ಈ ಸಂಸ್ಥಾನ ದೇಶದ ಗೌರವ ಅನಿಸಿಕೊಳ್ಳುವ ಹಂತವನ್ನ ತಲುಪಿದೆ. ಇಡೀ ಮಧ್ಯಪ್ರದೇಶದ ಗಿರಿಜನ ಗ್ರಾಮೀಣ ಮಹಿಳೆಯರು ಇಲ್ಲಿ ಬಂದಿದ್ದು ಆರು ತಿಂಗಳ ಕಾಲದಲ್ಲಿ ಮಹಿಳಾ ಸಶಕ್ತೀಕರಣದ ತರಬೇತಿ ಪಡೆಯುತ್ತಾರೆ.

ಸುಮಾರು ಆರು ಎಕರೆ ಭೂಮಿಯಲ್ಲಿ ಹರಡಿರುವ ಈ ಸಂಸ್ಥಾನದಲ್ಲಿ ಬಂದಿದ್ದು ನವಸಾಕ್ಷರರಾಗುವುದಷ್ಟೇ ಅಲ್ಲದೆ ನಮ್ಮ ಹಳ್ಳಿಯ ಜನರಿಗಾಗಿ ಬೋಧಪ್ರದವಾದ ಹಾಡುಗಳನ್ನು ರಚಿಸಿ, ಬೀದಿಯ ನಾಟಕಗಳನ್ನು ಕಟ್ಟಿ ಆಡಿ ಜೊತೆಗೆ ಕಸೂತಿ, ಗ್ರಾಮೀಣ ಕಲೆ ಮತ್ತು ಆರೋಗ್ಯ ಸ್ವಚ್ಛತೆಯನ್ನು ಕುರಿತಂತೆ ನಮಗೆಲ್ಲಾ ತಿಳಿಯ ಹೇಳುವ ಹಂತವನ್ನು ಮುಟ್ಟುತ್ತಾರೆ.

ಭಾರತ ಸ್ವಾಧೀನವಾದ ನಂತರ ಈವರೆಗೂ ದೇಶ ಶಿಕ್ಷಣ ನೀತಿ ಪದ್ಧತಿಗಳನ್ನು ಕುರಿತು ಚಿಂತನೆ ನಡೆಸುತ್ತಲೇ ಇದೆ. ನಮ್ಮ ವಿಶ್ವವಿದ್ಯಾನಿಲಯಗಳಿಂದ ಉಪಾಧಿ ಹೊತ್ತ ನಮ್ಮ ಯುವ ವರ್ಗ ತಮ್ಮನ್ನು ಸಮರ್ಥರೆಂದು ಅನುಭವಿಸುವ ಮಟ್ಟಕ್ಕೆ ತಲುಪುವುದೇ ಇಲ್ಲ. ಆದರೆ ಈ ಸಂಸ್ಥೆಯಲ್ಲಿ ಆರು ತಿಂಗಳ ಕಾಲ ತರಬೇತಿ ಪಡೆದ ಯುವತಿಯರು

ಇಡೀ ದೇಶದ ರಾಷ್ಟ್ರಮಟ್ಟದ ಸಭೆ ಸಮಿತಿಗಳಲ್ಲಿ ಕುಳಿತು ತಮ್ಮ ಸಲಹೆಗಳನ್ನು ನೀಡುತ್ತಾರೆ.

ಇಲ್ಲಿ ತರಬೇತಿ ಪಡೆದವರೆ ಇಲ್ಲಿ ಶಿಕ್ಷಕರು ಕೂಡ ಆಗುತ್ತಾರೆ.

ಮತ್ತು ವಿಶೇಷವೆಂದರೆ ಈ ಹಳ್ಳಿಗಳ ವಿಶಿಷ್ಟ ಅರಿವು ಇಲ್ಲಿ ಬೆಲೆ ಪಡೆಯುತ್ತದೆ.

ಸಂಸ್ಥೆಯ ನಿರ್ದೇಶಕಿ ಡಾ॥ಜನಕ್ ಪಲಟಾ ಮೆಕ್‌ಗಿಲಿಗನ್, ಓರ್ವ ಪಂಜಾಬಿ ಮಹಿಳೆ. ಮ್ಯಾನೇಜರ್ ಜಿಮೀ ಮಾಕ್‌ಗಿಲಿಗನ್, ಆತ ಐರಿಷ್ ದೇಶದ ಪ್ರಜೆ, ಹಾಗೂ ಜನಕ್ ಅವರ ಪತಿ.

ಪತಿ–ಪತ್ನಿಯರ ಬೌದ್ಧಿಕ ಹಾಗೂ ಶಾರೀರಿಕ ಶ್ರಮದ ಪರಿಣಾಮ ಈ ಸಂಸ್ಥೆಯನ್ನು ಸ್ವರ್ಗವಾಗಿ ಬಿತ್ತರಿಸಿದೆ. ಅದರಲ್ಲಿ ನಾನು, ಶೂದ್ರ ಎಲ್ಲರೂ ಭಾಗಿದಾರರು, ಭಾಗಿಗಳು.

ಇಂದೋರಿನಲ್ಲಿ ಸುಮಾರು 300 ಕನ್ನಡ ಪರಿವಾರಗಳಿವೆ. ಹೆಚ್ಚು ಜನ ನೌಕರಿಯ ದೆಸೆಯಿಂದ ಬಂದವರು, ಕೆಲವರೆಲ್ಲಾ ಮನೆ ಕಟ್ಟಿಕೊಂಡಿದ್ದಾರೆ. FLATS ಕಟ್ಟಿಕೊಂಡಿದ್ದಾರೆ. ನಮ್ಮ ಕನ್ನಡ ಸಂಘದಲ್ಲಿ ವರ್ಷಕ್ಕೆ 5–6 ಕಾರ್ಯಕ್ರಮಗಳನ್ನಾದರೂ ನಡೆಸಿಯೇ ತೀರುತ್ತೇವೆ.

ನಮ್ಮದೊಂದು ಶಾಲೆ ಇದೆ. ಕರ್ನಾಟಕ ವಿದ್ಯಾನಿಕೇತನ ಅಂತ ಅದರ ಹೆಸರು, ಆದರೆ ಮಾತ್ರ ಕನ್ನಡದ ಪಾಠ ಅಲ್ಲಿ ಹೇಳಲ್ಲ. ಇಂದೋರಿಗಾಗಿ ಕರ್ನಾಟಕದವರ ಕೊಡುಗೆ ಈ ವಿದ್ಯಾಸಂಸ್ಥೆ, ಇದರಲ್ಲಿ ಕಡಿಮೆ ಫೀಜ್‌ನಲ್ಲಿ ಉತ್ತಮ ಶಿಕ್ಷಣ ನೀಡಬೇಕೆಂಬ ಪ್ರಯತ್ನ ನಮ್ಮದು. ಗಣಿತ, ಇಂಗ್ಲೀಷ್, ಇವೆರಡಕ್ಕಾಗಿ ಇಲೆಕ್ಟ್ರಾನಿಕ್ ಲಾಂಗ್ವೇಜ್ ಲ್ಯಾಟಿನ್ ಕೂಡ ನೀಡಿದ್ದೇನೆ.

ನಮ್ಮೆಲ್ಲ ಕನ್ನಡದ ಕಾರ್ಯಕ್ರಮಗಳನ್ನು ಅಲ್ಲೇ ನಡೆಸುತ್ತೇವೆ ಕೂಡ, ಕನ್ನಡದವರು ಯಾರೇ ಬಂದರೂ ನಮ್ಮ ಶಾಲೆಯಲ್ಲಿ ನಾವವರಿಗೆ ಆತಿಥ್ಯ ನೀಡುತ್ತೇವೆ.

ಬೆಳಗಾವಿಯ ಕುಮಾರ ಗಂಧರ್ವನ ಔತ್ತರೇಯ ಸಂಗೀತದ ಕೃಷಿ ಇಂದೋರಿನ ಪಕ್ಕದ ದೇವಾಸ್‌ನಲ್ಲೇ ನಡೆದದ್ದು.

ಜ್ಯೋತಿರ್ಲಿಂಗದ ಮತ್ತೊಂದು ಪೌರಾಣಿಕನಗರ ಉಜ್ಜಯಿನಿ. ವಿಕ್ರಮಾದಿತ್ಯನ ಟೇಕರಿ (ಗುಡ್ಡ) ಕ್ಷಿಪ್ರಾ ನದಿ, ಅವಧೂತ ತಾಂತ್ರಿಕರ ಬೀಡು ಕಾಳಭೈರವನಿಗೆ ಅಲ್ಲಿ ಹೆಂಡ ಕುಡಿಸ್ತಾರೆ. ಭರತರಿ ಗುಹೆ ಇವೆಲ್ಲಾ ಭಾರತದ ಸಾಂಸ್ಕೃತಿಕ ಇತಿಹಾಸವನ್ನು ಸುರಕ್ಷಿತಗೊಳಿಸಿವೆ.

ಇಂದೋರಿನ ಹವಾಮಾನ ಹಿತಕರ, ಕರಿ ಮಣ್ಣಿನ ಭೂಮಿ, ಅಲ್ಲಲ್ಲಿ ಬಿರುಕಲು, ಕೊರಕಲು, ಹಾವು, ನಳ್ಳಿಗಳು, ಕಾಡು, ಮೇಡುಗಳು, ಯಾವುದೇ ಜಗಳ ಕದನ ಇಲ್ಲ, ಜನ ಆತ್ಮೀಯರು, ಒಮ್ಮೆ ಅಲ್ಲಿಗೆ ವಲಸೆ ಹೋದವರು ಅಲ್ಲಿಯೇ ಇರಬೇಕೆಂದು ಹಾತೊರೆಯುವ ಹಾಗೆ ಮಾಡುತ್ತಾರೆ.

ಇದು ನಮ್ಮ ದೇಶ, ನಮ್ಮ ಭೂಮಿ. ●

ಲಂಡನ್ನಿನ ಈಸ್ಟ್ ಎಂಡ್ ಆಸ್ಪತ್ರೆಯಲ್ಲಿ

ಡಾ॥ ಬಿ. ಜಿ. ಬೆನಕಪ್ಪ

ಲಂಡನ್ನಿನ ಈಸ್ಟ್ ಎಂಡ್‌ನ ಕ್ವೀನ್ ಎಲಿಜೆಬತ್ ಆಸ್ಪತ್ರೆ ಸುಪ್ರಸಿದ್ಧ (ಗ್ರೇಟ್ ಆರ್ಮನ್ ಸ್ಟ್ರೀಟ್) ಆಸ್ಪತ್ರೆಯ ಒಂದು ಅಂಗ ಸಂಸ್ಥೆ. ಈ ಆಸ್ಪತ್ರೆಯಲ್ಲಿ 1961 ರಿಂದ 1963ರವರೆಗೆ ಸ್ಥಾನೀಕ ವೈದ್ಯನಾಗಿ ಕೆಲಸ ಮಾಡಲು ಅವಕಾಶ ದೊರಕಿತ್ತು. ಈ ಸ್ಥಾನಕ್ಕಾಗಿ ಮೂರು ಜನ ಇಂಗ್ಲೀಷ್‌ನವರು ಮತ್ತು ಒಬ್ಬ ಭಾರತೀಯ ಅಭ್ಯರ್ಥಿಗಳ ಮಧ್ಯೆ ಸ್ಪರ್ಧೆ ನಡೆದು ನನಗೆ ಈ ಅವಕಾಶ ದೊರೆಯಿತು. ಅಂದಿನ ಕಾಲದಲ್ಲಿ ಜನಾಂಗೀಯ ದ್ವೇಶ ಅಷ್ಟಾಗಿ ಇರಲಿಲ್ಲ. ಸರ್ಕಾರವು ಶಿಕ್ಷಣ, ಆರೋಗ್ಯ ರಕ್ಷಣೆ ಮತ್ತು ಸಮಾಜ ಕಲ್ಯಾಣಕ್ಕಾಗಿ ಹೆಚ್ಚಿನ ಆಧ್ಯತೆಯನ್ನು ಕೊಡುತ್ತದೆ. ಅಲ್ಲದೆ ಪ್ರತಿ ವರ್ಷದ ಆಯವ್ಯಯದಲ್ಲಿ ಹೆಚ್ಚಿನ ಹಣವನ್ನು ಖರ್ಚು ಮಾಡುತ್ತದೆ. ಹುಟ್ಟಿನಿಂದ ಸಾವಿನವರೆಗೂ ಪ್ರತಿಯೊಬ್ಬ ಪ್ರಜೆಯ ಆರೋಗ್ಯವನ್ನು ಕಾಪಾಡುವುದು ಸರ್ಕಾರದ ಜವಾಬ್ದಾರಿ. ಬಡವ ಬಲ್ಲಿದರಿಗೂ ಒಂದೇ ವಿಧವಾದ ಚಿಕಿತ್ಸೆ ದೊರೆಯುತ್ತದೆ. ಇದಕ್ಕಾಗಿ ರಾಷ್ಟ್ರೀಯ ಆರೋಗ್ಯ ಸೇವೆ ಅಸ್ಥಿತ್ವದಲ್ಲಿದೆ. ಎರಡನೇ ಮಹಾಯುದ್ಧವಾದ ನಂತರ ಬ್ರಿಟನ್ನಿನ ಆರೋಗ್ಯ ಸಚಿವರಾಗಿದ್ದ ಲಾರ್ಡ್ ಬೆವಿನ್‌ರವರು ಇದಕ್ಕೆ ನಾಂದಿ ಹಾಕಿದರು. ಸುಮಾರು 50 – 60 ವರ್ಷಗಳಿಂದ ಈ ವ್ಯವಸ್ಥೆ ಅನುಷ್ಠಾನದಲ್ಲಿದೆ. ಅನೇಕ ಭಾರತೀಯ ವೈದ್ಯರು ಈ ಸೇವೆಯಲ್ಲಿ ತಮ್ಮನ್ನು ಅಳವಡಿಸಿಕೊಂಡಿದ್ದಾರೆ.

ಬ್ರಿಟಿಷ್ ಪ್ರಜೆಗಳು ಶಿಸ್ತು ಸಂಯಮವುಳ್ಳ ಜನ. ಪ್ರಜಾತಂತ್ರದ ಆದರ್ಶಗಳು ಮತ್ತು ಜೀವನದ ಮೌಲ್ಯಗಳನ್ನು ತಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆ. ಇವರು ಹೃದಯ ಸಿರಿವಂತಿಕೆಯುಳ್ಳವರು.

ನಾನು ಸ್ಥಾನೀಕ ವೈದ್ಯನಾಗಿ ಕೆಲಸ ಮಾಡುತ್ತಿದ್ದಾಗ ನಡೆದ ಕೆಲವು ಘಟನೆಗಳು ಮೇಲೆ ತಿಳಿಸಿದ ಜೀವನದ ಮೌಲ್ಯಗಳಿಗೆ ಉದಾಹರಣೆಗಳಾಗಿವೆ. ಸ್ಥಾನೀಕ ವೈದ್ಯನ ಕೆಲಸ ಬಹಳ ಜವಾಬ್ದಾರಿಯುತವಾದದ್ದು. ಆಸ್ಪತ್ರೆಯ ಆಡಳಿತ ಮತ್ತು ರೋಗಿಗಳ ಚಿಕಿತ್ಸೆ ಎರಡನ್ನು ನೋಡಿಕೊಳ್ಳಬೇಕಾಗಿತ್ತು.

1962ನೇ ಇಸವಿಯಲ್ಲಿ 12 ವರ್ಷದ ಡಯಾನಾ (ರಾಜಕುಮಾರಿ ಡಯಾನಾ ಅಲ್ಲ) ಬಾಲಕಿ ತೀವ್ರ ಮೂತ್ರ ಪಿಂಡಗಳ ಖಾಯಿಲೆಯಿಂದ ಆಸ್ಪತ್ರೆಗೆ ದಾಖಲಾದಳು. ಕೆಲವು ಪರೀಕ್ಷೆಗಳ ನಂತರ ಅವಳು ಮೂತ್ರ ಪಿಂಡಗಳ ಖಾಯಿಲೆಗಳಿಂದ ನರಳುತಿದ್ದಾಳೆ, ಚಿಕಿತ್ಸೆಗೆ ಸ್ಪಂಧಿಸುವ ಸಾಧ್ಯತೆ ಇಲ್ಲ ಎಂದು ತಿಳಿದು ಬಂದಿತು. ಹ್ಯಾಮರ್ ಸ್ಮಿತ್ ಆಸ್ಪತ್ರೆಯಲ್ಲಿ ಮೂತ್ರ ಪಿಂಡಗಳ ಖಾಯಿಲೆಗಳಿಗಾಗಿ ವಿಶೇಷ ಘಟಕವಿತ್ತು. ಅಲ್ಲಿಗೆ ಈ ರೋಗಿಯನ್ನು ಕಳುಹಿಸಿದೆವು. ಆದರೆ ಅವರು ಮಕ್ಕಳಿಗಾಗಿ ಡಯಾಲಿಸಿಸ್ ಚಿಕಿತ್ಸೆ ಇಲ್ಲ ಎಂದು ರೋಗಿಯನ್ನು ನಮ್ಮ ಆಸಪತ್ರೆಗೆ ವಾಪಸ್ ಕಳಿಸಿದರು. ರೋಗ ಉಲ್ಬಣಗೊಳ್ಳುತ್ತ, ಸಾವು

ಡಾ॥ ಬಿ.ಜಿ. ಬೆನಕಪ್ಪ, ನಂ. 788, 34ನೇ 'ಎ' ಕ್ರಾಸ್, 9ನೆ ಮೈನ್, 4ನೇ ಬ್ಲಾಕ್, ಜಯನಗರ, ಬೆಂಗಳೂರು–11.

ಹತ್ತಿರ ಬರುತ್ತಿತ್ತು. ನಾನು ಒಂದು ದಿನ ರೋಗಿಯನ್ನು ನಿನಗೆ ಏನು ಬೇಕು ಎಂದು ಕೇಳಿದೆ. ಅದಕ್ಕೆ ಅವಳು ಕ್ಲಿಫ್ ರಿಚರ್ಡ್‌ನನ್ನು ಆಸಪತ್ರೆಗೆ ಕರೆಸಿ, ಅವನನ್ನು ನೋಡಬೇಕು ಎಂದು ತಿಳಿಸಿದಳು. ಅವಳ ಆಸೆ ಈಡೇರಲೆಂದು ನಾನು ಕ್ಲಿಫ್ ರಿಚಾರ್ಡ್‌ನನ್ನು ಲಂಡನ್ ಸ್ಟುಡಿಯೋದಲ್ಲಿ ಫೋನಿನ ಮೂಲಕ ಸಂಪರ್ಕಿಸಿದೆ. ಈತ ಪ್ರಪಂಚದಲ್ಲೇ ಸುಪ್ರಸಿದ್ಧ ಪಾಪ್ ಗಾಯಕ. ಅಂದಿನ ಅವಿಭಾಜ್ಯ ಭಾರತದ ಲಾಹೋರ್ ನಲ್ಲಿ ಹುಟ್ಟಿ ತನ್ನ ಬಾಲ್ಯವನ್ನು ಕಳೆದವನು. ಇವನು ನನ್ನ ಬೇಡಿಕೆಗೆ ಒಪ್ಪುತ್ತಾನೋ ಇಲ್ಲವೊ ಎಂಬ ಅನುಮಾನದಲ್ಲಿದ್ದೆ. ಕೆಲವು ಕಾಲದ ನಂತರ ಆತನೇ ನನ್ನನ್ನು ಸಂಪರ್ಕಿಸಿ, ನಿಮ್ಮ ಆಸ್ಪತ್ರೆಗೆ ನಾನೇ ರೋಗಿಯನ್ನು ನೋಡಲು ಬರುತ್ತೇನೆ ಎಂದು ತಿಳಿಸಿದರು. ಮಾರನೇ ದಿನ ಮಧ್ಯಾಹ್ನ 3.00 ಘಂಟೆಗೆ ಕ್ಲಿಫ್ ರಿಚಾರ್ಡ್ ತನ್ನ ಸಹದ್ಯೋಗಿಗಳೊಂದಿಗೆ ಆಸಪತ್ರೆಗೆ ಭೇಟಿ ನೀಡಿದರು. ಅವರು ಹೂವು, ಹಣ್ಣು, ಚಾಕ್ಲೇಟ್ ಮತ್ತು ಹೊಸ ಬಟ್ಟೆಗಳನ್ನು ಆಸ್ಪತ್ರೆಯ ಮಕ್ಕಳಿಗಾಗಿ ತಂದಿದ್ದರು. ಡಯಾನಾಳ ಜೊತೆಗೆ ಕೆಲಕಾಲ ಕಳೆದರು ಮತ್ತು ಆಸ್ಪತ್ರೆಯ ಮಕ್ಕಳಿಗಾಗಿ ಪಾಪ್ ಸಂಗೀತವನ್ನು ನೀಡಿದರು. ಆಸ್ಪತ್ರೆಗೆ ಬರಲು ನಾನು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನನಗೆ ವಂದನೆಗಳನ್ನು ಸಲ್ಲಿಸಿದರು.

ಈ ಘಟನೆ ನಡೆದ ಕೆಲವೇ ದಿನಗಳಲ್ಲಿ ಡಯಾನಾ ಸಾವನ್ನಪ್ಪಿದಳು. ಎರಡು ವಾರಗಳ ನಂತರ ರೋಗಿಯ ಪೋಷಕರು ಆಸ್ಪತ್ರೆಯ ಎಲ್ಲಾ ಅಧಿಕಾರ ವರ್ಗದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದ್ದರು ಮತ್ತು ಡಯಾನಾಳ ಕೊನೆಯ ದಿನಗಳಲ್ಲಿ ಕ್ಲಿಫ್ ರಿಚಾರ್ಡ್ ರವರು ಆಸ್ಪತ್ರೆ ಬಂದಿದ್ದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ಈ ಘಟನೆ ಆತನ ಹೃದಯ ಸಿರಿವಂತಿಕೆಯನ್ನು ತೋರಿಸುತ್ತದೆ. ನಮ್ಮ ದೇಶಕ್ಕೆ ಬಂದ ಮೇಲೆ 1997ರ ಸುಮಾರಿನಲ್ಲಿ ಇಂದಿರಾಗಾಂಧಿ ಆಸ್ಪತ್ರೆ ಕೆಲಸ ಕಾರ್ಯಗಳು ಭರದಿಂದ ಸಾಗುತ್ತಿದ್ದವು. ನಾವು ಸಾರ್ವಜನಿಕರಿಂದ ಹಣ ಸ್ವೀಕರಿಸುತ್ತಿದ್ದೆವು. ಇದಕ್ಕಾಗಿ ನಾನು (ಆಸ್ಪತ್ರೆಗೆ ದೇಣಿಗೆ ನೀಡಲು) ನಾಡಿನ ಶ್ರೇಷ್ಠ ಕಲಾವಿದರೊಬ್ಬರನ್ನು ಸಂಪರ್ಕಿಸಿದೆ. ಮೂರು ಭಾರಿ ಮನೆಗೆ ಅಲಸಿ ನಕಾರಾತ್ಮಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು.

ಎರಡನೇ ಘಟನೆ :- ಪೀಟರ್ ಎಂಬುವ 12 ವರ್ಷದ ಬಾಲಕ. ತೀವ್ರ ಮೂರ್ಛೆ ರೋಗ ಮತ್ತು ಅಂಗವಿಕಲತೆಯಿಂದ ನರಳುತ್ತಿದ್ದ. ಮೂರ್ಛೆ ರೋಗ ಉಲ್ಬಣಗೊಂಡಿದ್ದರಿಂದ. ಅವನು ಕ್ಲೀನ್ ಎಲಿಜೆಬತ್ ಆಸ್ಪತ್ರೆಯ ತೀವ್ರ ನಿಗಾ ಘಟಕಕ್ಕೆ ದಾಖಲಾಗಿದ್ದನು. ಕೆಲವು ದಿನಗಳ ಚಿಕಿತ್ಸೆಯ ನಂತರ ಖಾಯಿಲೆ ನಿಯಂತ್ರಣಕ್ಕೆ ಬಂದಿತ್ತು. ಆದರೆ ಅವನು ಓಡಾಡಲು ಸಾಧ್ಯವಾಗುತ್ತಿರಲಿಲ್ಲ. ಇದಕ್ಕಾಗಿ ನಾವು ಆಸ್ಪತ್ರೆಯ ವತಿಯಿಂದ ಗಾಲಿ ಕುರ್ಚಿಯನ್ನು ಒದಗಿಸಬೇಕಿತ್ತು. ರೋಗಿಯ ಪೋಷಕರು ಸ್ಪೇನ್ ದೇಶಕ್ಕೆ ವಿಹಾರಾರ್ಥವಾಗಿ ತೆರಳಲು ಸ್ಥಳ ಕಾದಿರಿಸಿದ್ದರು (ಇಂಗ್ಲೆಂಡಿನಲ್ಲಿ ಎಲ್ಲ ವರ್ಗದ ಜನರು ಪ್ರತಿ ವರ್ಷ ಒಂದೆರಡು ವಾರಗಳ ಕಾಲ ಕುಟುಂಬದವರೊಂದಿಗೆ ವಿಹಾರಕ್ಕಾಗಿ ತೆರೆಳುತ್ತಾರೆ. ಇದನ್ನು ಕಡ್ಡಾಯವಾಗಿ ಆಚರಿಸುತ್ತಾರೆ). ಅವರು ವಿಹಾರ ಹೊರಡುವ ದಿನಗಳು ಹತ್ತಿರವಾಗುತ್ತಿದ್ದವು. ಅವನಿಗೆ ಗಾಲಿ ಕುರ್ಚಿಯನ್ನು ಜಾಗೃತೆಯಾಗಿ ಕಳಿಸಲು ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದನು. ಸಕಾಲಕ್ಕೆ ಬರುತ್ತದೋ ಇಲ್ಲವೋ ಎನ್ನುವ ಸಂಶಯವಿತ್ತು. ಪೋಷಕರು ಆಗ್ಗಾಗ್ಗೆ ಬಂದು ನನ್ನನ್ನು ಈ ಸೌಕರ್ಯಕ್ಕಾಗಿ ಪದೇ ಪದೇ ಕೇಳುತ್ತಿದ್ದರು.

ನಾನು ತಕ್ಷಣವೇ ಸಚಿವಾಲಯಕ್ಕೆ ಫೋನಿನ ಮೂಲಕ ಸಂಪರ್ಕಿಸಿದೆ. ಸಚಿವಾಲಯದಿಂದ ನನ್ನೊಡನೇ ಮಾತನಾಡಿದ ವ್ಯಕ್ತಿ ಆರೋಗ್ಯ ಸಚಿವಾಲಯದ ಮೊದಲನೇ ಕಾರ್ಯದರ್ಶಿ, ಅಂದರೆ ಅವರೇ ಆರೋಗ್ಯ ಸಚಿವರು. ಇದನ್ನು ಕೇಳಿದ ನಾನು ಸ್ವಲ್ಪ ಗಾಬರಿಯಾಗಿ ನಿಮಗೆ ನೇರವಾಗಿ ಮಾತನಾಡಿದಕ್ಕಾಗಿ ಕ್ಷಮಿಸಿ ಎಂದು ಕೇಳಿದೆ. ಅದಕ್ಕೆ ಆತ ಗಾಲಿ ಕುರ್ಚಿಯನ್ನು ಕಳುಹಿಸಿ ಕೊಡಲು ತಡವಾದದಕ್ಕೆ ಮತ್ತು ಇದರಿಂದ ರೋಗಿಗೆ ಅವರ ಕುಟುಂಬದವರಿಗೆ ತೊಂದರೆಯಾಗಿದ್ದಕ್ಕಾಗಿ ನನ್ನ ಕ್ಷಮೆಯಾಚನೆಯನ್ನು ಕೇಳಿದರು. ಮರುದಿನವೇ ಗಾಲಿ ಕುರ್ಚಿಯು ಆಸ್ಪತ್ರೆಯನ್ನು ತಲುಪಿತು. ರೋಗಿ ಮತ್ತು ಪೋಷಕರನ್ನು ವಿಹಾರಕ್ಕಾಗಿ ಬೀಳ್ಕೊಟ್ಟೆವು.

ಇಂಥಹ ಪರಿಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಸಚಿವಾಲಯವನ್ನು ಸಂಪರ್ಕಿಸಿದರೆ ಅಲ್ಲಿನ ಅಧಿಕಾರಿಗಳು ಸ್ಥಾನೀಕ ವೈದ್ಯರುಗಳ ಮೇಲೆ ಕೂಗಾಡಿ ವಿವರಣೆಯನ್ನು ಕೇಳುತ್ತಿದ್ದರು. ಇದು ನಮ್ಮಲ್ಲಿರುವ ಆಡಳಿತ ವ್ಯವಸ್ಥೆ.

ಮೂರನೇ ಘಟನೆ :– ಡಿಸೆಂಬರ್ ದಿನಗಳ ಚಳಿ ಕೊರೆಯುತ್ತಿತ್ತು. ಮಂಜು ಸುರಿಯುತ್ತಿತ್ತು. ಒಂದು ದಿನ ಸಾಯಂಕಾಲ ನಾನು ಆಸ್ಪತ್ರೆಯ ಹೊರರೋಗಿಗಳ ವಿಭಾಗದಲ್ಲಿ ಕರ್ತವ್ಯದಲ್ಲಿದ್ದೆ. 15 ರಿಂದ 20 ಮಕ್ಕಳು ಸಾಲಾಗಿ ಅವರ ಸರದಿಗಾಗಿ ಕಾಯುತ್ತಿದ್ದರು. ನಾನು ಮಕ್ಕಳನ್ನು ಪರೀಕ್ಷಿಸಿ, ಚಿಕಿತ್ಸೆಯನ್ನು ಸೂಚಿಸಿ ಕಳುಹಿಸಿಸುತ್ತಿದ್ದೆ. ಕೆಲಕಾಲದ ನಂತರ ವಯಸ್ಸಾದ ವ್ಯಕ್ತಿಯೊಬ್ಬ ಆ ಸಾಲಿನಲ್ಲಿ ನಿಂತಿದ್ದರು. ಅವರ ಸರದಿ 10ನೇಯದಾಗಿತ್ತು. ನನ್ನ ಬಳಿ ಇದ್ದ ದಾದಿ ಒಂದು ಕಿವಿಯಲ್ಲಿ ಇವರು ಈ ಸ್ಥಳೀಯ ಲೋಕಸಭಾ ಸದಸ್ಯರು ಎಂದು ತಿಳಿಸಿದರು. ನಾನು ತಕ್ಷಣವೇ ಎದ್ದು ಹೋಗಿ ಅವರನ್ನು ಗುರುತಿಸಿ ನಿಮಗೆ ತಕ್ಷಣವೇ ಚಿಕಿತ್ಸೆ ನೀಡುತ್ತೇನೆ ತಮ್ಮ ತೊಂದರೆಯೇನು ಎಂದು ಕೇಳಿದೆ. ನನ್ನ ಸಲಹೆಯನ್ನು ವಿನಯ ಪೂರ್ವಕವಾಗಿ ತಿರಸ್ಕರಿಸಿ ನನಗಿಂತ ಮುಂದೆ ಬಂದಿರುವ ಅನೇಕ ಮಕ್ಕಳಿದ್ದಾರೆ. ಅವರಿಗೆ ಮೊದಲು ಚಿಕಿತ್ಸೆ ಮಾಡಿ ನನ್ನ ಸರದಿಗಾಗಿ ಕಾಯುತ್ತೇನೆ ಎಂದು ತಿಳಿಸಿದರು. ಅವರ ಸರದಿ ಬಂದಾಗ ನಾನು ಅವರನ್ನು ಪರೀಕ್ಷಿಸಿದೆ. ಅವರಿಗೆ ಬಲಗೈ ಸ್ವಲ್ಪ ಊತ ಇತ್ತು. ತಕ್ಷಣವೇ ಒಂದು ಕ್ಷ–ಕಿರಣವನ್ನು ಮಾಡಿಸಿದೆ. ಅಲ್ಲದೆ ತಮಗೆ ನೋವು ಹೀಗೆಯೇ ಇದ್ದರೆ ಒಂದೆರಡು ದಿನಗಳಲ್ಲಿ ಎಲುಬಿನ ತಜ್ಞರನ್ನು ನೋಡಿ ಎಂದು ತಿಳಿಸಿದೆ. ಎರಡು ಮೂರು ದಿನಗಳ ನಂತರ ಅವರು ನನಗೆ ಕಾಗದ ಬರೆದು ನನ್ನ ಚಿಕಿತ್ಸೆಯಿಂದಲೇ ಕಾಯಿಲೆ ಪೂರ್ಣ ಗುಣವಾಗಿದೆ ಎಂದು ತಿಳಿಸಿ ನನಗೆ ಕೃತಜ್ಞತೆಗಳನ್ನು ಹೇಳಿದರು. ನಮ್ಮ ದೇಶದಲ್ಲಿ ಒಬ್ಬ ವಿ.ವಿ.ಐ.ಪಿ ಯನ್ನು ಕ್ಯೂನಲ್ಲಿ ನಿಲ್ಲಿಸಿದರೆ (ಅವರ ಅಭಿಮಾನಿಗಳು ಕರ್ತವ್ಯ ನಿರತವಾಗಿರುವ ವೈದ್ಯರುಗಳಿಗೆ ಕಪಾಳ ಮೋಕ್ಷ ಮಾಡುತ್ತಿದ್ದರು). ಇಂತಹ ಘಟನೆಗಳು ರಾಜ್ಯದ ಅನೇಕ ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯುತ್ತಿವೆ. ಇದು ನಮ್ಮ ಸಂಸ್ಕೃತಿ ಮತ್ತು ಪ್ರಜಾತಂತ್ರ ವ್ಯವಸ್ಥೆ.

ಇಂತಪ ಬ್ರಿಟಿಷ್ ಜನತೆಯಲ್ಲಿರುವ ಸಾಮಾಜಿಕ ನ್ಯಾಯ ನಮ್ಮ ಜನಗಳಿಗೆ ಯಾವಾಗ ದೊರೆಯುತ್ತದೊ ಎಂದು ಕಾದು ನೋಡಬೇಕಾಗಿದೆ. ನನ್ನ ಜೀವಿತದಲ್ಲಂತು ಸಾಧ್ಯವಿಲ್ಲ. ಮುಂದಿನ ಪೀಳಿಗೆಗೆ ಈ ಅವಕಾಶ ದೊರೆಯಲಿ ಎಂದು ಆಶಿಸುತ್ತ ಈ ಲೇಖನವನ್ನು ಮುಗಿಸುತ್ತೇನೆ.

●

ಇಟಾಲೋ ಕಾಲ್ವಿನೋ

– ಸುಮಾ ಎಂಬಾರ್

ಈ ಶತಮಾನ ಕಂಡ, ಅತ್ಯಂತ ಗೊಂದಲ ಹುಟ್ಟಿಸುವ, ಸಾಹಿತ್ಯ ಸಿದ್ಧಾಂತಗಳ ಎಲ್ಲ ಸಿದ್ಧ ಚೌಕಟ್ಟುಗಳ ಭಂಜಕ ಇಟಲಿಯ ಇಟಾಲೋ ಕಾಲ್ವಿನೋ. ಸಾಹಿತ್ಯ – ಸಂಸ್ಕೃತಿ ರಾಜಕಾರಣಕ್ಕೆ ಹಿಡಿದ ಕಂದೀಲಾಗಿರುವ ಸಿದ್ಧಾಂತಗಳೂ ಅದೇ ರಾಜಕಾರಣಕ್ಕೆ ಪಕ್ಕಾಗುತ್ತಿರುವ ಈ ಸಂದರ್ಭದಲ್ಲಿ, ಆ ಇಡೀ ಅಸ್ಮಿತೆಯ ಹೊರಗೆ ನಿಂತು ಬದುಕನ್ನು ಚೌಕಟ್ಟಿಲ್ಲದ ಬಯಲಲ್ಲಿ ಹಿಡಿಯುವ ಪ್ರಯತ್ನವಾಗಿ ಕಾಲ್ವಿನೋನ ಕಾಣ್ಕೆ ನಮ್ಮ ಮುಂದಿದೆ.

ಮುಖ್ಯವಾಹಿನಿಯ ಸಾಂಸ್ಕೃತಿಕ ಚರ್ಚೆಯಿಂದ ಪ್ರಭಾವಿತವಾದ ಸೃಜನಶೀಲತೆಯನ್ನು ಸೈದ್ಧಾಂತಿಕ ಇಕ್ಕಳದಿಂದ ಬಿಡಿಸಿ, ಆಘಾತ ನೀಡುವ ಪರ್ಯಾಯ ಕಥನಗಳ ಮೂಲಕ ನಮ್ಮ ಮುಂದಿಡಲು ಆತ ಮುಖ್ಯವಾಗಿ ಎರಡು ತಂತ್ರಗಳನ್ನು ಬಳಸುತ್ತಾನೆ. ಒಂದು ಮಕ್ಕಳ ಮತ್ತು ಜಾನಪದ ಸಾಹಿತ್ಯದ ಆಕೃತಿಯ ಮೂಲಕ, ಇನ್ನೊಂದು ವಿಡಂಬನಾ ಸಾಹಿತ್ಯದ ಆಶಯದ ಮೂಲಕ. ಕಥನ ಕಲೆಯ ಸಾಹಸಯಾತ್ರೆ ಆರಂಭವಾಗುವುದೇ ಜಾನಪದ ಸಾಹಿತ್ಯದಿಂದ. ಯಾವುದೇ ಪೂರ್ವಸಿದ್ಧತೆ, ಪೂರ್ವಾಗ್ರಹ ಹಾಗೂ ಪರಂಪರೆಯ ಆತಂಕಗಳನ್ನು ಮೀರಿ ಕಥನ ಕಲೆ ಬೆಳೆಯಲು ಜಾನಪದ

ವ್ಯಕ್ತಿ ಪರಿಚಯ

1923ರಲ್ಲಿ ಕ್ಯೂಬಾದಲ್ಲಿ ಹುಟ್ಟಿದ ಕಾಲ್ವಿನೋ. ಜೀವಿಸಿದ್ದು ಬರೆದಿದ್ದೆಲ್ಲಾ ಇಟಲಿಯಲ್ಲಿ. ಬರೆಯುವುದೇ ದಿವ್ಯವೆಂಬಂತೆ ಬದುಕಿದ ಕಾಲ್ವಿನೋ, ಕಥನಕಲೆಯ ವಿವಿಧ ಸಾಂಸ್ಕೃತಿಕ ಐತಿಹಾಸಿಕ ಆಯಾಮಗಳನ್ನು ಅಳೆಯುತ್ತಾ ಹೋದ. 1940ರಲ್ಲಿ ಇಟಲಿಯ ಫ್ಯಾಸಿಸ್ಟ್ ಅಧಿಕಾರದ ವಿರುದ್ಧ ಗೆರಿಲ್ಲಾ ಬಣ ಸೇರಿದ್ದವನು, ನಂತರ ಅದನ್ನು ತೊರೆದು 44ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ. 1945ರಲ್ಲಿ ಇಂಗ್ಲೀಷ್ ಸ್ನಾತಕೋತ್ತರ ಪದವಿ ಪಡೆದು, 45ರಲ್ಲಿ ಈನೌಡಿ ಎಂಬ ಪ್ರಕಾಶನದ ಸಂಪಾದಕನಾಗಿ ಕೆಲಸಮಾಡಿದ. 1952ರಲ್ಲಿ ಅನೇಕ ಸಣ್ಣ ಕಥೆಗಳ ಸಂಗ್ರಹ ಸಂಪಾದಿಸಿದ. ಇದು ಅತ್ಯಂತ ಜನಪ್ರಿಯ ಅವೃತ್ತಿಯಾಗಿದೆ. 1962ರಲ್ಲಿ ಅರ್ಜೆಂಟೈನಾದ ಜೂಡಿತ್ ಸಿಂಗರನ್ನು ಮದುವೆಯಾದ. 63ರಲ್ಲಿ ಇವನಿಗೆ ಪ್ರತಿಷ್ಠಿತ ವೇಲಾನ್ ಪ್ರಶಸ್ತಿ ದುರಕಿತು. ಇವನ "ಇನ್‌ವಿಸಿಬಲ್ ಸಿಟೀಸ್" – 1972ರಲ್ಲಿ, "ಮಿ. ಪಾಲೋಮರ್" – 1975ರಲ್ಲಿ ಪ್ರಕಟಿತವಾಯಿತು. 1975ರಲ್ಲಿ ಅಮೇರಿಕಾದ ಸಾಹಿತ್ಯ ಅಕಾಡೆಮಿಯ ಗೌರವ ಸದಸ್ಯನಾದ. 1976ರಲ್ಲಿ ಆಸ್ಟ್ರಿಯಾದ ರಾಜ್ಯ ಪ್ರಶಸ್ತಿ ಪಡೆದ. 1982ರಲ್ಲಿ ನೈಸ್ ಫೆಸ್ಟಿವಲ್ ಪ್ರೈಸ್ ದೊರೆತಿದೆ. 1985ರಲ್ಲಿ ಒಂದು ಸಮ ಮೇಳನದಲ್ಲಿ ಭಾಗವಹಿಸಲು ಹೋಗುತ್ತಿದ್ದಾಗ ಮೆದುಳು ರಕ್ತಸ್ರಾವವಾಗಿ ಅಸುನೀಗಿದ. ಇವನ ಜಾನಪದ ಕಥೆ ಮತ್ತು ಮಕ್ಕಳ ಕಥೆಗಳು ಇಟಲಿಯ ಶಾಲಾ ಮಕ್ಕಳಿಗೆ ಜನಪ್ರಿಯ ಪಠ್ಯಗಳಾಗಿವೆ. ಅಕಾಡೆಮಿಕ್ ನೆಲೆಯಲ್ಲಿ ಕಥನ ಹಾಗೂ ನಿರೂಪಣಾ ಶೈಲಿಯ ವಿವಿಧ ಆಯಾಮಗಳ ಅಧ್ಯಯನಕ್ಕೆ ಇವನ ಕೃತಿಗಳು ಸೂಕ್ತ ಆಕರಗಳೆಂದು ಪರಿಗಣಿತವಾಗಿವೆ.

– ಎಂಬಾರ್

ಸಾಹಿತ್ಯವೇ ಸರಿ ಅಚ್ಚುಗಳು ಬಿರುಕುಬಿಡುವುದನ್ನು ಅಚ್ಚರಿಯ ಎಚ್ಚರದಿಂದ ದಾಖಲಿಸುತ್ತಾನೆ. ಇವನ ಕೆಲವು ಕೃತಿಗಳ ಸರಳ ಪರಿಚಯ ಇಲ್ಲಿವೆ :-

1) ದಿ ಕ್ಯಾಸ್‌ಲ್ ಆಫ್ ಕ್ರಾಸ್ಡ್ ಡೆಸ್ಟಿನೀಸ್

ಚಾಸರ್‌ನ ಕ್ಯಾಂಟರ್‌ಬರಿ ಕಥೆಗಳಂತೆ ಮೊದಲ ನೋಟಕ್ಕೆ ಕಾಣುವ ಈ ಕಥೆ-ಕಥೆಯಲ್ಲ. ಅಪರಿಚಿತರೆಲ್ಲ ಒಂದು ಹೋಟೆಲ್‌ನಲ್ಲಿ ಸೇರಿ, ಪರಸ್ಪರ ಪರಿಚಯಿಸಿಕೊಂಡು .... ? ಇದು ವ್ಯವಸ್ಥಿತ ಸಮಾಜವೊಂದನ್ನು, ಮನುಷ್ಯ ಸಂಬಂಧಗಳನ್ನು ಜಿಗ್ಸಾಪಝಲ್‌ನಂತೆ ಜೋಡಿಸುತ್ತಾ ಹೋಗುವ ವಿಡಂಬನಾ ಕಸರತ್ತು.

ಕಟ್ಟಿಕೊಂಡ ಪ್ರಪಂಚದ ಎಲ್ಲೆ, ಆಯಾಮಗಳನ್ನು ಮುರಿದು 'ಕಾಣಿಸುವ ಧೈರ್ಯವಿದೆ ಕಾಲ್ವಿನೋಗೆ ಕಾಡಿನ ಮಧ್ಯದ ಪಾಳು ಕೋಟೆಯಲ್ಲಿ ಸೇರುವ ಅಪರಿಚಿತರೆಲ್ಲ ಮೂಕರಾಗಿದ್ದಾರೆ. ಮಾತಿನ ಕೋಟೆಯನ್ನು ಲೇವಡಿಸುವಂತೆ ಮಾತಿಲ್ಲದ ಇಸ್ಪೀಟ್ ಕಾರ್ಡಿನ ಆಟದ ಮೂಲಕ ಬಿಚ್ಚಿಕೊಳ್ಳುವ ಸತ್ಯಗಳಾವುವು? ಒಬ್ಬೊಬ್ಬನೂ ಅದೇ ಜಾತಕದ ಕಾರ್ಡುಗಳನ್ನು ವಿಭಿನ್ನರೂಪದಲ್ಲಿ ಜೋಡಿಸುತ್ತಾ ತನ್ನ ಬದುಕಿನ ಸತ್ಯವನ್ನು ತೋರಿಸುತ್ತಾನೆ. ಹಾಗಿದ್ದಲ್ಲಿ, ಒಬ್ಬನ ಸತ್ಯದ ತುಣುಕುಗಳು (ಕಾರ್ಡುಗಳು) 'ಬೇರೆ ತರಹದ ಜೋಡಿಸಿದಾಗ' ಇನ್ನೊಬ್ಬನ ಸತ್ಯವೂ ಆಗಿರುವುದು ಗಾಬರಿ ಹುಟ್ಟಿಸುತ್ತದೆ. ಎಲ್ಲರ ಸತ್ಯಗಳಿಗೂ ಸಾಮಾನ್ಯವಾದ ಒಂದು ಪ್ರೋಟೋಟೈಪ್ - ಕಲ್ಪನೆಯ ಸತ್ಯ ಚಿತ್ರಗಳು ವಿಶ್ವದಲ್ಲಿ ಇವೆಯೇನು? ಇದು ಕಾಲ್ವಿನೋ ಸಾದರಪಡಿಸುವ, ಏಕಶಿಲಾರೂಪಿ ಸತ್ಯದ ಅಪಹಾಸ್ಯ, ಉದಾಹರಣೆಗೆ :- "ಸದಾ ಅನಿಶ್ಚಯತೆಯಲ್ಲಿ ತೊಳಲುವವನ ಕಥೆ" ಯಾವ ಕಾರ್ಡೂ ಯಾರೊಬ್ಬನ ಸತ್ಯಘಟನೆಗಳ ಸಂಕೇತವೆಂದು ನಿಯೋಜಿತವಾಗಿಲ್ಲ. ಎಂತಲೇ ಅವನು ಆಯ್ಕೆ ಮಾಡಲಾರ. ಅವನ ಈ ನೆಗೆಟಿವ್ ಕೇಪಬಿಲಿಟಿಯೇ ಅವನ ಕಥೆಗೆ ಅನಂತ ಆಯಾಮಗಳನ್ನು ತೆರೆಯುತ್ತದೆ. ಕಡೆಗೆ, ನಿರೂಪಕ ಕೂಡಾ ಒಳಗಿನ ಮತ್ತು ಹೊರಗಿನ ಪ್ರಯಾಣದ ರೂಪಕವಾಗಿ ತನ್ನ ಕಥೆ ಹೆಣೆಯುತ್ತಾನೆ. ಆಯ್ಕೆಯೇ ಅಸಂಬದ್ಧವಾದ ಬದುಕಿನ ಕ್ರಿಯೆಗಳನ್ನು, ಅರ್ಥೈಸುವ ಚಟ ಮತ್ತು ರಾಜಕಾರಣವೇ ಬದುಕಿನ ಸುಳ್ಳುಗಳ ಮೂಲವಾಗಿರುವದನ್ನು ತೋರಿಸಲೆಂದೇ ಕಾಲ್ವಿನೋನ ತಾರೂತ್ (Tarot) ಕಾರ್ಡ್‌ಗಳು ಹರಡಿವೆ. ನಿಜದ ಸ್ಥಿತಿ-ಭ್ರಮೆ, ಭೌತ-ವರ್ತಮಾನ, ಕಥೆ ಕೇಳುವುದು-ಹೇಳುವುದು ಅರ್ಥದ ತರ್ಕಬದ್ಧ ಸ್ಥಿತಿಮತ್ತು ಹಾಸ್ಯಸ್ಪದ ಸ್ಥಿತಿ - ಇವೆಲ್ಲದರ ಜೋಕಾಲಿ "ದಿ ಕ್ಯಾಸ್‌ಲ್ ಆಫ್ ಕ್ರಾಸ್ಡ್ ಡೆಸ್ಟಿನೀಸ್". 'ಜಾತಕ ಹೇಳುವ' ಕಾರ್ಡುಗಳ ಮೂಲಕ ಬದುಕಿನ ಶಿಷ್ಟನಿಷ್ಟತೆಯನ್ನು ಲೇವಡಿಮಾಡುತ್ತಿರುವಂತೆಯೇ, ಈ ಕೃತಿ ಸತ್ಯದ ಅಸಂಖ್ಯ ಆಯಾಮಗಳಿಗೆ ತೆರೆದ ಕಿಟಕಿಯಂತೆ ತೋರುತ್ತದೆ.

2) ಇನ್‌ವಿಸಿಬಲ್ ಸಿಟೀಸ್

'ಇಲ್ಲದ' ನಗರಗಳನ್ನು 'ಕಾಣದ' ನಗರಗಳೆಂದು ಕರೆಯುವದೇ ಒಂದು ಬಹುಮುಖ್ಯ ನಮ್ರ ಪ್ರತಿಕ್ರಿಯೆ; 'ಇರುವುದರ' ರಾಜಕಾರಣದ ಓಡು-ಚಕ್ರಕ್ಕೆ ಹಿಡಿದ ಕಡ್ಡಿ. 'ಕಾಣುವುದೆಲ್ಲ'

ಸತ್ಯವಾಗಿ, 'ಕಾಣದ್ದೆಲ್ಲ' ಇಲ್ಲವೆಂದೆನಿಸಿಕೊಳ್ಳುತ್ತಿರುವ ಈ ಗ್ಲೋಬಲೈಸೇಷನ್‌ನ ಸಂದರ್ಭದಲ್ಲಿ, ಯೂರೋಪಿನ ವಿಶ್ವಪ್ರಜ್ಞೆಯ ಇತಿಹಾಸವೇ ಸಾಹಸ ಪ್ರಯಾಣಗಳ ರಿಯಲಿಜಂನ ಮಿಥ್‌ಗಳಿಂದ ಹುಟ್ಟಿಕೊಂಡಿರುವುದನ್ನು ಕಂಡಿದ್ದೇವೆ.

ಸಮುದಾಯಗಳ ಆಶಯ, ನೆನಪುಗಳೆರಡನ್ನೂ ಪ್ರವಾಸಿ ಕಥೆಗಳಲ್ಲಿ ಕಥನಗಳಲ್ಲಿ ವ್ಯಕ್ತಪಡಿಸಿದ ಯೂರೋಪಿನ ಸಾಮ್ರಾಜ್ಯದಾಹಿ ಮನಸ್ಸು ಎಲ್ಲ ಅನುಭವಗಳನ್ನೂ ಒಂದೇ ನಿಜದ ಕನ್ನಡಿಯಲ್ಲಿಟ್ಟು ನೋಡಬಯಸಿತು.

ಯಾತ್ರೆಯ, ಹುಡುಕಾಟದ, ಸಾಹಸದ, ದಂಡಯಾತ್ರೆಯ, ಅದಮ್ಯ ಪ್ರವೃತ್ತಿಗಳನ್ನು ಇಲ್ಲಿ ಮಾರ್ಕೋಪೋಲೋನ ರೂಪಕದಲ್ಲಿ ಕಾಣಲೆತ್ನಿಸಿದ್ದಾನೆ ಕಾಲ್ವಿನೋ. ಕೇಳಿಸಿಕೊಳ್ಳುವವ – ಕೂಬ್ಲಾಖಾನ್ ! ರೋಚಕ ಕಥನಗಳನ್ನು ಹೇಳುವವ – ಮಾರ್ಕೋ ಪೋಲೋ.

ಇವರಿಬ್ಬರೂ, ಪೂರ್ವ – ಪಶ್ಚಿಮಗಳನ್ನು ಕಥೆ ಹೇಳಿ – ಕೇಳುವ ಪರಿಧಿಯೊಳಕ್ಕೆ ತಂದಿದ್ದಾರೆ. ಅಸಾಮಾನ್ಯ ನಿರೂಪಕ ಕಾಲ್ವಿನೋ, ಇಲ್ಲಿ ಮಾರ್ಕೋನ ಬಾಯಿಂದ 'ಕಥೆ ಹೇಳಿಸುತ್ತಾ' ಹೋಗುತ್ತಾನೆ. ಇವನು, ಸುತ್ತುತ್ತಲೇ ಬದುಕಿನ ಬಣ್ಣಗಳನ್ನು ಅರಿತವನು. ಕೂಬ್ಲಾಖಾನ್, ಧೃತರಾಷ್ಟ್ರನಂತೆ ಕೂತು ಕಥೆ ಕೇಳುತ್ತಾನೆ. ಮಾರ್ಕೋ ಕಣ್ಣಿಗೆ, ಅಂದರೆ 'ಅನ್ಯನ' ಪ್ರಜ್ಞೆಗೆ ದಕ್ಕುವುದೆಲ್ಲಾ, ಸುಪ್ತಮನಸ್ಸಿನ ಆಸೆಗಳಿಗೆ ಸಂಬಂಧಿಸಿದ್ದು. ಇವನ ಕಾಣದ ನಗರಗಳು ಕನ್ನಡಿಯೊಳಗೆ, ಗ್ಲೋಬ್‌ನಲ್ಲಿ, ಸತ್ತವರ ಆತ್ಮದಲ್ಲಿ, ಬಿಲದೊಳಗೆ, ಗೋರಿಯೊಳಗೆ, ಹಾರುವ ಹಕ್ಕಿಯ ರೆಕ್ಕೆಯಲ್ಲಿ, ಆಗಿಹೋದ ಮತ್ತು ಇನ್ನೂ ಘಟಿಸಿರದ ಇತಿಹಾಸದಲ್ಲಿ ಅಡಗಿವೆ. ಕಾಡು ನಾಡಾಗುವ ಪರಿ, ನಾಡು ಕಾಡಾಗುವ ಪರಿ – ಎಲ್ಲವೂ ಮಾರ್ಕೋನಿಗೆ 'ಕಾಣುತ್ತವೆ'. ಕಾಲ್ವಿನೋ ಇಲ್ಲಿ ಮುರಿಯುವ ಮುಖ್ಯ ಆಯಾಮವೆಂದರೆ – ಕಾಲದ ಏಕಮುಖೀ ಪ್ರವಾಹಸ್ಥಿತಿಯದ್ದು. ಮನಸ್ಸಿನ ಚರಿತ್ರೆಯನ್ನು ಹಿಡಿಯುತ್ತಾ ಸಾಗುವ ಮಾರ್ಕೋ, ಕಾಲದ ಒಂದು ಸ್ಥಬ್ಧ ಬಿಂದುವಿನಲ್ಲಿ, ಚರಿತ್ರೆಯ ಒಂದು ಘಟ್ಟದಲ್ಲಿ ಸ್ಥಗಿತವಾಗಿರುವ ಕೂಬ್ಲಾನಿಗೆ ತಿಳಿಹೇಳುತ್ತಾನೆ; ಕಾಲದ ದಾಖಲಿಗೆ ಸಡ್ಡು ಹೊಡೆದ ಮನಸ್ಸುಗಳ ಮತ್ತು ಸಮುದಾಯಗಳ ಬಗ್ಗೆ ಪ್ರತಿಯಾಗಿ, ಕೂಬ್ಲಾನೂ ಈ ಚಟಕ್ಕೆ ಬಿದ್ದು, ತನ್ನದೇ ಕಲ್ಪನೆಯ ನಗರಗಳಿಗೆ, ಮಾರ್ಕೋನು ತನ್ನ ಸತ್ಯಕಥನಗಳನ್ನು ಹೊಂದಿಸುವಂತೆ ಬೇಡಿಕೊಳ್ಳುತ್ತಾನೆ! ಕಲ್ಪನೆಯ ನಗರಗಳೀಗ ನಿಜವಾಗಬೇಕಿದೆ, ಕಥನ ಪ್ರಕ್ರಿಯೆಯಲ್ಲಿ.

ಮಾರ್ಕೋ ಹೇಳುತ್ತಾ ಹೋಗುವ ನಗರಗಳೆಲ್ಲ ಕ್ರಮೇಣ ಒಂದೇ 'ಮೂಲ' ನಗರದ ವಿವಿಧ ಆವೃತ್ತಿಗಳಂತೆ ಕಾಣಲಾರಂಭಿಸಿವೆ. ಅವನಿಗೇ ಹಾಗನ್ನಿಸುತ್ತಿದೆ! 'ಇರುವ' ನಗರಗಳನ್ನು ಹುಡುಕುತ್ತಾ ಹೊರಟು, 'ಇಲ್ಲದ' ನಗರಗಳನ್ನು ನಿರ್ಲಕ್ಷಿಸಿದ್ದ ಅವನಿಗೆ, ಒಬ್ಬ ಕುರುಬನ ಹುಡುಕಾಟ ಕಣ್ಣು ತೆರೆಸುತ್ತದೆ. ಕುರುಬ ಹುಲ್ಲುಗಾವಲು ಹುಡುಕುತ್ತಾ, ಅಡ್ಡ ಬಂದ ನಗರಗಳನ್ನು ಕಾಣುವುದೇ ಇಲ್ಲ ! ನಮಗೆ 'ಬೇಕಿರುವುದನ್ನಷ್ಟೇ' ನೋಡುವ, 'ಇರುವುದನ್ನು' ನೋಡದ ನಮ್ಮ ಅಪೂರ್ಣತೆಯನ್ನು ತೋರುತ್ತಾನೆ ಕಾಲ್ವಿನೋ. 'ಇರುವುದು' 'ಇಲ್ಲ'ದ್ದರ ಮೇಲೆ ಯಾಜಮಾನ್ಯ ಸಾಧಿಸುವುದೇ ಹೀಗೆಂದು ಹೇಳುತ್ತಾರೆ ಫುಕೋ ಮತ್ತು ಲಕಾನ್. ಮಾರ್ಕೋ ಅರಿಯುತ್ತಾ ಹೋದಂತೆ, ಅವನ ಪ್ರಯಾಣಕ್ಕೆ ಅರ್ಥವೇ ಇಲ್ಲವೆಂದು

ಕೂಬ್ಲಾನ ರೂಪಕ ಹೇಳುತ್ತದೆ. ಬರೆಯಲು ಹೊರಟದ್ದಕ್ಕೂ, ಬರೆಯಲಾರದ್ದಕ್ಕೂ ವ್ಯತ್ಯಾಸವೇ ಇಲ್ಲವೆಂದಾದರೆ, 'ಬರೆ'ಯುವುದಾದರೂ ಏಕೆ !? ಆದರೂ ದಾಖಲಿಸುವ ರೂಢಿಗೆ ಬಿದ್ದ ಮಾರ್ಕೊ, ದಾಖಲೆ ಪ್ರಕ್ರಿಯೆಯಾಚೆಗಿನ ಸತ್ಯವನ್ನೇನೋ ಕಾಣಲು ಹೆಣಗುತ್ತಿದ್ದಾನೆ. ಇಡೀ ಮನುಕುಲದ ಇತಿಹಾಸದ ದುರ್ವಿಧಿ ಎಂದರೆ, ಚರಿತ್ರೆಯ ಏಕರೂಪೀ ಕಥಾನಕಗಳನ್ನು ಸತ್ಯವೆಂದು ಒಪ್ಪಿರುವುದು. ರಾಜಾವಳೀ ಚರಿತ್ರೆಯ ಕಂಬಗಳನ್ನು ಒಂದೊಂದಾಗಿ ಭಗ್ನಗೊಳಿಸುವ ಮಾರ್ಕೊ, ದಾಖಲಿಸುವ ಚಟವನ್ನು ಪ್ರಕ್ರಿಯೆ ಮೂಲಕವೇ ಅನುಭವದ ನಗರಗಳು, ಇಲ್ಲದ ನಗರಗಳನ್ನೂ ಕಾಣುವುದು ಸಾಧ್ಯ ಎಂದು ಹೇಳುತ್ತಿದ್ದಾನೆ ಕಾಲ್ವಿನೋ.

ಸಾಂಸ್ಥಿಕ 'ನಗರ' ಶಕ್ತಿಗಳ ಬೇಲಿಯಾಚೆ, ವಿಶ್ವದ ಸಹಜ ತುಡಿತ, ಶಕ್ತಿಗಳು ಸಾಂಕೇತಿಕವಾಗಿ ದುಡಿಯತೊಡಗಿರುತ್ತವೆ, ಅವೂ ಸಹ ತಮ್ಮದೇ ಆದ ಪರ್ಯಾಯ ಲಾಜಿಕ್‌ನ ವ್ಯವಸ್ಥೆಯಲ್ಲಿ ಕೆಲಸಮಾಡುತ್ತಿರುತ್ತವೆ ಎನ್ನುತ್ತಾ, ತನ್ನನ್ನು ತಾನೇ ಭಂಜಿಸಿಕೊಳ್ಳುತ್ತಾನೆ ಕಾಲ್ವಿನೋ ಎಂಬ ಕಥನಕಾರ !

3) ಮಿ. ಪಾಲೋಮರ್

ಈ ಕೃತಿಯಲ್ಲಿ, ಪಾಲೋಮರ್ ಒಬ್ಬ ಸೂಕ್ಷ್ಮಣೂಜೀವಿ. ಭಾವಲೋಕದ ಒಂಟಿ ಪಯಣಿಗ. ಆಧುನಿಕ ವ್ಯವಸ್ಥೆಗೆ, ಒಪ್ಪಿದ ಸಾಂಸ್ಥಿಕ ನಂಬಿಕೆ ಅಚರಣೆಗಳಿಗೆ ಮುಜುಗರಪಡುವವನು. ಇವನು, ಕಾಣುವ ಪ್ರಪಂಚವೇ ಬೇರೆ. ಎಂತಲೇ ಇವನು ತಿರಸ್ಕೃತ, ಬಹಿಷ್ಕೃತ. ಹುಲ್ಲುಹಾಸು ಬೆಳೆಯುವ ಪರಿಯೇ ಇವನನ್ನು ವಿಶ್ವದ ವೈವಿಧ್ಯಮಯ ಜೀವಜಾಲದ ಬಗ್ಗೆ ಮುಗ್ಧನನ್ನಾಗಿಸುತ್ತದೆ. ತನ್ನ ಆತ್ಮದ ಶಾಂತಿಗೆಂದು ಇವನು ಒಬ್ಬ ಅನ್ವೇಷಕನಂತೆ; ಮೂಲ ಶಕ್ತಿಯ ಸೆಲೆಯನ್ನು, ಬದುಕಿನ ಜೀವರಸವನ್ನು, ಬೆಣ್ಣೆಯಲ್ಲಿ, ಮಾಂಸದಲ್ಲಿ, ಹುಲ್ಲಿನ ದಳದಳದಲ್ಲಿ ಹುಡುಕುತ್ತಾ ಹೋಗುತ್ತಾನೆ. ಭೌತಿಕವಾದುದೆಲ್ಲಾ ಇವನ ಮಟ್ಟಿಗೆ ಪರಮಾದ್ಭುತವಾಗಿದೆ, ಬ್ಲೇಕ್‌ಗೆ ಕಾಣುವಂತೆ, ಆದಿ ಅಣುವಿನಿಂದ ಅನಂತ ವಿಶ್ವದ ಎಲ್ಲವೂ ಅಭಿನಂದನಾರ್ಹ.

ಆದರೆ, ಪಾಲೋಮರ್‌ನ ದಿವ್ಯ ಅನುಭೂತಿ ಮತ್ತು ಸಹಜ ಕುತೂಹಲ, ಜನರ ಕಣ್ಣಿಗೆ ಬಾಲಿಶ ಅಸಂಬದ್ಧವೆಂದು ತೋರುತ್ತದೆ. ನೋಡುವುದು 'ಸಹಜ'ವಾದಷ್ಟು ಭಾಷೆ ಸರಳವಾಗುತ್ತಾ ಹೋಗಿದೆ, ಈ ಕೃತಿಯಲ್ಲಿ. ಯಾವ ನಿರ್ಬಂಧಕ್ಕೂ ಒಳಗಾಗದ ಮನಸ್ಸೊಂದು ವಿಶ್ವರಹಸ್ಯದ ಸಹಜದಲ್ಲಿ ಲೀನವಾಗುವ ಪ್ರಕ್ರಿಯೆಯಲ್ಲಿ ಹುಟ್ಟುವ ಅನುಭಾವಿ ಸಂತ ಪಾಲೋಮರ್. ಉದಾಹರಣೆಗೆ, ಇವನ ಬರಿಕಣ್ಣಿಗೆ 'ಕಾಣು'ವ ಗ್ರಹಗಳು, ಟೆಲಿಸ್ಕೋಪ್ 'ಕಾಣುವುದೇ' ಇಲ್ಲ ! ಇಡೀ ಯಂತ್ರಾಧಾರಿತ ಸಮಾಜದ ಕುರುಡಿಗೆ, ಹಾಗೂ ಸತ್ಯವನ್ನು ಕಾಣಲೂ ಊರುಗೋಲು, ಸಾಕ್ಷಿಗಳು, ಮತ್ತು ತರ್ಕದ ಯಂತ್ರಗಳನ್ನು ಆಧರಿಸಬೇಕಾದ ನಮ್ಮ ಪರಿಸ್ಥಿತಿಗೆ ಪರ್ಯಾಯ ಮನಸ್ಥಿತಿಯೊಂದನ್ನು ನಮ್ಮ ಮುಂದೆ ಇಡುತ್ತಾನೆ ಕಾಲ್ವಿನೋ.

ಪಾಲೋಮರ್ ಪ್ರಗತಿಪರ ಬಂಡಾಯಗಾರನಲ್ಲ. ಅದಕ್ಕೂ ಮೀರಿದ ಸಹಜದ ದಿವ್ಯಕ್ಕೆ ಒಳಗಾಗುವ ಮಗು ಸಂತ. ಅಂತೆಯೇ ಜನರ ಕಣ್ಣಿಗೆ ಅವನು ಅಬ್‌ನಾರ್ಮಲ್. ಅವನ 'ನೋಡುವಿಕೆ'ಯು, ಜಾಡಿಗೆ ಬಿದ್ದ ಜನಮಾನಸವನ್ನು ಬೆಚ್ಚಿಸಿ, ಲೇವಡಿಸುತ್ತದೆ.

4) ಇಫ್ ಆನ್ ಎ ವಿಂಟರ್ಸ್ ನೈಟ್ – ಎ ಟ್ರಾವೆಲರ್

ತನಗೆ ಬೇಕಾದ ಕಾದಂಬರಿಯೊಂದನ್ನು ಕೊಳ್ಳಲು ಪುಸ್ತಕದ ಅಂಗಡಿಗೆ ಹೋದ ಓದುಗ – ನಿರೂಪಕ, ಅದೇ ಅಂಗಡಿಗೆ ಬಂದಿದ್ದ ಹುಡುಗಿಯೊಬ್ಬಳಲ್ಲಿ ಆಸಕ್ತಿ ಬೆಳೆಸಿಕೊಳ್ಳುತ್ತಾನೆ. ನಿಲ್ಲಿ ! ಮಾಮೂಲಿ ಕಥೆ ಇಲ್ಲಿಗೇ ಕೊನೆ ! ಏಕೆಂದರೆ ಕಾಲ್ವಿನೋ ಮುಂದೆ ಹೇಳುವುದೇ ಬೇರೆ; ಆ ಕಾದಂಬರಿಯ ಕೊನೇ ಪುಟಗಳು ನಾಪತ್ತೆ. ಅಂಗಡಿಗೆ ಮತ್ತೆ ಹೋಗಿ ಬೇರೆ ಪ್ರತಿ ಕೇಳುತ್ತಾನೆ. ಇವನು ಓದಬೇಕಿರುವ ಕೃತಿ, ಕೃತಿಚೌರ್ಯವಾದದ್ದು, ಅದರ ಬದಲು ಇನ್ನೊಂದು ಮೂಲ ಕಥೆ ಓದಿ – ಎಂದು ಅವನಿಗೆ ಇನ್ನೊಂದು ಪುಸ್ತಕ ಕೊಡುತ್ತಾನೆ ಅಂಗಡಿಯವ. ಅದರ ಕಥೆ ಶುರು. ಅದೂ ಅಪೂರ್ಣ. ಅದನ್ನು ಹುಡುಕಿಕೊಂಡು ಹೋದ ನಿರೂಪಕನಿಗೆ ಆ ಲೇಖಕನ ಬದುಕಿನ ಕಥೆ, ನಂತರ ಅದೂ ಅಪೂರ್ಣವಾಗಿ, ಮತ್ತೊಂದು ಕಥೆಯ ಕಥೆ ತೆರೆದುಕೊಳ್ಳುತ್ತದೆ. ಲೇಖಕರು ಒಬ್ಬರಿನ್ನೊಬ್ಬರ ಪ್ರತಿಯಿಳಿಸುತ್ತಾರೆ. ಕಥೆಗಳು ಒಂದರೊಳಗೊಂದು ನುಗ್ಗಿ, ಈ ಕಥಾಪಯಣಿಗನ (ಹಾಗೂ ಓದುಗರ !) ತಲೆ ಕೆಡಿಸುತ್ತವೆ. ಪ್ರಕಾಶನ ಸಂಸ್ಥೆಗಳು ಮುಲಾಜಿಲ್ಲದೆ ಬೇನಾಮಿ ಲೇಖಕನ ಹೆಸರಿನಲ್ಲಿ ಕಥೆಗಳನ್ನು ರಿಮಿಕ್ಸ್ ಮಾಡಿ ಮಾರ್ಕೆಟ್ಟಿಗೆ ಇಳಿಸುತ್ತವೆ. ಈ ನಿರೂಪಕ ಅಂಥ ಸಂಸ್ಥೆಯೊಂದರ ಒಳಹೊರಗನ್ನು ಜಾಲಾಡುತ್ತಾನೆ. ಒಬ್ಬರು ಬರೆದ ಕಥೆ ಇನ್ನೊಬ್ಬರು ಮುಗಿಸುತ್ತಾರೆ. ಇವನು ಹುಡುಕುತ್ತಲೇ ಹೋಗಿ ಒಂದು ವಿಶ್ವವಿದ್ಯಾಲಯದಲ್ಲಿ "ಅಳಿವಿನ ಅಂಚಿಗೆ ಸರಿದಿದ್ದ ಭಾಷೆಗಳ ಅಧ್ಯಯನ" ವಿಭಾಗದ ಪ್ರೊಫೆಸರನ್ನು ಭೇಟಿಯಾಗಿ, ಅವನಿಂದಲೂ ಮೂಲನಿವಾಸಿಗಳ ಭಾಷೆಯ ಚೌರ್ಯದ ಹೊಸ ಕಥೆಯನ್ನು ಕೇಳುತ್ತಾನೆ. ಅದರ ಬೆನ್ನು ಹತ್ತಿ ಹೋದವನು, ಎಲ್ಲಾ ಕಥೆಗಳ – ಲೇಖಕರ ಮೂಲ ಉಗ್ರಾಣದಂತಿರುವ ಒಂದು ವಿಶ್ವ ಧ್ವನಿ ಇಂಡಿಯನ್ ಮೂಲನಿವಾಸಿಗಳ ಒಂದು ಗುಹೆಯಿಂದ ಬರುತ್ತೆ ಎಂಬ ಮಿತ್ ಅನ್ನು ಕೇಳುತ್ತಾನೆ ! ಈ 'ಮೂಲದ' ಕನಸಿನ ಕಥೆಯನ್ನಂತೂ ನಂಬುವುದಿಲ್ಲ ಇವನು. ಹೀಗೆ ಹುಡುಕುತ್ತಾ ಹೋಗಿ, ಗೂಢಚಾರರ ಜಾಲಕ್ಕೆ ಬಿದ್ದು, ಅಲ್ಲಿನ ಗೂಢಚಾರಿ, ಕ್ರಾಂತಿಕಾರಿ ಬಣಗಳ ಮಧ್ಯೆ ಒದ್ದಾಡುತ್ತಾನೆ. ಇವನ ನೈಜ ಕುತೂಹಲವನ್ನು ಯಾರೂ ನಂಬದೆ, ಕಡೆಗೆ ವಿಧಿಯಿಲ್ಲದೆ ಅದೇ ಗೂಢಚಾರಿ ಸಂಸ್ಥೆಗೆ ದಾಖಲಾಗಬೇಕಾಗುತ್ತದೆ. ವಿಪರ್ಯಾಸವೆಂದರೆ, ಆ ಗೂಢಾಚಾರರು ತಮ್ಮಲ್ಲೇ ಪರಸ್ಪರ ಅನುಮಾನಿಸುತ್ತಾ, ತಾವು ಕ್ರಾಂತಿಕಾರಿಗಳನ್ನು ಹಿಡಿಯಲು ಡಬಲ್ ಏಜೆಂಟ್ ಥರಾ ನಟಿಸುತ್ತಿರುವ ಪ್ರಕ್ರಿಯೆಯಲ್ಲಿ, ತಾವು ಯಾವ ಪಕ್ಷವೆಂಬುದನ್ನೇ ಮರೆತುಬಿಟ್ಟಿರುತ್ತಾರೆ ! ಹೇಗೋ ಅಲ್ಲಿಂದ ತಪ್ಪಿಸಿಕೊಂಡು ಬಂದ ನಮ್ಮ ನಿರೂಪಕ, ಮತ್ತೊಂದು ಪುಸ್ತಕ ಓದಲು ಪ್ರಾರಂಭಿಸುತ್ತಾನೆ. ಅದೋ, ತನ್ನದೆ ಬದುಕು: ಬೇರೊಬ್ಬರು ಬರೆದಿದ್ದು ! ಅದರ ಪ್ರಕಾರ, "ಇವನು ಆ ಮೊದಲು

ಭೇಟಿಯಾಗಿದ್ದ ಹುಡುಗಿಯನ್ನು ಪ್ರೀತಿಸಿ, ಮದುವೆಯಾಗುತ್ತಾನೆ" ಅಂತೆಯೇ ತನ್ನ ಕಥೆಯನ್ನು 'ನಿಜಮಾಡಲು' ಆ ಹುಡುಗಿಯನ್ನು ಹುಡುಕುತ್ತಾ ಹೋಗಿ, ಕಂಡು ಹಿಡಿದ ಅವಳ ಅಕ್ಕನೊಂದಿಗೆ ಅವಳನ್ನು ಕನ್‌ಫ್ಯೂಸ್ ಮಾಡಿಕೊಂಡು, ಕಡೆಗೂ ಅವಳೊಂದಿಗೆ ಸೇರುತ್ತಾನೆ. ಅವನು ಮದುವೆಯಾಗುವ ಮುಂಚೆಯೇ ಇನ್ನೊಂದು ಪುಸ್ತಕವನ್ನು ಓದಲೇ ಬೇಕಾಗುತ್ತದೆ. ಅದೂ ಅಪೂರ್ಣ .... ಈ ಕಾಲ್ವಿನೋನ ಕೃತಿಯಂತೆ !

ಈ ಕೃತಿ ಕಾಲ್ವಿನೋನ ಕಾಣ್ಕೆಯ ಅತ್ಯಂತ ಪ್ರತಿನಿಧಿಯಾಗಿದೆ. ಇಲ್ಲಿ ಕಥೆ ಹುಡುಕುವುದು, ಓದುವಿದು, ಬರೆಯುವುದು, ಬರೆಸಿಕೊಳ್ಳುವುದು, ಬದುಕುವುದು, ಬದುಕಲ್ಪಡುವುದು – ಎಲ್ಲವೂ ಅದಮ್ಯ ಚಲನಶೀಲ ಕಥನಗಳು. ಯೂರೋಪಿನ ಇಡೀ ಕಾದಂಬರಿ ಪ್ರಕಾರದ ಸಂಸ್ಕೃತಿ / ಇತಿಹಾಸವನ್ನು ಜಾಲಾಡಿದ್ದಾನೆ. ಕಾಲ್ವಿನೋ ಇಲ್ಲಿ ಒಟ್ಟಾರೆ ಬರಹ – ಸಂಸ್ಕೃತಿಯ ಡಾಂಭಿಕತೆಯ, ಅಪೂರ್ಣತೆಯ ವಿರಾಟ್ ಸ್ವರೂಪವನ್ನು ಮಿಂಚಿನಂಥ ನೋಟಗಳಲ್ಲಿ ದಾಖಲಿಸಿದ್ದಾನೆ. ಪ್ರತಿ ಅಪೂರ್ಣ ಕಾದಂಬರಿಯೂ ಇನ್ನೊಂದು ಕಾದಂಬರಿಯ ತಾಯಿಯಾಗಿ, ಪ್ರತಿ ಕೃತಿಯೂ ಹಿಂದಿನ ಕೃತಿಯ ಆಕೃತಿ – ವಸ್ತುಗಳಿಗೆ ಪ್ರತ್ಯುತ್ತರವಾಗಿರುವುದನ್ನು ಗಮನಿಸಬಹುದು.

ಈ ಎಲ್ಲ ಪರಿಹಾಸಗಳ ಮಧ್ಯೆ ಕಾಲ್ವಿನೋ ಹೇಳಲು ಹೆಣಗುತ್ತಿರುವ ಸತ್ಯಗಳು – ಆ ಕಥೆಗಳ ರಚನೆಯಲ್ಲೇ ಅಡಗಿವೆ. ಮಾನವ ಘನತೆಯ, ಬದುಕಿನ ಜಾತ್ರೆಯ, ಜೀವ ಉತ್ಸಾಹದ ಕಥನಗಳು ಅವು. ಹಾಗೇಂದೇ ಅವು ಅಪೂರ್ಣ: ಕಾಲ್ವಿನೋ ಅಲೀ, ನೀವು ನಾವಾಗಲೀ, ಯಾರೂ ಬರೆಯುತ್ತಾ ಹೋಗಬಹುದು .... ಇನ್ನೇಕೆ ತಡ ! ತೊಗೊಳ್ಳಿ ಪೆನ್ನು ಕೈಗೆ ! ಎನ್ನುತ್ತಾನೆ ಕಾಲ್ವಿನೋ.

5) ಬ್ಯಾರನ್ ಆನ್ ದಿ ಟ್ರೀಸ್

ಇಟಲಿಯ ಬಲಾಢ್ಯ ರಾಜನಿಷ್ಠ ಜಮೀನ್ದಾರನ ಮಗ ಕೊಸಿಮೊ, ತಂದೆಯ ಮೇಲೆ ಸಣ್ಣ ಅಸಮಾಧಾನದ ಕಾರಣಕ್ಕೆ ಮರ ಹತ್ತಿದವನು, ಕೊನೆಗೂ ಇಳಿಯುವುದೇ ಇಲ್ಲ, ಮರಗಳಲ್ಲೆ ಬದುಕಿದ ಕೊಸಿಮೊ, ನೆಲದ ನಂಟನ್ನು ಕಾಪಿಟ್ಟುಕೊಂಡೇ, ನೆಲದ ಹಂಗನ್ನು ಕಳಚಿಕೊಂಡವನು. ನೆಲದ ಅಸೂಕ್ಷ್ಮತೆಗಳೆಲ್ಲವೂ ನಿಚ್ಚಳವಾಗಿ ಕಾಣುವಷ್ಟೆತ್ತರದಲ್ಲಿ ಬದುಕುವ ಕೊಸಿಮೊ, ನೆಲದ ನಿಜದ ಲೇವಡಿಗೆಂದೇ ಸೃಷ್ಟಿಯಾದ ರೂಪಕ. ಸಾಂಸ್ಥಿಕ ನಿರೀಕ್ಷೆಗಳಿಗೆ ಸಡ್ಡುಹೊಡೆರೂ, ಸಂಘದ ಘನತೆಗೆ ತಲೆಬಾಗಿ, ಜನರ ಒಳಿತು ಕೆಡುಕಿಗೆ ಉತ್ಸಾಹದಿಂದ ಒಡ್ಡಿಕೊಳ್ಳುತ್ತಾನೆ. ಸಣ್ಣದೊಂದು ಮಾತಿನ ಓಘದಲ್ಲಿ ರೇಗಿ ಮರೆಯಾಗುತ್ತಾಳೆ, ಅವನ ಪ್ರೇಯಸಿ ವಯೋಲಾ. ಇದು ಸಂಬಂಧಗಳು ಹಾಸ್ಯಾಸ್ಪದ ಕಾರಣಗಳಿಗೆ ಕೊನೆಯಾಗುವ ದುರಂತದ ಕಥನ ಹಾಗೂ ಅವನ ಗೋರಿಯಿಲ್ಲದ ಗೋರಿಯ ಮೇಲೆ ಬರೆಯಲ್ಪಟ್ಟ "ಇವನು ಭೂಮಿಯನ್ನು ಪ್ರೀತಿಸಿದ್ದ" ಎಂಬ ಬರಹವು ಕಾಲ್ವಿನೋನ ಅನುಷಂಗಿಕ ಗಂಭೀರತೆಗೆ ಹಿಡಿದ ಬೆಳಕು. ಮನುಷ್ಯನ ವೃಕ್ಷವಾಸೀ ಒಳ ಆತ್ಮದ ತುಡಿತ; ಕಡೆಗೂ

ಭೂಮಿಯಿಂದ ದೂರವಾಗಿಯೂ ಹತ್ತಿರವಾದ ಮನುಷ್ಯನ ಸಂಸ್ಕೃಯ ಕಥನವಷ್ಟೇ ! ಅತಿ ನಂಬಲರ್ಹವೆನಿಸುವ ಗಂಭೀರ ವಿಡಂಬನಾ ಶೈಲಿಯಿಂದ ಬಿಚ್ಚಿಡಲ್ಪಡುವ ಕೊಸಿಮೊನ ಬದುಕು, ಹಾಗೆ "ನಿಜಕ್ಕಿಂತ ಜಾಸ್ತಿ ನಿಜವಾಗಿ" ಕಾಣುತ್ತದೆ.

ಈ ಕಾದಂಬರಿಯನ್ನು ಕೆ.ಪಿ. ಸುರೇಶ್‌ರವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಈಗ ಸಧ್ಯದಲ್ಲೇ ಅಭಿನವ ಪ್ರಕಾಶನದಿಂದ ಹೊರಬರಲಿದೆ.

ಕಾಲ್ವಿನೋ ಬಗ್ಗೆ ವಿಮರ್ಶೆ ಬರೆಯುವುದಾಗಲೀ, ಅವನ ಕಥನವನ್ನು ಮಥಿಸುವುದಾಗಲೀ, ನಮ್ಮ ಸಮಕಾಲೀನ ಸಾಹಿತ್ಯ ಸಂದರ್ಭದ ವ್ಯಂಗ್ಯ. ಓದುವ ಪ್ರಕ್ರಿಯೆಯಲ್ಲೇ ಅರಳುತ್ತಾ ಹೋಗಬೇಕಾದ ಬಹು ಸಾಧ್ಯತೆಗಳನ್ನು ಸಿದ್ಧಾಂತದಲ್ಲಿ ಹಿಡಿದಿಡುವ ದೊಡ್ಡವರ ಒದ್ದಾಟಕ್ಕೆ ಮುಗುಳುನಗುತ್ತಾ ಕಾಲ್ವಿನೋ, ಮಕ್ಕಳ ಸಾಹಿತ್ಯದ ಆಕೃತಿಯಲ್ಲಿ ವಿಶ್ವಮಾನವ ಘನತೆಯ ಆಶಯಗಳನ್ನು ರೂಪಿಸುತ್ತಾನೆ.

●

ಓದಿ: ಎರಡು ಮಹತ್ವಪೂರ್ಣ ಕೃತಿಗಳು

ಪ್ರೊ. ಷ. ಶೆಟ್ಟರ್‌ರವರ

ಶಂಗಂ ತಮಿಳಗಂ

ಮತ್ತು

ಕನ್ನಡ ನಾಡು-ನುಡಿ

(ಆರಂಭ ಕಾಲದ ದ್ರಾವಿಡ ಸಂಬಂಧದ ಚಿಂತನೆ)

ಪ್ರಕಾಶಕರು : ಅಭಿನವ, ನಂ. 17/8-2, ಮೊದಲನೆಯ ಮುಖ್ಯರಸ್ತೆ
ಮಾರೇನಹಳ್ಳಿ, ವಿಜಯನಗರ, ಬೆಂಗಳೂರು - 40. ಬೆಲೆ : ರೂ. 150.00

ಡಾ || ಯು.ಆರ್. ಅನಂತಮೂರ್ತಿಯವರ

ಋಜುವಾತು (ಲೇಖನಗಳು)

ಅಂಕಿತ ಪ್ರಕಾಶನ, ನಂ. 53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್
ಗಾಂಧಿಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಂಗಳೂರು - 04.
ಬೆಲೆ : ರೂ. 195.00

ಆನಾ ಅಹ್ಮತೋವಾ

ಕಾವ್ಯದ ನೋಟ

– ಸುಜಾತ ಕುಮಟಾ

ಆತ್ಮೀಯ ಬಸು, ಇದೊಂದು ಖಾಸಗಿ ಅನಿಸಿಕೆ ಇದರಲ್ಲಿ ಯಾವುದೇ ವಾದಗಳ ಮಂಡನೆಯಿಲ್ಲ ಅಂಥ ಹೇಳುತ್ತಲೇ ಈ ಲೇಖನ ಕಳಿಸ್ತಾಯಿದ್ದೀನಿ. ಯಾಕೋ ಗೊತ್ತಿಲ್ಲ. ಆನಾ ಆಹ್ಮತೋವಾ ಅನ್ನೋ ರಷ್ಯದ ಕವಯತ್ರಿ 1989ಕ್ಕೆ ನೂರು ವರ್ಷಗಳನ್ನು ಪೊರೈಸಿದ ನೆನಪಿನಲ್ಲಿ ರಷ್ಯದ ಇತಿಹಾಸದಲ್ಲಿ ಚಿರಸ್ಥಾಯಿಯಾದವಳು. ಈ ಆ್ಯನಾ ನನ್ನಲ್ಲಿ ಹಲವು ವಿಸ್ಮಯಗಳನ್ನು ಹುಟ್ಟು ಹಾಕಿದ್ದಂತು ನಿಜ. ಆ್ಯನಾ ಅಹ್ಮ ತೋವಾ 'ರಿಕ್ವಿಯಂ' ಮತ್ತಿತರ ನೂರು ಕವಿತೆಗಳ ಅನುವಾದ : ಶ್ರೀ ಬಾಲುರಾವ್. ಮಹಿಳಾ ಕಾವ್ಯ ಜಗತ್ತಿನ ಹೊಸದೊಂದು ಆವರಣಕ್ಕೆ ಕೈಹಿಡಿದು ನಡೆಸಿಕೊಂಡು ಹೋಗುವ ಈ ಕವಯತ್ರಿಗೆ ಕಾವ್ಯವೇ ಜೀವನದ ಉಸಿರು. ರಷ್ಯಾದ ಹವಾಮಾನ ವೈಪರೀತ್ಯದ ಜೊತೆಗೆ ಯುದ್ಧ ಆತಂರಿಕ ಕ್ರಾಂತಿಯ ಸಂದರ್ಭಗಳಲ್ಲಿ ಸತ್ತು ಮರುಹುಟ್ಟು ಪಡೆಯುವ ಎಲ್ಲಾ ನೋವು ತಲ್ಲಣಗಳ ಕ್ಷಣಗಳು ಆ್ಯನಾಳ ಕವಿತೆಗಳಲ್ಲಿ ನಿರಂತರ ಧ್ಯಾನವಾಗಿದೆ.

ಜಪಾನಿನ ವಿರುದ್ಧ ರಷ್ಯದ ಸೋಲು, 1917ರ ತ್ಸಾರನ ವಿರುದ್ಧದ ಕ್ರಾಂತಿ, ತಂದೆ ತಾಯಿಯರ ವಿವಾಹ ವಿಚ್ಛೇದನ, ಕಡುಬಡತನ, ಮುಂದುವರೆಸಿದ ಶಿಕ್ಷಣ, ಗುಮಿಲೋವ್‌ನ ಬೆನ್ನಟ್ಟಿದ ಪ್ರೀತಿಗೆ ಸೋತು ವಿವಾಹವಾದರೂ ಮಗ ಲೆವ್‌ನ ಜನನಾ ನಂತರ ಸಂಬಂಧವನ್ನು ಕಡಿದುಕೊಂಡು ಏಕಾಂಗಿ ಜೀವನ ಬಯಸುವ ಆ್ಯನಾ ಸದಾ ಪ್ರೀತಿಗಾಗಿ ಹಂಬಲಿಸುವ ಮನಸ್ಸಿನವಳು. ಅವಳ ಏಕಾಂತ ರಷ್ಯಾದ ದಟ್ಟ ಕಾಡಿನ ಮಂಜಿನಂತೆ ನಮ್ಮನ್ನು ಅವರಿಸುತ್ತದೆ. ಪೀಟರ್ಸ್ ಬರ್ಗನ ದಿಸ್ಟ್ರೆ ಡಾಗ್ ನಾಟ್ಯ ಗೃಹ ಪ್ರೀತಿ, ಪ್ರೇಮ, ಕಾಮ, ಪಾನಗೋಷ್ಠಿಗಳ ಅತಿರೇಕಗಳಲ್ಲಿ ತೇಲಿಹೋಗುತ್ತಿದ್ದ ಬುದ್ಧಿ ಜೀವಿಗಳ ಕೂಟದಲ್ಲಿ ಆ್ಯನಾಗಾಗಿ ಹಂಬಲಿಸಿದವರು ನೂರಾರು ಜನ. ಅವಳ ವೈಯಕ್ತಿಕ ಬದುಕಿನ ಹೊಯ್ದಾಟ ಮತ್ತೆ ಅವಳ ಮಾತೃಭೂಮಿಯ ಬಗೆಗಿನ ಪ್ರೀತಿ ಇವೆರಡೂ ಒಂದಕ್ಕೊಂದು ಅದೆಷ್ಟು ಬೆಸೆದುಕೊಂಡಿವೆಯೆಂದರೆ ಇಲ್ಲಿ ಆ್ಯನಾಳ ಪ್ರೇಮಿ ರಷ್ಯಾ ದೇಶವೆ ? ಅಥವಾ ಅವಳು ಬಯಸುವ ಪ್ರಿಯಕರರೆ ? ಎನ್ನುವ ಗೋಜಲು ಎದುರಾಗುತ್ತದೆ.

ಈಗಾಗಲೇ ಹುಚ್ಚು ತನ್ನ ರೆಕ್ಕೆಹರಡಿ
ನನ್ನ ಆತ್ಮದ ಅರ್ಧ ಭಾಗವನ್ನು ಆವರಿಸಿದೆ
ಉರಿಮದ್ಯವನ್ನು ಕುಡಿಸಿ ಕುಡಿಸಿ
ನನ್ನನ್ನು ಕಪ್ಪು ಕಣಿವೆಯ ಕಡೆಗೆ ಸೆಳೆಯುತ್ತಿದೆ.
ಬೇರೆಯಾರದೂ ಎಂಬಂತೆ ನಾನೇ ನನ್ನ
ಬಡಬಡಿಕೆಯನ್ನು ಆಲಿಸುತ್ತಾ ಕಾಲ ಹಾಕಿದ್ದೇನೆ.

ತನ್ನ ಬದುಕನ್ನೇ ಇನ್ಯಾರೋ ಬದುಕಿದ ಹಾಗೆ ವಿಸ್ಮಯಗಳನ್ನೆಲ್ಲಾ ಕಾವ್ಯವಾಗಿ ಚೆಲ್ಲಿದ ಕವಯತ್ರಿ ಆ್ಯನಾ.

ತ್ಸಾರ್‌ನ ವಿರುದ್ಧ, ಸ್ಟಾಲಿನ್‌ನ ವಿರುದ್ಧ ಧ್ವನಿಎತ್ತಿದ ಜನರನ್ನು ಸೆರೆಮನೆಯಲ್ಲಿಟ್ಟಾಗ ಪ್ರತಿದಿನ ಆ್ಯನಾ ಸೆರೆಮನೆಯ ಬಾಗಿಲಲ್ಲಿ ನಿಂತು ತನ್ನವರಿಗಾಗಿ ಹಂಬಲಿಸುತ್ತಾಳೆ. ಹೀಗಾಗೆ ಆಕೆ ಹೇಳುವುದು

ನನಗೆ ಸ್ಮಾರಕ ನಿರ್ಮಿಸುವುದಾದರೆ
ಅದಕ್ಕೆ ನನ್ನ ಒಪ್ಪಿಗೆಯಿದೆ
ಆದರೆ ಒಂದು ಕರಾರು.

ಮುನ್ನೂರು ಗಂಟೆಗಳ ಕಾಲ ನಾನು ನಿಂತ ಈ ಸ್ಥಳದಲ್ಲಿ
ನನ್ನ ಪಾಲಿಗೆ ಸೆರೆಮನೆಯ ಬೀಗ ತೆರೆಯದೆ ಹೋದ
ಆ ಇಲ್ಲಿ.

ಅಲ್ಲಿ ನನ್ನ ಕಂಚಿನ ಶಿಲ್ಪದ ನೆಟ್ಟ ಕಣ್ಣುಗಳಿಂದ
ಕರಗುವ ಹಿಮ ಕಣ್ಣೀರಿನಂತೆ ಹರಿಯುತ್ತಿರಲಿ.

ಒಬ್ಬರಾದ ಮೇಲೆ ಮತ್ತೊಬ್ಬ ಗಂಡಸು ಅವಳ ಜೀವನದಲ್ಲಿ ಪ್ರವೇಶ ಪಡೆಯುತ್ತಾರೆ. ಆದರೆ ಆಗಲೆ ತನ್ನ ಮೊದಲ ಗಂಡನ ನೆನಪಿನಿಂದ ಹೊರಬರಲು ಸಾಧ್ಯವಾಗದೆ ತೊಳಲಾಡುವುದು ಅವಳ ಅನೇಕ ಪದ್ಯಗಳಲ್ಲಿ ಕಾಣಬರುತ್ತದೆ.

ನನಗನಿಸುತ್ತದೆ – ಇಲ್ಲಿ ಇನ್ನಂದೆಂದಿಗೂ
ಗಂಡಸಿನ ಧ್ವನಿ ಕೇಳಿ ಬರುವುದಿಲ್ಲ
ಶಿಲಾಯುಗದ ಗಾಳಿಯಷ್ಟೇ

ಈ ಕಪ್ಪನೆಯ ಬಾಗಿಲನ್ನು ಬಡಿಯುತ್ತಿರುತ್ತದೆ. ದುರಂತವೆಂದರೆ ಅವಳಿಗೆ ಒಂಟಿ ಬದುಕುವುದು ಸಾಧ್ಯವಿರದ ಗಂಡಿನೊಡನೆ ಇರಲೂ ಆಗದ ದ್ವಂದ್ವ ಸ್ಥಿತಿ. ತನ್ನ ಅನುಭವದ ಆಳತೆಯಲ್ಲಿ ದಕ್ಕುವ ರಷ್ಯಾ ದೇಶದ ತಲ್ಲಣಗಳು, ಹಿಂಸೆಗಳನ್ನು ವ್ಯಕ್ತಿನಿಷ್ಠವಾಗಿ ಅನುಭವಿಸಿ, ಆ ನೋವುಗಳಿಗೆ ಕಾವ್ಯದ ಭಾಷೆಯನ್ನು ನೇಯುವುದು ಆ್ಯನಾಳ ವೈಶಿಷ್ಟ್ಯ.

ಟಾಲ್ಸ್ಟಾಯ್, ದಾಸ್ತೋವಸ್ಕಿಯಂತಹ ಲೇಖಕರಲ್ಲಿ ಕಾಣುವ ರಷ್ಯಾದ ಪ್ರಕೃತಿ ಚಿತ್ರಣ ಆ್ಯನಾಳ ಕವಿತೆಗಳಲ್ಲಿಯೂ ಹಾಸು ಹೊಕ್ಕಾಗಿದೆ. ಸರಳ ಭಾಷೆಯಲ್ಲಿ ತನ್ನ ಭಾವನೆಗಳನ್ನು ಹೊರಚೆಲ್ಲುವಾಗ ಪ್ರಕೃತಿಯೆ ಆಕೆಯ ಮಾಧ್ಯಮವಾಗಿ ಬಿಡುತ್ತದೆ.

ಇಲ್ಲಿ ನಾವೆಲ್ಲರೂ ಕುಡುಕರು ಸೂಳೆಯರು
ಹೇಗೆ ಒಟ್ಟಾಗಿ ಖುಷಿ ಕಳೆದುಕೊಂಡಿದ್ದೇವೆ.
ಗೋಡೆಯ ಮೇಲಿನ ಹೂಗಳೂ ಹಕ್ಕಿಗಳೂ
ಮೋಡಕ್ಕೆ ಹಂಬಲಿಸಿವೆ.

ಸುಜಾತ ಕುಮಟಾ, ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಕಛೇರಿ, ನಂ. 75, ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು–01.

ಆ ಕಾಲದ ರಷ್ಯದಲ್ಲಿ ಸಿಪಾಯಿಗಳ ಹೆಂಡಂದಿರು ಮಕ್ಕಳನ್ನಪ್ಪಿ ಗೋಳಿಡುತ್ತಾರೆ.

ಹಳ್ಳಿಗಳ ಹಾದಿಬೀದಿಗಳು ವಿದವೆಯರ ಪ್ರಲಾಪದಿಂದ ಮೊರೆಯುತ್ತಿವೆ.

ರಷ್ಯಾದ ಸ್ಥಿತಿ ಕಂಡು ಅಯ್ಯೋ ನೀನು ತೊಟ್ಟ ಅಂಗಿಯಲ್ಲಿ ಪಾಲು ಪಡೆಯಲು ಆ ಜನ ನಿನ್ನ ಅತಿ ಪವಿತ್ರ ದೇಹವನ್ನು ಹೇಗೆ ಘಾಸಿಗೊಳಿಸಿದರು.

ಇದೆಲ್ಲದರ ನಡುವೆ ದೇವಿ ಶೋಕಮಯಿ ಕವಿತೆ ಕುರುಡರನ್ನು ನಡೆಸಿದಂತೆ ನನ್ನ ಕೈಹಿಡಿದು ನಡೆಸಿದ್ದೂ ಅಲ್ಲಿಯೇ.

ಆದ್ದರಿಂದ ಅವಳ ಅತ್ಯಂತಿಕ ಮೊರೆ.

"ನಾಡಿನ ಮೇಲೆ ಮುತ್ತಿರುವ ಕಾರ್ಮೋಡಗಳನ್ನು ಸೂರ್ಯಕಾಂತಿಯಲ್ಲಿ ಬೆಳಗುವ ಸುವರ್ಣ ಮೇಘಮಾಲೆಯಾಗಿಸು. ಇದೋ ಹೀಗೆಂದು ನಿನ್ನ ಪ್ರಾರ್ಥನೆಯ ವೇಳೆ ಮೊರೆಯಿಟ್ಟಿದ್ದೇವೆ. ಅಸಂಖ್ಯ ದಣಿವಿನ ದಿನಗಳನ್ನು ಕಂಡು ಪಾಡುಪಟ್ಟ ನಾನು". ಅವಳ ಅಂತರಂಗದ ನೋವುಗಳನ್ನು ತನ್ನ ಗಟ್ಟಿತನವನ್ನಾಗಿಸಿಕೊಂಡವಳು. ಆ್ಯನಾ "ಪ್ರಿಯಕರನಿಗೆ ಇವತ್ತು ಅಂತಿಮ ವಿದಾಯ ಹೇಳಿಬಂದವಳೆ ನಿನ್ನ ನೋವೆಲ್ಲವನ್ನೂ ಕರಗಿಸಿ ಮನೋಬಲವನ್ನಾಗಿ ಮಾರ್ಪಡಿಸು".

ರಿಕ್ವಿಯಂ ವೇಚರ್ ಚ್ಯೋಕ್ಕಿ ಬೇಲಯಾ ಸ್ತಾಯಾ ಪದ್ರೋಪ್ನಿಕ್ ಅನೂದಾಮಿನಿ ತ್ರಸ್ತ್ರೀಕ್ ಸಿದ್ಮಾಯಾಕ್ನಿಗಾ ಪೋಯೇನಾ ಬೀಚ್ ಗೆರೋಯ ಎರಡು ಬಾರಿ ಆಯ್ದ ಕವಿತೆಗಳು ನಾಲ್ಕು ಬಾರಿ ಸಮಗ್ರ ಕಾವ್ಯಗಳು ಪ್ರಕಟವಾದವು.

ಆ್ಯನಾ ಅಹ್ಮತೋವಳ ಕಾವ್ಯ ಒಂದು ಅದ್ಭುತ ಅನುಭವ. ಸ್ತ್ರೀವಾದವನ್ನ ಮೀರಿದ ವ್ಯಕ್ತಿತ್ವವನ್ನು ಸ್ಥಾಪಿಸಲು ಹಂಬಲಿಸುವ ಸಂಕೀರ್ಣ ವ್ಯಕ್ತಿತ್ವ. ಅವಳ ಕಾವ್ಯದಲ್ಲಿ ಹೆಣ್ಣು ಒಂದು ಫಿಸಿಕಲ್ ರಿಯಾಲಿಟಿ ಆಗುವುದಿಲ್ಲ. ಅದೊಂದು ಪ್ರೇಮ, ಕಾಮವನ್ನು ಮೀರಿದ ಅತ್ಯಂತಿಕ ವಿರಹ ವೇದನೆ. ತನ್ನ ತಾಯ್ನಾಡಿನ ನೆಲದ ಹಿಂಸೆ, ಅಸಹಾಯಕತೆ, ಕ್ರೌರ್ಯ ಆಕೆಯನ್ನು ಅದೆಷ್ಟು ಹಣ್ಣಾಗಿಸಿತ್ತು. (ಯಾಕೋ ಬರ್ಮಾದ ಅಂಗ್‌ಸಂಗ್ ಸೂಕಿ ನೆನಪಾಗುತ್ತಾಳೆ) ಗಂಡಸರ ಪ್ರೀತಿ ದ್ವೇಷ ತತ್ಸಾರದ ನಡುವೆ ಸಂತಳಂತೆ ಕಾಣುವ ಆ್ಯನಾ ಅಂದಿನ ಪುರುಷ ಸಮೂಹದೆದುರು ಅರ್ಧ ಸೂಳೆಯಂತೆ. ನಿರಂತರ ಅವಹೇಳನಕ್ಕೆ ಒಳಗಾದಳು. ಸರ್ಕಾರಗಳು ವಿರೋಧಿಗಳು ನೀಡುತ್ತಿದ್ದ ಹಿಂಸೆ, ಮಗನ ಬಂಧನ ಇವೇ ಅವಳ ಕಾವ್ಯದ ಉಸಿರು. ಕೊನೆಗೂ ಆ್ಯನಾಳ ತ್ಯಾಗ ನೋವುಗಳನ್ನು ರಷ್ಯಾ ದೇಶ ಅರ್ಥೈಸಿಕೊಂಡು ಅವಳಿಗೆ ನೀಡಬೇಕಾದ ಗೌರವವನ್ನು ನೀಡಿದ್ದು ಅವಳ ಜೀವನದ ಸುಖಾಂತ್ಯ. ಮೂಲ ರಷ್ಯಾಭಾಷೆಯಿಂದ ಕನ್ನಡಕ್ಕೆ ರಿಕ್ವಿಯಂ ಮತ್ತು ನೂರು ಕವಿತೆಗಳನ್ನು ಅನುವಾದಿಸಿದ ಪ್ರಕಾಶನ, ಹೆಗ್ಗೋಡು (ಸಾಗರ) ಇವರಿಗೆ ಧನ್ಯವಾದಗಳು.

ಏನೂ ಇಲ್ಲದ ಯಾರು ಹೋಗಬಾರದ ಅಲ್ಲಿಗೆ
ಹೋಗುತ್ತಿದ್ದೇನೆ ಅಲ್ಲಿನ ಅತ್ಯಂತ ಪ್ರಿಯ ಸಂಗಾತಿಯೆಂದರೆ ನೆರಳು
ಅಲ್ಲಿ ದಟ್ಟವಾದ ಕಾಡುಗಳಿಂದ ಗಾಳೀ ಬೀಸಿಬರುತ್ತದೆ
ಕಾಲಕೆಳಗಿರುವುದು ತಣ್ಣನೆಯ ಮೆಟ್ಟಲುಗಳು.

●

ಬಂಡೆಗಳು

ವೈಶಾಖದ ಉರಿಯಲ್ಲೂ
ಕಡಲ ಮೇಲಿಂದ ತಣ್ಣನೇ ಗಾಳಿ ಬೀಸುತಿದೆ;
ಆದರೂ ಅಹಿತವಾದ ಸೆಖೆ!
ಗಾಳಿಯಲ್ಲಿ ಅದಾವುದೋ ವಾಸನೆ!
ಕಾಲಡಿಯಲ್ಲಿಯ ಬಂಗಾರ ಬಣ್ಣದ
ಮರಳ ಸ್ಪರ್ಶ ಮಾತ್ರ ಬಲು ಹಿತ.
ಸತತ ಮೊರೆತದ ದನಿಯಲ್ಲಿ
ಒಂದು ತೆರನಾದ ಗಂಭೀರ ಮೌನ!
ಮೋಡಗಳ ಸ್ಪರ್ಧೆಯ ಚಿನ್ನಾಟಗಳ ನಡುವೆ,
ಬೀಚಿನಲ್ಲಿ ಸಂಜೆಗೆಂಪು ಸೂರ್ಯನ ಕಿರಣಗಳಲ್ಲಿ
ಹೊಳೆಯುವ ಹೊಳೆಯದ ಭಾವ–ನಿರ್ಭಾವ ಮುಖಗಳಿವೆ!
ಕಣ್ಣು ಕೋರೈಸುವ ನೀಲಿಕಡಲ ದಂಡೆಯಲ್ಲಿ
ನೆರಿಗೆಗಳಂತೆ ಚಿಮ್ಮುತ್ತಿರುವ ಅಲೆಗಳು;
ಜೊತೆಗೆ ಬಿಚ್ಚುತ್ತಿವೆ ನೆನಪಿನ ಸುರುಳಿಗಳು!
ಅಲೆಗಳು ಎತ್ತರೆತ್ತರ ಚಿಮ್ಮಿದಂತೆ
ಗರ್ಭದೊಳಗಿನ ಧೀರ ಗಂಭೀರತೆ ಮತ್ತಷ್ಟು ಚೆಂದ!
ಎಲ್ಲೆಲ್ಲೂ ಉಪ್ಪು ನೀರಿನ ನೊರೆಗಳು
ಹಾದಿಯಲ್ಲಿ ಯಾರ್‍ಯಾರದೋ ಹೆಜ್ಜೆಗುರುತುಗಳಿವೆ!
ಗಟ್ಟಿಯಾಗಿ ನಿಲ್ಲಲಾಗದೇ ಬಿಟ್ಟು ಬಂದ ಮರಳಲ್ಲಿ
ನಮ್ಮ ಬಯಕೆಗಳ ಬಿತ್ತನೆಯಿದೆ!
ಅಲ್ಲೊಂದು ಇಲ್ಲೊಂದು ಹಡಗುಗಳು;
ಹರಿಕಾರರ ಹಾಗೆ ಕಾಣುವ
ಸಾಲು–ಸಾಲು ಅಂಬಿಗರ ದೋಣಿ, ತೆಪ್ಪಗಳು.
ಕ್ಷಿತಿಜದಲ್ಲಿ ಸೂರ್ಯನ ಬಂಗಾರದ ಗೋಲ;
ಸುತ್ತ ಬಣ್ಣಬಣ್ಣದ ಮೋಡಗಳು.
ಸಿಹಿ ನೀರಿಗಾಗಿ ಬರಗೆಟ್ಟ
ನಾವೂ ಇದ್ದೇವೆ–ಒಂದು ಥರಾ ಒನಪಾಗಿ;
ಕಡಲಿನಂತೆ, ಬೀಚಿನಂತೆ;
ಬಸವಳಿಯದ ಬಂಡೆಗಳು!

ಡಾ॥ ಶಾಂತಲಕ್ಷ್ಮಿ

ಉಪನಿರ್ದೇಶಕರು, ಕಾಲೇಜು ಶಿಕ್ಷಣ ನಿರ್ದೇಶನಾಲಯ, ಮಹಾರಾಣಿ ಕಾಲೇಜು ವೃತ್ತ, ಶೇಷಾದ್ರಿ ರಸ್ತೆ, ಬೆಂಗಳೂರು – 9.

ಡಿ.ಬಿ. ರಜಿಯಾರವರ ಎರಡು ಕವನಗಳು

ಅಬೇಧ್ಯ

ಕಾಡಾಗಲೊರಟಿದೆಯಾ

        ನಾಡು ಈಗೀಗ?

ಕಾರ್ಮೋಡಗಳೆ ಕವಿದಂತೆ
        ಕರಾಳ

ಹಿಂಸೆ ಕ್ರೌರ್ಯಗಳ ನೆಲೆಯ
        ಪ್ರೀತಿಯ ಒರತೆ ಬತ್ತಿಸಿ

ಭಯದ ನೆರಳುಗಳ ನಡುವೆ
        ದ್ವೇಷದ ಧಗಾಕೋರ

ಅರಾಜಕತೆಯ ತಾಂಡವ
        ಸದ್ದಿರದೆ ಸಾಗಿ ....

ಮಧುರ ಭಾಂಧವ್ಯದ ಅರ್ಥ ಕದಡಿರುವಲ್ಲಿ
"ಸಿಡಿಮದ್ದು ಪಟಾಕಿಯಂತೆ
ಸ್ಫೋಟಿಸುವ ಪಾತಕಿಗಳ"
ಹತ್ಯಾಕಾಂಡ ಹಾಡೇಹಗಲು
        ಮಾರಣ ಹೋಮವಾಗಿ

ಬದುಕು ತತ್ತರಿಸುವಲ್ಲಿ
        ರಕ್ತದ ತರ್ಪಣದ ದಾಳಿಗೆ-

ಹೊಸ ಬೆಳಗಿನಾ ಸೂರ್ಯ
        ನಿಷ್ಠ ಮಾನವತೆಯು

ಡಾ॥ ಡಿ.ಬಿ. ಫಕ್ರುದ್ಧೀನ್, ಪ್ರಾಂಶುಪಾಲರು, ಹೆಚ್.ಕೆ.ಬಿ.ಕೆ. ಇಂಜಿನಿಯರಿಂಗ್ ಕಾಲೇಜ್, ನಂ. 22/1, ನಾಗವಾರ, ಬೆಂಗಳೂರು-45.

ಸ್ಪರ್ಶವಾಗೆ
ಅಂತಃಕರಣದ ಒರತೆ
ಜಗದೆದೆಯ ಬಗೆವಂತ

ಶೋಧನೆಯು ಯುಗದ
ಮೌಲ್ಯವಾಗದೆ?

ಪುನರಾವರ್ತನೆ

ಅಂಗಾತ ಬಿದ್ದಾಗ
ಬೆನ್ನು ಬಿರಬಿರ

ಅಳುತ್ತಿರುವುದು
ನನಗೆ ಕಾಣಲೇ ಇಲ್ಲ

ಹೌದು; ಬೆನ್ನು ನಿನಗೆ ಕಾಣುವುದೇ?
ಕಿವುಡಾದಾಗ ಕೇಳುವುದೆ

ಎಂದು ಮನ ಪ್ರಶ್ನಿಸಿತು
ಹೌದಲ್ಲ; ಬೆನ್ನಿಗೆ ಬಿದ್ದ

ಸಂಬಂಧಗಳು ಸಂದೇಹಗಳು
ಅನುವಂಶಿಕದಂತೆ-

ಅನಾದಿಯಿಂದಲೂ
ಅಣು-ಅಣುವಾಗಿ ಹರಿದು ಬಂದು

ಅಂದಿನ ಕುರುಕ್ಷೇತ್ರದಂತೆ
ಅದೇ ಬಿಂದುವಿಗೆ ಸಾಗಿ

ಚಕ್ರವ್ಯೂಹ ರಚಿಸಿತೆ
ಎಂದು ಬೆನ್ನು ಕಣ್ಣೀರು ಸುರಿಸಿತು!

– ರಜಿಯಾ.ಡಿ.ಬಿ.

ನಮ್ಮೆಲ್ಲರಿಗೂ ಗೋವರ್ಧನ....

– ಸಿ.ಜೆ. ಮಾಲಿನಿ

ವಿಜಯದಶಮಿ ಹಿಂದಿನ ದಿನ ಗೋವರ್ಧನನ ಹೆಂಡತಿ ಚಂದ್ರ ಫೋನ್ ಮಾಡಿ "ತಕ್ಷಣ ಬಂದು ಬಿಡಿ. ಇವರು ಸ್ವಲ್ಪ ಸೀರಿಯಸ್ ಆಗಿದ್ದಾರೆ" ಎಂದ ಕೂಡಲೆ, ರಾಜಶೇಖರ್‌ಗೆ ಫೋನ್ ಮಾಡಿ, "ರಾಜಶೇಖರ್ ತಕ್ಷಣ ಬನ್ನಿ ಗೋವರ್ಧನ ಮಾತನಾಡಬೇಕೆಂದು ತುಂಬಾ ಹಂಬಲಿಸುತ್ತಿದ್ದರು" ಎಂದು ಕತ್ರಗುಪ್ಪೆ ಕಡೆ ಹೊರಟೆ. ಆದರೆ ಅಲ್ಲಿ ಗೋವರ್ಧನ ಮಾತನಾಡುವ ಸ್ಥಿತಿಯನ್ನು ಆಗಲೆ ದಾಟಿಬಿಟ್ಟಿದ್ದರು. ಅರೆ ಬರೆ ಎಚ್ಚರ, ನೋವು, ಯಾತನೆ, ಪರಿವಾರದ ನಡುವೆ ಗೋವರ್ಧನ್ ಸಾವನ್ನು ಸ್ವೀಕರಿಸಲು ಸಿದ್ಧ ಎಂಬಂತೆ ಮಲಗಿದ್ದರು.

ಒಂದು ವರ್ಷದಿಂದ ಕ್ಯಾನ್ಸರ್ ವಿರುದ್ಧ ಸಾರಿದ ಸಮರ ಸೋಲುತ್ತಿತ್ತು. ಐದು ಕೆಮೋಥೆರಪಿ, ಎರಡು ರೇಡಿಯೇಷನ್, ಇಷ್ಟು ದಿನ, ನಂತರ ಸರಿಹೋಗುತ್ತೇನೆ ಎಂಬ ಅವರ ಲೆಕ್ಕಾಚಾರ ತಪ್ಪಿತ್ತು. ಉದರದಲ್ಲಿದ್ದ ಕ್ಯಾನ್ಸರ್ ಸಾಯುತ್ತಿದೆ ಎಂದುಕೊಂಡಿದ್ದರು. ಆದರೆ ಅದೇ ಇವರನ್ನು ಸಾಯಿಸುತ್ತಿತ್ತು. ನಾನು, ಜಾಯ್ಸ್ ನಿಸ್ಸಹಾಯಕರಾಗಿ ನಿಂತಿದ್ದೆವು. ಗೋವರ್ಧನ, ನಮ್ಮ ಗೆಳೆಯರಲ್ಲಿ ಕೆಲವರು 'ಗುರು' ಎಂದು ಸಂಭೋಧಿಸುತ್ತಿದ್ದೆವು. ಅದು ನಮಗೆ ಸರಾಗವಾಗಿ, ಶಾಶ್ವತ ಭಾಷೆಯಾಗಿತ್ತು.

"ಗುರು ಎಚ್ಚರ ಮಾಡಿಕೊ, ಇಲ್ಲಿ ನೋಡು" ಎಂದು ನಾನು, ಜಾಯ್ಸ್ ಪದೇ ಪದೇ ಕೂಗಿದಾಗ ನಮ್ಮ ದನಿಗೆ, ಕರೆಗೆ ಸ್ಪಂದಿಸಿದ ಈ ಗೆಳೆಯನ ಗೆಳೆತನಕ್ಕೆ ಏನೆಂದು ಕರೆಯಲಿ? ನಮ್ಮ ಧ್ವನಿ ಬಂದ ಕಡೆ ಕೈ ನೀಡಿ, ಮುಖ ತಿರುಗಿಸಿದ ಅವರಿಗೆ ನಾವು ಎರಡು ಚಮಚ ಹಾಲು ಕುಡಿಸಿದೆವು. ಅವರ ಅಕ್ಕ, ತಮ್ಮ ಎಲ್ಲರೂ ಅವರನ್ನು ಹಿಡಿದುಕೊಂಡಿದ್ದರು. ಅವರು ಒಳಗೆ ಕುಸಿಯುತ್ತಿದ್ದರು. ಪ್ರಾಣ ಚಡಪಡಿಸುತ್ತಿತ್ತು. ನಾವು ಭಯದಲ್ಲಿ ನಿಂತಿದ್ದೆವು. ಈ ಸ್ಥಿತಿಯಲ್ಲಿ ನಾವು ಯಾಕೆ ಸಾಕ್ಷಿಯಾದೆವು? ಹೊರಗೆ ಚಳಿ, ಮಳೆ ರಾಜಶೇಖರ್ ಅಲ್ಲಿಯೇ ನಿಂತಿದ್ದರು. ಜನ ಬರುತ್ತಿದ್ದರು. ಅವರ ಮನೆಯವರು "ನೋಡಿ ನಿಮ್ಮಗಳಿಗೆ ಸ್ಪಂದಿಸುತ್ತಿದ್ದಾರೆ, ನಮ್ಮನ್ನು ಹತ್ತಿರ ಸೇರಿಸುತ್ತಿಲ್ಲ" ಎಂದಾಗ ಒಂದು ಜೀವಕ್ಕೆ ಸ್ನೇಹವೆಂದರೆ ಇಷ್ಟೊಂದಾ ಎನ್ನಿಸುತ್ತಿತ್ತು. ಇನ್ನೊಮ್ಮೆ ಪ್ರಯತ್ನ ಮಾಡಿ ಹಾಲು, ಔಷಧ ಕುಡಿಸಿ ಮನೆಗೆ ಮರಳಿದೆವು. ರಾಜಶೇಖರ್, ನಾನು ಮಳೆಯಲ್ಲಿ ನಡೆಯುತ್ತಲೆ ಸಾಗಿದೆವು. ಮನದಲ್ಲಿದ್ದ ಮಾತುಗಳು ಹೆದರುತ್ತಲೇ ಆಚೆ ಬರುತ್ತಿತ್ತು.

ಸಮಾಜವಾದಿ ಚಳುವಳಿಯ ಗೆಳೆಯರೆಲ್ಲರಿಗೂ ಗೋವರ್ಧನರವರು ತುಂಬ ಆತ್ಮೀಯರಾಗಿದ್ದರು. ಅವರು ಕಳೆದ ವರ್ಷ ರಾಮಕೃಷ್ಣ ಹೆಗಡೆಯವರ ಹುಟ್ಟು ಹಬ್ಬಕ್ಕೆ ಸಂಬಂಧಿಸಿದಂತೆ ಹೆಗಡೆಯವರ ಮಗಳ ಜೊತೆ ಸಿಕ್ಕಿದ್ದರು. ಪ್ರೆಸ್ ಕ್ಲಬ್‌ನಲ್ಲಿ ಎಲ್ಲರಿಗೂ ಕಾಫಿ ಕೊಡಿಸಿದರು. ನಂತರ ಭೇಟಿಯಾಗಲಿಲ್ಲ. ಅವರ ಅವರ ಕೊನೆಯ ದಿನಗಳ ಬಗ್ಗೆ ಮಾಲಿನಿಯವರು ಆತ್ಮೀಯವಾಗಿ ಬರೆದಿದ್ದಾರೆ.

ಸಂ.

ಗೋವರ್ಧನ, ಪುರುಷೋತ್ತಮ, ರಾಜಶೇಖರ್, ಊರ್ಮಿಳಾ ಮರಾಟೆ ಇವರೆಲ್ಲಾ ಪಿ.ಜಿ.ಆರ್. ಸಿಂಧ್ಯ ಅವರ ಮುಂದಾಳತ್ವದಲ್ಲಿ ಜೆ.ಪಿ. ಸಂಘರ್ಷ ವಾಹಿನಿಯಲ್ಲಿ ರಾಜಕೀಯಕ್ಕೆ ಬಂದವರು. ಶ್ರೀ ರಾಮಕೃಷ್ಣ ಹೆಗಡೆ, ಜೆ.ಹೆಚ್. ಪಟೇಲ್, ಹೆಚ್.ಡಿ. ದೇವೇಗೌಡ, ಎಸ್.ಆರ್.ಬೊಮ್ಮಾಯಿ ಈ ಎಲ್ಲಾ ಮುಖ್ಯಮಂತ್ರಿಗಳ ಕಾಲದಲ್ಲಿಯೂ ಟಿ. ಗೋವರ್ಧನ ಜನತಾದಳದ ಕಾರ್ಯಕರ್ತರಾಗಿ, ಪಕ್ಷದ ವಕ್ತಾರರಾಗಿ ಕೆಲಸ ಮಾಡಿದವರು. ಆ ಕಾಲದಲ್ಲಿ ರಾಜಕೀಯ ಕಾಲಾಳಾಗಿ ದುಡಿದವರು. ಈ 25 ವರ್ಷಗಳೂ ಜನತಾದಳದವರು ಅವರಿಗೆ ಯಾವುದೇ ಸ್ಥಾನ ಕೊಡಲಿಲ್ಲ. ಪದವಿಯಿಲ್ಲದೆಯೂ ಗೋವರ್ಧನ್ ಶಿಸ್ತುಬದ್ಧ ಕಾರ್ಯಕರ್ತರು, ಸ್ಪುಟವಾದ ಕನ್ನಡ ಬರವಣಿಗೆ, ಮಾಧ್ಯಮದಲ್ಲಿ ಉತ್ತಮ ಸಂಪರ್ಕ ಶೀಘ್ರವಾಗಿ ಕೆಲಸ ಮಾಡಿಸುತ್ತಿದ್ದರು. ಸಂಘಟನಾ ಚಾತುರ್ಯ ಈಗಿನ ಎಂ.ಬಿ.ಎ.ಗಳನ್ನು ನಾಚಿಸುವಂತಿತ್ತು. ಕೈಯಲ್ಲಿ ಸದಾ ಸಿಗರೇಟು, ಸಿಗರೇಟು ಹಿಡಿದು ಕೈಗಳು ಹಾಗೆ ಸ್ಟಕ್ ಆಗಿಬಿಟ್ಟಿದೆ ಎಂದು ನಾನು ರೇಗಿಸುತ್ತಿದ್ದೆ. ಯಾವುದೋ ಗ್ರೀಕ್ ಶಿಲ್ಪದಂತೆ, ಎತ್ತರ, ಗಾತ್ರ, ಪ್ರಾರಂಭದಲ್ಲಿ ಮಾತು ಕಡಿಮೆ ಎನ್ನಿಸಿದರೂ ನಂತರ ಮಾತಿನ ಪ್ರವಾಹ ಅನೇಕ ಗೆಳೆಯರ ಗುಂಪು.

ಕ್ಯಾನ್ಸರ್ ಆದ ಮೇಲೆ ಅವರೇ ಗೋವರ್ಧನ ಎಂದು ನಾವು ಹೇಳಬೇಕಿತ್ತು. ಹಾಗೆ ಜೀವ ತಿಂದಿತ್ತು ಕಾಯಿಲೆ. ದಿನವೂ ಸಂಪರ್ಕದಲ್ಲಿದ್ದ ಗೋವರ್ಧನ, ಹಳೆಯದೆಲ್ಲವನ್ನು ಕಥೆಗಳಾಗಿ ಬಿಚ್ಚಿಕೊಳ್ಳುತ್ತಾ ಇದ್ದರು. ಬೆಳಿಗ್ಗೆ 8.30ಕ್ಕೆ ಫೋನ್ 'ಗುರು, ಮಕ್ಕಳು ಹೋದರಾ? ಮಾತನಾಡಿದರೆ ತೊಂದರೆ ಇಲ್ಲವಾ?' ಎಂದು ಪ್ರಾರಂಭಿಸಿದಾಗ, ನನ್ನಲ್ಲಿ ಸದಾ ಒಂದು ಅಳುಕು. ಕ್ಯಾನ್ಸರ್ ಕಡೆ ದಿನಗಳು ಹೇಗಿರುತ್ತದೆ, ಆ ಮನುಷ್ಯನ ಮನಸ್ಥಿತಿ ಹೇಗಿರುತ್ತದೆ ಎಂದು ನನಗೆ ಚೆನ್ನಾಗಿ ಅರಿವಿತ್ತು. ಇನ್ನೆಷ್ಟು ದಿನ ಮಾತನಾಡುತ್ತೇವೊ ಇಲ್ಲವೋ ಎಂಬಂತೆ, ಸದಾ ಮಾತನಾಡುತ್ತಿದ್ದರು. ನಾನು ಫೋನಿನಲ್ಲಿ ಕಿವಿಯಾಗಿದ್ದೆ. ಕೆಲವು ಗೆಳೆಯರು ಇವರ ನಂಬರ್ ನೋಡಿ ಸ್ವಿಚ್ ಆಫ್ ಮಾಡಿದ್ದು, ಇನ್ನೊಬ್ಬ ರಾಜಕಾರಣಿ, ಬಿಝಿ ಆಮೇಲೆ ಮಾಡುತ್ತೇನೆ ಎಂದಿದ್ದನ್ನು ಹೇಳಿಕೊಂಡು ನೊಂದುಕೊಳ್ಳುತ್ತಿದ್ದರು.

ಕೇಮೊಥೆರಪಿ, ರೇಡಿಯೇಷನ್, ನಂತರವೂ ಕ್ಯಾನ್ಸರ್ ಒಳಗೆ ಲಿವರ್ ಹೊಕ್ಕಿದೆ ಎಂದು ಡಾ॥ಶೇಖರ್ ಪಾಟೀಲ್ ತಿಳಿಸಿದಾಗ, ಹಿ ವಾಸ್ ಫುಲ್ಲಿ ಡಿಜೆಕ್ಟೆಡ್ ಅಂಡ್ ಡಿಪ್ರೆಸ್ಡ್. ಪಿ.ಜಿ.ಆರ್. ಸಿಂಧ್ಯ ಅವರು ಟ್ರೀಟ್ ಮೆಂಟ್ ಮುಂದುವರೆಸಲು ಎಷ್ಟು ಹೇಳಿದರೂ ಬೇಡವೆಂದು ಹಟ ಹಿಡಿದವರು ನಂತರ ಚೇತರಿಸಿಕೊಳ್ಳಲೇ ಇಲ್ಲ.

ವಿಜಯದಶಮಿ ದಿನ ಬೆಳಿಗ್ಗೆ ಅವರ ಪ್ರಾಣ ಹೋಗಿತ್ತು. 'ಇನ್ನು ಯಾರು ನಿಮ್ಮನ್ನು ಗುರು ಎಂದು ಕರೆಯುತ್ತಾರೆ' ಎಂದು ಚಂದ್ರ ರೋದಿಸುತ್ತಿದ್ದರು. ಜನ ಬರುತ್ತಿದ್ದರು. ವೈ.ಎಸ್.ವಿ. ದತ್ತಾ ಮಾಧ್ಯಮದವರಿಗೆ ಸುದ್ದಿ ಮುಟ್ಟಿಸಿದರು. ಅಳಿದ ಗೆಳೆಯನ/ ಕಾರ್ಯಕರ್ತನ ಋಣ ತೀರಿಸಲೆಂಬಂತೆ ಓಡಾಡುತ್ತಿದ್ದರು. ಆದರೆ ಗೋವರ್ಧನ ಇರುವ ತನಕ ಯಾರ ಚಾಕರಿ ಮಾಡಿದ್ದರೋ ಆ ಮನೆಯಿಂದ ಕನಿಷ್ಠ ಸೌಜನ್ಯಕ್ಕಾದರೂ ಒಂದು ನರಪಿಳ್ಳೆಯೂ ಇತ್ತ ಕಡೆ ಸುಳಿಯಲಿಲ್ಲ.

ಕಷ್ಟದಲ್ಲಿ ನಡೆದು ಬಂದ ದಾರಿಯನ್ನು ಅವಲೋಕಿಸುತ್ತಾ 'ಎಣ್ಣೆ ಬಂದಾಗ ಕಣ್ಣು ಮುಚ್ಚಿಕೊಂಡ' ಎನ್ನುವಂತೆ ಕೊಂಡ ಹೊಸ ಕಾರನ್ನೂ ಹತ್ತದೆ ನಡೆದು ಬಿಟ್ಟ ಗೆಳೆಯನದು ದುರಾದೃಷ್ಟವೇ? ವಿಧಿಯೇ?

ಮಾರನೆಯ ದಿನ ಬೆಳಿಗ್ಗೆ 8.30 ಕ್ಕೆ ನನ್ನ ಮಗ 'ಅಂಕಲ್, ಇಷ್ಟು ಹೊತ್ತಿಗೆ ಮಾಡುತ್ತಿದ್ದರು, ಇನ್ನು ಅಮ್ಮನ ಜೊತೆ ದಿನವೂ ಮಾತನಾಡುವವರು ಯಾರು?' ಎಂದಾಗ, ಹೇಗೆ ಒಂದು ಜೀವ, ಒಂದು ದನಿ, ಒಂದು ಫೋನ್ ನಂ. ನಮ್ಮಿಂದ ಮರೆಯಾಯಿತು ಎನ್ನುವ ವ್ಯಥೆ ಉಳಿಯಿತು.

ಈಗ ನನ್ನ ಮನಸ್ಸಿನಲ್ಲಿ ಪುರುಷೋತ್ತಮ, ಗೋವರ್ಧನ್ ಮುಂತಾದವರ ನೆನಪು ಆಕಾರ ಪಡೆಯುತ್ತಿರುತ್ತದೆ. ಮತ್ತೆ ಸ್ಲೇಟಿನ ಮೇಲೆ ಬರೆದ ಬರವಣಿಗೆಯಂತೆ ಮಾಯವಾಗುತ್ತದೆ. ಮತ್ತೆ ನೆನಪು ಬಂದಾಗ....

ಶೂದ್ರಕ್ಕೆ ಶುಭಾಶಯಗಳು :

ಶಾಮಣ್ಣ ರೆಡ್ಡಿ

ಅಧ್ಯಕ್ಷರು

ಗ್ರಾಮ ಉದ್ಯೋಗ ಸಂಘ

ವಂಗಸಂದ್ರ, ಬೇಗೂರು ಹೋಬಳಿ,

ಬೆಂಗಳೂರು ಗ್ರಾಮಾಂತರ ಜಿಲ್ಲೆ

ಅಲೆಮಾರಿಯ ಮಾತು : 144

ಕನಸಿಗೊಂದು ಕಣ್ಣು

– ಶೂದ್ರ ಶ್ರೀನಿವಾಸ್

ಬಿ.ಟಿ. ಸೋಮಣ್ಣ ಎಂಬ ಅಂತರ್ಮುಖಿ

"I am moved by fancier that are curled around there images and cling: The notion of some infinitely gentle infinitely suffering thing"

- T.S. Eliot

ಇತ್ತೀಚೆಗೆ ಆಕಸ್ಮಿಕವಾಗಿ ಬೆಂಗಳೂರಿನ ರಿಚ್‌ಮಂಡ್ ಟೌನ್‌ನಲ್ಲಿರುವ ಕ್ಯಾಥೊಲಿಕ್ ಕ್ಲಬ್‌ಗೆ ಹೋದೆ. ಕಳೆದ ಒಂದು ವರ್ಷದಿಂದ ಹೋಗಿಬರೋಣವೆಂದು ಯೋಚಿಸಿದರೂ ಹೋಗಲಾಗಿರಲಿಲ್ಲ. ಹಾಗೆ ನೋಡಿದರೆ ನಿಜವಾಗಿಯೂ ಅದು ಎಲ್ಲಿದೆ ಎಂಬುದರ ನಕ್ಷೆಯನ್ನು ಮರೆತು ಹೋಗಿದ್ದೆ. ಕೊನೆಗೆ ವೈ.ಎಂ.ಸಿ.ಎ.ಯ ಜೆ. ಸುಹಾಸ್‌ರವರ ಜೊತೆ, ಪ್ರಸಿದ್ಧ ಕ್ಯಾಥೊಲಿಕ್ ಕ್ಲಬ್ ಬಗ್ಗೆ ಪ್ರಸ್ತಾಪಿಸಿದ್ದೆ. ಅಲ್ಲಿಯೇ ಕೂತಿದ್ದ ಜೈಕಿರಣ್‌ರವರು "ನಾನು ಆ ಕ್ಲಬ್‌ನ ಸದಸ್ಯ. ಮುಂದಿನ ವಾರ ಒಂದು ದಿನ ಅಲ್ಲಿಗೆ ಊಟಕ್ಕೆ ಹೋಗೋಣ" ಎಂದರು. ಅಂದು ವೈ.ಎಂ.ಸಿ.ಎ.ಯು ಎಷ್ಟೋ ವರ್ಷಗಳಿಂದ ನಡೆಸಿಕೊಂಡು ಬರುತ್ತಿರುವ ಮತೀಯ ಸಾಮರಸ್ಯದ ಟಾಸ್ಕ್‌ಫೋರ್ಸ್‌ನ ತಿಂಗಳ ಸಭೆ ಇತ್ತು. ಆ ಟಾಸ್ಕ್‌ಫೋರ್ಸ್‌ನಲ್ಲಿ ಕಳೆದ ಹತ್ತು ವರ್ಷಗಳಿಂದ ಸಮಿತಿಯ ಸದಸ್ಯನಾಗಿ ನಾನಾ ರೀತಿಯ ಅನುಭವಗಳನ್ನು ಪಡೆದಿದ್ದೇನೆ. ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಪರಿಚಯವಾಗಿದ್ದಾರೆ.

ಕ್ಯಾಥೊಲಿಕ್ ಕ್ಲಬ್‌ಗೆ ಹೋಗುವುದಕ್ಕೆ ಮುಂಚೆ ಕಳೆದ ತಿಂಗಳು ಅಂಡಮಾನ್ ಪೋರ್ಟ್ ಬ್ಲೇರ್‌ನಲ್ಲಿದ್ದೆ. ನವೆಂಬರ್ 21ರಂದು ರಾತ್ರಿ ನಾವು ಇದ್ದ ಲಾಡ್ಜ್‌ನ ಕಾಟೇಜಸ್‌ನ ಆವರಣದಲ್ಲಿಯೇ ಬಾರ್ ಹೊಂದಿಕೊಂಡಂತೆ ಇತ್ತು. ಅಲ್ಲಿಗೆ ಬಿಯರ್ ಕುಡಿಯಲು ಹೋದೆ. ಆ ದಿನ ಕೋರಲ್ ಹೈಲ್ಯಾಂಡ್‌ನಲ್ಲಿ ಸಮುದ್ರದಲ್ಲಿ ಬಿದ್ದು ಕಣ್ಣಿಗೆ ಭೂತಗನ್ನಡಿಗಳನ್ನು ಕಟ್ಟಿಕೊಂಡು, ಬಾಯಿಗೆ ಉಸಿರಾಟದ ಪುಟ್ಟ ವಸ್ತುವನ್ನು ಕಚ್ಚಿಕೊಂಡು ಸಮುದ್ರದಾಳದಲ್ಲಿರುವ ಏನೇನೋ ಅದ್ಭುತಗಳನ್ನು ಮನಸ್ಸಿನ ತುಂಬ ತುಂಬಿಕೊಂಡಿದ್ದೆ. ಒಂದು ದೃಷ್ಟಿಯಿಂದ ನಿಜವಾಗಿಯೂ ಸುಸ್ತಾಗಿದ್ದೆ. ಎಲ್ಲರೊಡನೆ ಊಟಕ್ಕೆ ಮುಂಚೆ ತಣ್ಣನೆಯ ಬಿಯರ್ ಕುಡಿಯಲು ಮನಸ್ಸಾಗಿತ್ತು. ಬಿಯರ್ ಕುಡಿಯುವಾಗ ಎಣ್ಣೆಗೆಂಪಿನ ಧಡೂತಿ ವ್ಯಕ್ತಿಯೊಬ್ಬ ಬಂದು "ಹೇಗಿದೆ ಈ ಸ್ಥಳ?" ಎಂದು ಇಂಗ್ಲೀಷಿನಲ್ಲಿ ಕೇಳಿದರು. "ನೀವು ಈ ಸ್ಥಳದ ಯಜಮಾನರಾ?" ಎಂದೆ. "ಹೌದು" ಎಂದರು. "ಕೂತುಕೊಳ್ಳಿ" ಎಂದೆ. ಕೂತು,

ನಾವೆಲ್ಲ ಬೆಂಗಳೂರಿನಿಂದ ಬಂದಿರುವುದು ಗೊತ್ತಾಗಿ, "ನಾನು ಬೆಂಗಳೂರಿನಲ್ಲಿ ಹದಿನೈದು ವರ್ಷವಿದ್ದೆ. ಒಂದು ಗ್ಯಾರೇಜ್ ನಡೆಸ್ತಿದ್ದೆ. ರಿಚ್ ಮಂಡ್ ಟೌನ್ ನಲ್ಲಿ ಮನೆ ಮಾಡಿಕೊಂಡಿದ್ದೆ" ಎಂದರು. ಹೆಸರು ಕೇಳಿದೆ. "ವರ್ಗೀಸ್" ಎಂದರು. "ರಿಚ್‌ಮಂಡ್ ಟೌನ್ ನಲ್ಲಿರುವ ಕ್ಯಾಥೊಲಿಕ್ ಕ್ಲಬ್ ಗೊತ್ತಾ?" ಎಂದೆ. "ಗೊತ್ತು ಅಲ್ಲಿಗೆ ಒಮ್ಮೊಮ್ಮೆ ಬಿಯರ್ ಕುಡಿಯಲು ಹೋಗ್ತಿದ್ದೆ. ಈಗ ಇಲ್ಲಿಗೆ ಬಂದು ಇಪ್ಪತ್ತೈದು ವರ್ಷವಾಗಿದೆ. ಈ ಸ್ಥಳವನ್ನು ಪಡೆದು ಹದಿನೈದು ವರ್ಷವಾಗಿದೆ" ಎಂದರು. "ಒಂದು ಗ್ಲಾಸ್ ಬಿಯರ್ ಕುಡಿಯಲು ಕಂಪನಿ ಕೊಡಿ" ಎಂದೆ. "ಇಂದು ಬೇಡ, ನಾಳೆ ನೋಡುವಾ" ಎಂದರು. "ಬೆಂಗಳೂರಿನ ಕಡೆ ಬನ್ನಿ" ಎಂದೆ. "ಇಲ್ಲ, ಈಗ ಮೊದಲಿನ ರೀತಿಯಲ್ಲಿ ಸುತ್ತಾಡಲು ಉತ್ಸಾಹವಿಲ್ಲ. ಎಪ್ಪತ್ತೈದು ವರ್ಷವಾಗಿದೆ. ಮಗಳು ಕೃಷಿ ಇಲಾಖೆಯಲ್ಲಿ ಅಧಿಕಾರಿಯಾಗಿದ್ದಾಳೆ. ಅಳಿಯ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಅಧಿಕಾರಿಯಾಗಿದ್ದಾರೆ. ಈ ಸ್ಥಳವನ್ನು ಪರಿಸರ ಸಂರಕ್ಷಣೆಗಾಗಿ ಎಕೋ ಕ್ಲಬ್ ಮಾಡಲು ತೆಗೆದುಕೊಂಡಿರುವುದು. ಆದ್ದರಿಂದಲೇ ಸ್ವಲ್ಪ ಕಾಡಿನ ವಾತಾವರಣವನ್ನುಳಿಸಿಕೊಂಡಿದ್ದೇನೆ. ಕಾಟೇಜಸ್‌ಗೂ ನೈಸರ್ಗಿಕ ಸ್ವರೂಪವನ್ನು ಕೊಟ್ಟಿದ್ದೇನೆ. ಮತ್ತೆ ನಿಮ್ಮನ್ನು ನೋಡುವೆ" ಎಂದು ಎದ್ದು ಹೋದರು. ವರ್ಗಿಸ್‌ರವರು ಎದ್ದು ಹೋದ ಮೇಲೆ ಅನ್ನಿಸಿತು. ಕ್ಯಾಥೊಲಿಕ್ ಕ್ಲಬ್‌ನಲ್ಲಿ ಬಿ.ಟಿ.ಸೋಮಣ್ಣನವರು ಗೊತ್ತಿತ್ತಾ ಎಂಬುದನ್ನು ಕೇಳಬೇಕಾಗಿತ್ತು ಎಂದು.

ಕ್ಲಬ್‌ಗೆ ಮಧ್ಯಾಹ್ನ ಎರಡು ಗಂಟೆಗೆ ಹೋದೆ. ಅಲ್ಲಲ್ಲಿ ಸದಸ್ಯರು ಕೂತು ಊಟ ಮಾಡುತ್ತಿದ್ದರು. ಕೆಲವರು ಬಿಯರ್, ವಿಸ್ಕಿ ಕುಡಿಯುತ್ತಿದ್ದರು. ನಾನು ಅಲ್ಲಿಯೇ ಖಾಲಿ ಇದ್ದ ಟೇಬಲ್ ಬಳಿ ಕೂತು ಬಿ.ಟಿ.ಸೋಮಣ್ಣನವರು ಮಾಮೂಲಿಯಾಗಿ ಕೂರುತ್ತಿದ್ದ ಜಾಗವನ್ನು ಹುಡುಕಿದೆ. ಕ್ಲಬ್ಬಿನ ಉತ್ತರದ ಕಡೆಗೆ ಕೂತು ಸದಾ ದಕ್ಷಿಣದ ಕಡೆಗೆ ಮುಖ ಮಾಡಿ ಕೂರುತ್ತಿದ್ದರು. ಒಂದು ಬಾಟಲ್ ಬಿಯರ್ ತರಿಸಿಕೊಂಡು ಅದರ ಜೊತೆಗೆಯೇ ಪೀಟರ್ ಸ್ಕಾಟ್ ಎರಡು ಪೆಗ್ ಒಂದೇ ಬಾರಿಗೆ ಬೇರೆ ಬೇರೆ ಗ್ಲಾಸುಗಳಲ್ಲಿ ತರಿಸಿಕೊಳ್ಳುತ್ತಿದ್ದರು. ಒಂದೇ ಸಮನೇ ನಾಲ್ಕೈದು ಸಿಗರೇಟುಗಳನ್ನು ಒಂದೆರಡು ಗಂಟೆಯಲ್ಲಿ ಸೇದುತ್ತಿದ್ದರು. ಹೀಗೆ ಸೇದುತ್ತಲೇ ತಮ್ಮ ವಿಚಾರಲಹರಿಯ ಮೂಲಕ ದೇವರಾಜ ಅರಸು ಮತ್ತು ಅವರ ನಡುವಿನ ರೋಚಕ ದಿನಗಳನ್ನು ಬಿಡಿಸಿ ಹೇಳುತ್ತಿದ್ದರು. ಇದನ್ನೆಲ್ಲ ಕುರಿತು ಯೋಚಿಸುತ್ತಿರುವಾಗಲೇ ಸಪ್ಲೈಯರ್ ಬಂದು "ನೀವು ಸದಸ್ಯರಾ?" ಎಂದು ಕೇಳಿದರು. "ಇಲ್ಲ, ನಮ್ಮ ಸ್ನೇಹಿತರು ಬರುವರು, ಕಾಯುತ್ತಿದ್ದೇನೆ" ಎಂದು ನಾಟಕೀಯವಾಗಿ ಗಡಿಯಾರ ನೋಡಿಕೊಂಡೆ. ಆತ ಗಂಭೀರವಾಗಿ ಹೋದ. ಇದಾದ ನಂತರ ಹತ್ತು ನಿಮಿಷ ಅಲ್ಲೇ ಕೂತಿದ್ದು ಹೊರಗೆ ಬಂದೆ.

ಬಿ.ಟಿ. ಸೋಮಣ್ಣನವರು ಮೊದಲೇ ಪರಿಚಯವಿದ್ದರೂ; ನಿಜವಾಗಿಯೂ ಪರಿಚಯವಾಗಿದ್ದು ಒಂದು ವಿಚಿತ್ರ ಸಂದರ್ಭದಲ್ಲಿ. 1994ರಲ್ಲಿರಬಹುದು. ನನ್ನ ಗೆಳೆಯರ ಜೊತೆ ಕನಕಪುರದ ಕಡೆ ಹಾಗೂ ಬನ್ನೇರುಘಟ್ಟದ ಕಡೆ ಜಮೀನು ನೋಡಲು ಹೋಗಿ ವಾಪಸ್ಸು ಬರುವಾಗ ಬೆಂಗಳೂರು ಡೈರಿಯ ಬಳಿ ದೇವರಾಜ ಅರಸುರವರ ಸಾಧನೆ ಮತ್ತು ಬೆಂಗಳೂರು ಅಭಿವೃದ್ಧಿಗೆ ಸಂಬಂಧಿಸಿದಂತೆ ಒಂದು ದೊಡ್ಡ ಜಾಹಿರಾತಿನ

ಬೋರ್ಡ್ ಇತ್ತು. ಅಲ್ಲೆಲ್ಲೂ ಬಿ.ಟಿ. ಸೋಮಣ್ಣನವರ ಹೆಸರಿರಲಿಲ್ಲ. ಆದರೆ ಬಿ.ಟಿ. ಸೋಮಣ್ಣನವರ ನಗರಾಭಿವೃದ್ಧಿ ಕಲ್ಪನೆಯ ಬಗ್ಗೆ ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕರಿಂದ ಸಾಕಷ್ಟು ಕೇಳಿದ್ದೆ. ಹಾಗಿ ನೋಡಿದರೆ ಮೊದಲನೆಯ ಬಾರಿಗೆ ಅರಸುರವರನ್ನು ಹಾಗೂ ಬಿ.ಟಿ. ಸೋಮಣ್ಣನವರನ್ನು ಪರಿಚಯ ಮಾಡಿಕೊಟ್ಟಿದ್ದೇ ಆನಂದರಾವ್ ರೇಣುರವರು. ನನಗೆ ತುಂಬ ಪ್ರಿಯರಾದ ಅಧಿಕಾರಿ. ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯ ಬಗ್ಗೆ ದಟ್ಟವಾದ ಅರಿವಿದ್ದವರು. ಅವರ ಮೂಲಕವೆ ಬಿ.ಎಸ್. ವೆಂಕಟಲಕ್ಷ್ಮಿಯವರಂಥ ಅಪರೂಪದ ಲೇಖಕಿ ಪರಿಚಯವಾಗಿದ್ದು. ಇದೇ ಸಮಯದಲ್ಲಿ ನನಗೆ ಮುಲ್ಕರಾಜ್ ಆನಂದ್‌ರವರು ಸಂಪಾದಿಸಿ ಪ್ರಕಟಸುತ್ತಿದ್ದ 'ಮಾರ್ಗ್' ಎಂಬ ಪತ್ರಿಕೆಯನ್ನು ಆನಂದರೇಣು ಹಾಗೂ ವೆಂಕಟಲಕ್ಷ್ಮಿಯವರು ಪರಿಚಯಿಸಿದ್ದು.

ಬೆಂಗಳೂರು ಡೈರಿಯ ಬಳಿಯಿದ್ದ ಜಾಹಿರಾತನ್ನು ದೃಷ್ಟಿಯಲ್ಲಿಟ್ಟುಕೊಂಡು ಬಿ.ಟಿ. ಸೋಮಣ್ಣನವರನ್ನು ಕುರಿತಂತೆ ಒಂದು ನೋಟವನ್ನು ಲಂಕೇಶ್ ಪತ್ರಿಕೆಯಲ್ಲಿ ಆತ್ಮೀಯವಾಗಿ ಬರೆದೆ. ಅದನ್ನು ಬರೆಯುವಾಗ ಬಿ.ಟಿ. ಸೋಮಣ್ಣನವರು ದಿವಂಗತರಾಗಿದ್ದಾರೆಂದೇ ಭಾವಿಸಿದ್ದೆ. ಅದೊಂದು ದಿನ ಮಧ್ಯಾಹ್ನ ಭಾನುವಾರ ಊಟ ಮಾಡಿ ಇಸ್ರೋ ಬಡಾವಣೆಯ ನನ್ನ 'ಕೋಟೆಮನೆ'ಯಲ್ಲಿ ಭಾನುವಾರದ 'ದಿ ಹಿಂದೂ' ಹಾಗೂ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಗಳ ವಾರದ ಲೇಖನಗಳಲ್ಲಿ ತಲ್ಲೀನನಾಗಿದ್ದೆ. ಆಗ ಟೈಮ್ಸ್ ಆಫ್ ಇಂಡಿಯಾ ಚೆನ್ನಾಗಿ ಬರುತ್ತಿತ್ತು. ಈಗಿನ ರೀತಿಯಲ್ಲಿ ಅಂದಗೆಟ್ಟಿರಲಿಲ್ಲ. ದೂರವಾಣಿ ಕರೆಯೊಂದು ಬಂತು. "ಶೂದ್ರ ಶ್ರೀನಿವಾಸ್ ಇದ್ದಾರಾ?" ಎಂದಾಗ "ಮಾತಾಡುತ್ತಿದ್ದೇನೆ" ಎಂದೆ. "ಶ್ರೀನಿವಾಸ್ ನಮಸ್ಕಾರ, ನಾನು ಬಿ.ಟಿ.ಸೋಮಣ್ಣ ಮಾತಾಡುತ್ತಿರುವುದು" ಎಂದರು. ನಾನು ನಗುತ್ತ "ಏಯ್ ಕತ್ತೆ, ನಿನ್ನ ನಾಟಕವಿರಲಿ, ಎಲ್ಲಿಂದ ಮಾತಾಡುತ್ತಿರುವುದು?" ಎಂದೆ. ಆ ಕಡೆಯಿಂದ ಬಿ.ಟಿ. ಸೋಮಣ್ಣನವರು ಗಾಬರಿಗೊಂಡರು ಅನ್ನಿಸುತ್ತದೆ. "ಶ್ರೀನಿವಾಸ್, ನಾನಪ್ಪ ಬಿ.ಟಿ. ಸೋಮಣ್ಣ, ಇನ್ನೂ ಬದುಕಿದ್ದೀನಿ ಸತ್ತಿಲ್ಲ" ಎಂದರು. ನನಗೆ ತುಂಬ ಸಂಕೋಚ ಅನ್ನಿಸಿ "ಸರ್, ದಯವಿಟ್ಟು ಕ್ಷಮಿಸಿ, ನನಗೆ ನಿಮ್ಮ ಧ್ವನಿ ಎಂದು ಗೊತ್ತಾಗಲಿಲ್ಲ. ಅದಕ್ಕೆ ಮಿಗಿಲಾಗಿ ನಿಮ್ಮಿಂದ ದೂರವಾಣಿ ಕರೆಯನ್ನು ನಿರೀಕ್ಷಿಸಿರಲಿಲ್ಲ. ನನ್ನ ದೂರದರ್ಶನದ ಗೆಳೆಯ ಭರತಾದ್ರಿ ಎಂಬ ತುಂಟ ಮಾಡಿರಬಹುದು ಎಂದು ಭಾವಿಸಿದೆ. ಯಾಕೆಂದರೆ ಅವನು ಯಾವಾಗಲೂ ಹೆಸರು ಬದಲಾಯಿಸಿ ದೂರವಾಣಿಯಲ್ಲಿ ಮಾತಾಡಿ ನಮ್ಮ ಮನೆಯವರಿಗೆಲ್ಲ ಗಾಬರಿ ಹುಟ್ಟಿಸುತ್ತಿರುತ್ತಾನೆ" ಎಂದೆ. ಸೋಮಣ್ಣನವರು ನಗುತ್ತ "ಇರಲಿ ಬಿಡಿ ಶ್ರೀನಿವಾಸ್, ನಿಮ್ಮ ಲೇಖನವನ್ನು ಲಂಕೇಶ್ ಪತ್ರಿಕೆಯಲ್ಲಿ ಓದಿದೆ. ಎಷ್ಟು ಆತ್ಮೀಯವಾಗಿ ಬರೆದಿದ್ದೀರಿ. ಎಲ್ಲರೂ ನನ್ನನ್ನು ಮರೆತಿದ್ದಾರೆಂದು ಭಾವಿಸಿದ್ದೆ. ಆದರೆ ನೀವು ನೆನಪಿಟ್ಟುಕೊಂಡು ಬರೆದಿದ್ದೀರಲ್ಲ. ಅದೇ ದೊಡ್ಡ ವಿಷಯ. ಈಗ ಒಂದು ಮುಖ್ಯ ವಿಷಯಕ್ಕಾಗಿ ಫೋನ್ ಮಾಡಿದ್ದು. ಬೆಂಗಳೂರು ದೂರದರ್ಶನದವರು ನನ್ನ ಸಂದರ್ಶನ ಕೇಳಿದ್ದಾರೆ. ಆ ಸಂದರ್ಶನವನ್ನು ನೀವೇ ಮಾಡಬೇಕೆಂದು ಸೂಚಿಸಿದ್ದೇನೆ. ಅವರು ಸಂಪರ್ಕಿಸುವರು. ದಯಮಿಟ್ಟು ಒಪ್ಪಿಕೊಳ್ಳಿ" ಎಂದರು. "ಆಗಲಿ ಸರ್" ಎಂದು ದೂರವಾಣಿಯಲ್ಲಿ ಮತ್ತೊಮ್ಮೆ ನಮಸ್ಕರಿಸಿದೆ.

ಇದಾದ ಸ್ವಲ್ಪ ಸಮಯಕ್ಕೆ ದೂರದರ್ಶನದಲ್ಲಿ ಕೆಲಸ ಮಾಡುವ ಗೆಳತಿಯೊಬ್ಬಳು ಸಂಪರ್ಕಿಸಿದರು. ಕ್ಷಮಿಸಿ, ಈ ತಕ್ಷಣಕ್ಕೆ ಆಕೆಯ ಹೆಸರು ಮರೆತಿರುವೆ. ತುಂಬ ಕ್ರಿಯಾಶೀಲ ಹೆಂಗಸು. ಈಗ ಅವರು ಬದುಕಿಲ್ಲ. ವಿಚಿತ್ರ ದೇಹದ ಕೀಲುಗಳ ಖಾಯಿಲೆಯಿಂದ ನರಳಿ ನರಳಿ ಸಾವನ್ನಪ್ಪಿಕೊಂಡರು. ಆಕೆ ಸಂಪರ್ಕಿಸಿದಾಗ ನಾನು ವಿಷಾದದಿಂದ ಮತ್ತೊಮ್ಮೆ ಬಿ.ಟಿ. ಸೋಮಣ್ಣನವರಿಗೆ ನನ್ನ ಕ್ಷಮೆಯನ್ನು ತಿಳಿಸಿ. ಅನ್ಯಥಾ ಭಾವಿಸಬೇಡಿ. ಬಿ.ಟಿ. ಸೋಮಣ್ಣನವರು ಬದುಕಿರುವುದು ನನಗೆ ಗೊತ್ತೇ ಇರಲಿಲ್ಲ ಎಂದು, ಒಟ್ಟು ಮಾತುಕತೆಯ ವಿವರ ತಿಳಿಸಿದೆ. ಆಕೆ ನಗುತ್ತ "ಸೋಮಣ್ಣನವರಿಗೆ ನಿಮ್ಮ ದೂರವಾಣಿ ಸಂಖ್ಯೆಯನ್ನು ಕೊಟ್ಟವಳು ನಾನೇ, ನಿಮ್ಮ ಲೇಖನವನ್ನು ಓದಿದ ಮೇಲೆ ನೀವೇ ಸಂದರ್ಶಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ. ದಯವಿಟ್ಟು ನಡೆಸಿ ಕೊಡಿ. ನನಗೂ ಖುಷಿಯಾಗುತ್ತದೆ. ಲಂಕೇಶ್ ಮೇಸ್ಟ್ರು ಹೇಗಿದ್ದಾರೆ? ಅವರನ್ನು ನೋಡಿ ಬಹಳ ದಿವಸವಾಯಿತು. ಅವರಿಂದ ಮತ್ತು ನಿಮ್ಮಿಂದ ಯಾವುದೋ ಪೀಡೆಯಿಂದ ನನಗಾಗುತ್ತಿದ್ದ ಮಾನಸಿಕ ಹಿಂಸೆಯಿಂದ ಬಿಡುಗಡೆ ಮಾಡಿದಿರಿ" ಎಂದಳು. ನಾನು ನಗುತ್ತ "ಸಂದರ್ಶನಕ್ಕೆ ಬರುವೆ" ಎಂದೆ. "ನಾಳೆಯೇ ನಿಮಗೆ ಪತ್ರ ಕಳಿಸುವೆ" ಎಂದು ಹೇಳಿ ಪತ್ರ ಕಳಿಸಿಕೊಟ್ಟರು. ಆಕೆಯ ಸಮಸ್ಯೆಯನ್ನು ಆಗಿನ ದೂರದರ್ಶನದ ನಿರ್ದೇಶಕರಾಗಿದ್ದ ಅಝೀ ಝುಲ್ಲಾ ಬೇಗ್‌ರವರ ಮೂಲಕ ಲಂಕೇಶ್‌ರವರು ಪರಿಹರಿಸಿದ್ದರು. ಆಕೆ ಸಿಕ್ಕಿದಾಗಲೆಲ್ಲ ನಗುತ್ತ "ಶ್ರೀನಿವಾಸ್ ನಿಮ್ಮ ಮೇಸ್ಟ್ರು ಗೊಂಬೆಗೆ ಸೀರೆ ತೊಡಿಸಿದರೂ ಮೋಹಿಸಲು ಪ್ರಾರಂಭಿಸುತ್ತಾರೆ" ಎಂದು ತಮಾಷೆಯಾಡುತ್ತಿದ್ದರು.

ಬಿ.ಟಿ. ಸೋಮಣ್ಣನವರ ಸಂದರ್ಶನದ ದಿವಸವೇ ಕೊಚ್ಚಿನ್‌ಗೆ ಹೋಗಬೇಕಾಗಿತ್ತು. ಕೇರಳದ ಕೊಚ್ಚಿನ್ ಬಳಿಯ ಆಳ್ವೆಯಲ್ಲಿ ಅಖಿಲ ಭಾರತ ಲೇಖಕರ ಒಂದು ವಾರ ಸಮ್ಮೇಳನವಿತ್ತು. ಯು.ಆರ್. ಅನಂತಮೂರ್ತಿಯವರು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಸಮಯವದು. ಅಗ್ರಹಾರ ಕೃಷ್ಣಮೂರ್ತಿ ಪ್ರಾದೇಶಿಕ ಕಾರ್ಯದರ್ಶಿಯಾಗಿದ್ದ. ಈ ಕಾರಣಕ್ಕಾಗಿ ಕರ್ನಾಟಕದಿಂದ ಏಳೆಂಟು ಮಂದಿ ಲೇಖಕರು ಅದರಲ್ಲಿ ಭಾಗವಹಿಸಿದ್ದೆವು. ಜಿ.ಎಸ್.ಎಸ್., ಡಿ.ಆರ್.ನಾಗರಾಜ್, ಡಾ॥ ಸಿದ್ಧಲಿಂಗಯ್ಯ, ಪ್ರತಿಭಾನಂದ ಕುಮಾರ್ ಮತ್ತು ಶಾಂತಿನಾಥ ದೇಸಾಯಿಯಂಥವರು ಇದ್ದರು. ಬೆಳಿಗ್ಗೆ ೧೧.೩೦ಕ್ಕೆ ರವೀಂದ್ರ ಕಲಾಕ್ಷೇತ್ರ ಮುಂಭಾಗದ ಸಾಹಿತ್ಯ ಅಕಾಡೆಮಿಯ ಕಛೇರಿಯ ಬಳಿ ಸೇರಬೇಕಾಗಿತ್ತು. ದೂರದರ್ಶನ ಕೇಂದ್ರದಲ್ಲಿ ಸ್ವಲ್ಪ ಗಡಿಬಿಡಿ ಮಾಡಿದೆ. ಆಗ ಸೋಮಣ್ಣನವರು "ಶ್ರೀನಿವಾಸ್, ನೀವು ಭಯಪಡುವ ಅಗತ್ಯವಿಲ್ಲ. ಕೊಚ್ಚಿನ್‌ಗೆ ನಿಮ್ಮ ವಿಮಾನ ತಪ್ಪಿದರೂ ಅಲ್ಲಿಗೆ ನಿಮ್ಮನ್ನು ತಲುಪಿಸುವ ವ್ಯವಸ್ಥೆ ಮಾಡುವೆ" ಎಂದರು. ಅಂದು ನನಗೆ ಪ್ರಿಯವಾದ ಬೆಂಗಳೂರು ವಿಶ್ವವಿದ್ಯಾಲಯದ ಭೂಗರ್ಭ ವಿಭಾಗದ ಪ್ರೊ. ನಾಗಣ್ಣನವರ ಜೊತೆಗೂ ಸಂದರ್ಶನವಿತ್ತು. ನಾಗಣ್ಣನವರೂ ಬಿ.ಟಿ. ಸೋಮಣ್ಣನವರಿಗೆ ತುಂಬ ಆಪ್ತರಾಗಿದ್ದರು.

ಸಂದರ್ಶನ ಚೆನ್ನಾಗಿ ಬಂತು. ಸೋಮಣ್ಣನವರು ಹಾಗೂ ಪ್ರೊ. ನಾಗಣ್ಣನವರು ಖುಷಿಯಾಗಿದ್ದರು. ನನ್ನನ್ನು ಸಾಹಿತ್ಯ ಅಕಾಡೆಮಿಯ ಕಛೇರಿಯ ಬಳಿ ಸರಿಯಾದ

ಸಮಯಕ್ಕೆ ತಂದು ಬಿಟ್ಟರು. "ನೀನು ವಾಪಸ್ಸು ಬಂದ ತಕ್ಷಣ ಭೇಟಿಯಾಗಬೇಕು" ಎಂದು ಬೀಳ್ಕೊಟ್ಟರು. ಆಳ್ವೆಯ ಕಾರ್ಯಕ್ರಮ ಮುಗಿಸಿ ಬೆಂಗಳೂರಿಗೆ ಬಂದ ತಕ್ಷಣ ಸೋಮಣ್ಣನವರನ್ನು ಸಂಪರ್ಕಿಸಿ ಒಟ್ಟು ಕಾರ್ಯಕ್ರಮದ ಬಗ್ಗೆ ವರದಿ ಒಪ್ಪಿಸಿದೆ. ಭಾರತದ ಬಹುಮುಖ್ಯ ಲೇಖಕರೆಲ್ಲ ಸೇರಿದ್ದರು. ಇದರ ಜೊತೆಗೆ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದು ಇಂದು ನಮ್ಮಡನೆ ಇರುವ ಮಹಾನ್ ಲೇಖಕರೆಲ್ಲ ಸೇರಿದ್ದರು. ಅದರ ಸಮಾರೋಪವನ್ನು ನಮ್ಮ ಶಿವರಾಮ ಕಾರಂತರು ನಡೆಸಿಕೊಟ್ಟರು ಎಂದೆ. ಇಂದು ಫ್ರೀ ಇದ್ದರೆ ಮನೆಗೆ ಬಾ" ಎಂದರು. ಸಂಜೆ ಆರೂವರೆಗೆ ಶಾಂತಿನಗರದ ಅವರ ಮನೆಗೆ ಹೋದೆ. ಮಗನನ್ನು ಹಾಗೂ ಸೊಸೆಯನ್ನು ಪರಿಚಯ ಮಾಡಿಕೊಟ್ಟರು. ಸೊಸೆ ನಗರ ಪಾಲಿಕೆ ಸದಸ್ಯರಾಗಿದ್ದರು. ಶ್ರೀಮತಿ ಸೋಮಣ್ಣನವರು ಊರಿಗೆ ಹೋಗಿದ್ದರು. ಮತ್ತೆ ಹುಲಿಯ ರೀತಿಯಲ್ಲಿದ್ದ ನಾಯಿಯ ಮೈದಡವುತ್ತ ಅದರ ಅಭಿಮಾನದ ಸಾಹಸ ಗಾಥೆಯನ್ನು ಕುರಿತು ಒಂದಷ್ಟು ಹೇಳಿದರು. "ಬನ್ನಿ ಒಂದೆರಡು ಗಂಟೆ ಹೊರಗೆ ಹೋಗಿ ಬರೋಣ" ಎಂದು ಡ್ರೈವರನ್ನು ಕರೆದು ಕಾರಿನಲ್ಲಿ ಕೂತುಕೊಂಡೆವು. "ಬೆಂಗಳೂರು ಕ್ಲಬ್‌ಗೆ ಹೋಗೋಣವೋ ಅಥವಾ ಕ್ಯಾಥೊಲಿಕ್ ಕ್ಲಬ್ ಗೆ ಹೋಗೋಣವೋ?" ಎಂದು ಕೇಳಿದಾಗ ನಾನು ಬೆಂಗಳೂರು ಕ್ಲಬ್ ಎಂದು ಹೇಳಿದ್ದೆ. ಆದರೆ ಒಂದು ಬಾರಿ ಕ್ಯಾಥೊಲಿಕ್ ಕ್ಲಬ್ ನೋಡಿ ಬನ್ನಿ ಎಂದು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ತುಂಬ ಹಳೆಯ ಕ್ಲಬ್, ಆಂಗ್ಲೋ ಇಂಡಿಯನ್ಸ್ ವ್ಯವಹರಿಸುತ್ತಿದ್ದ ಜಾಗ. ಒಂದು ದೃಷ್ಟಿಯಿಂದ ನನಗೆ ತುಂಬ ಇಷ್ಟವಾಯಿತು. ಪ್ರಾರಂಭದಲ್ಲಿಯೇ ತಿಳಿಸಿದಂತೆ ಬಿ.ಟಿ.ಸೋಮಣ್ಣನವರು ಎರಡು ಪೆಗ್ ಪೀಟರ್ ಸ್ಕಾಚ್ ಮತ್ತು ಬಿಯರ್ ಹೇಳಿದರು. ನಾನು ಬಿಯರ್ ತೆಗೆದುಕೊಂಡೆ. ಮಾತು ಎಲ್ಲೆಲ್ಲಿಗೋ ಸಾಗಿತ್ತು. ನನ್ನ ಕುಟುಂಬದ ಬಗ್ಗೆ ಮಾಹಿತಿ ಪಡೆದರು. ಮೊದಲೇ ಯಾಕೆ ಪರಿಚಯವಾಗಲಿಲ್ಲ ಎಂದು ಕೇಳುತ್ತಲೇ ತಾವು ನಗರಾಭಿವೃದ್ಧಿ ಅಧ್ಯಕ್ಷರಾಗಿದ್ದಾಗ ನಿವೇಶನಗಳನ್ನು ಹಂಚುವಾಗ ಒಂದೇ ಜಾತಿಯವರಿಗೆ ಹಾಗೂ ಮತದವರಿಗೆ ಒಂದೇ ಕಡೆ ಬರದಂತೆ ನೋಡಿಕೊಂಡರಂತೆ. ಇದಕ್ಕೆ ಬುದ್ಧಿಯವರ (ಅರಸುರವರ) ರಾಜಕೀಯ ಹಾಗೂ ಸಾಮಾಜಿಕ ಮನಸ್ಸು ಸಾಕಷ್ಟು ಕೆಲಸ ಮಾಡಿದೆ. ಇದನ್ನು ಹೇಳಿದಾಗ ಒಂದು ದೃಷ್ಟಿಯಿಂದ ಪುಳಕಿತನಾದೆ. ಇದರ ನಡುವೆ ಎಂತೆಂಥವರ ಗೋಶಾಲೆಗಳಿಗೆ, ವಿವಿಧ ಧರ್ಮ ಸಂಸ್ಥೆಗಳಿಗೆ ನಿವೇಶನಗಳನ್ನು ಕೊಟ್ಟಿದ್ದಾರೆ. ಇಂದು ಅವರು ಏನೇನೋ ಆಗಿದ್ದಾರೆ ಎಂದು ಒಂದು ದೊಡ್ಡ ಪಟ್ಟಿಯನ್ನೇ ಕೊಟ್ಟರು. ತುಂಬ ಮಾತಿನ ಪ್ರಿಯರು, ಸಿಗರೇಟಿನ ಹೊಗೆಯನ್ನು ಬಿಡುತ್ತ ವಿಸ್ಕಿ ಮತ್ತು ಬಿಯರ್ ಚಪ್ಪರಿಸುತ್ತ ಅಷ್ಟೇ ಅಂತರ್ಮುಖಿಯಾಗಿ ಬಿಡುತ್ತಿದ್ದರು. ಇದ್ದಕ್ಕಿದ್ದಂತೆ ಹತ್ತು ನಿಮಿಷ ಮಾತಾಡುತ್ತಲೇ ಇರಲಿಲ್ಲ. ಕನ್ನಡಕ ತೆಗೆದು ಕಣ್ಣೊರೆಸಿಕೊಳ್ಳುತ್ತಿದ್ದರು. ಕೊನೆಗೆ ಕ್ಷಮಿಸಿ, ಶ್ರೀನಿವಾಸ್ ಎಂದು ಹೊರಡುವಾಗ ಒತ್ತಾಯ ಮಾಡಿ ಪಾರ್ಸಲ್‌ಗೆ ಆಜ್ಞೆ ಮಾಡುತ್ತಿದ್ದರು.

ಅಪ್ಪಟ ಶ್ವೇತಧಾರಿಯಾದ ಸೋಮಣ್ಣನವರನ್ನು ಸುಮಾರು ಎರಡು ಮೂರು ವರ್ಷ ವಾರಕ್ಕೆರಡು ಬಾರಿ ಭೇಟಿಯಾಗುತ್ತಿದ್ದೆ. ಭೇಟಿಯಾದಾಗಲೆಲ್ಲ ನಿಮ್ಮ ಮೇಸ್ಟ್ರು ಹೇಗಿದ್ದಾರೆ ಎಂದು ಲಂಕೇಶ್‌ರವರನ್ನು ಕೇಳುತ್ತಿದ್ದರು. ಲಂಕೇಶ್‌ರವರ ದೈನಂದಿನ ಬದುಕಿನ ಬಗ್ಗೆ

ಕೇಳುತ್ತಿದ್ದರು. ಲಂಕೇಶ್ ಪತ್ರಿಕೆಯನ್ನು ಅತ್ಯಂತ ಅಭಿಮಾನದಿಂದ ಓದುತ್ತಿದ್ದವರು. ಅವರ ಮನೆಯಲ್ಲಿ ಬೇರೆ ಪತ್ರಿಕೆಗಳ ಜೊತೆಗೆ ಲಂಕೇಶ್ ಪತ್ರಿಕೆ ಎದ್ದು ಕಾಣುವ ರೀತಿಯಲ್ಲಿ ಟೀಪಾಯಿಯ ಮೇಲೆ ಇಡುತ್ತಿದ್ದರು. ಅವರ ಮಾತು ಮತ್ತು ನಡವಳಿಕೆಯ ಸ್ವರೂಪದ ಬೆನ್ನತ್ತಿ ಹೋದಾಗಲೆಲ್ಲ ತುಂಬ ದಿಟ್ಟತನದ ನೇರ ನಡೆನುಡಿಯ ವ್ಯಕ್ತಿ ಎಂಬುದು ಎಂಥವರಿಗೂ ಗೋಚರಿಸಿಬಿಡುತ್ತಿತ್ತು. ಅರಸುರವರ ರೀತಿಯಲ್ಲಿ ಟಿಪಿಕಲ್ ಪಂಚಾಯಿತಿ ಕಟ್ಟೆಯ ಯಜಮಾನರ ನಡೆನುಡಿಯ ಪಕ್ವಗೊಂಡ ವ್ಯಕ್ತಿತ್ವ. ಒಮ್ಮೆ ಇದ್ದಕ್ಕಿದ್ದಂತೆ ತುಂಬ ಭಾವುಕರಾದರು. “ಶ್ರೀನಿವಾಸ್, ಒಂದು ಪುಟ್ಟ ಸಹಾಯ ಮಾಡಪ್ಪ, ನೀನು ಮನಸ್ಸು ಮಾಡಿದರೆ ಆಗುತ್ತದೆ. ಸಾಧ್ಯವಾದರೆ ನಿಮ್ಮ ಮೇಸ್ತ್ರ ಸಹಾಯ ಪಡೆ. ಆದರೆ ಏನಾದರೂ ಮಾಡಿ ನನ್ನ ಮಗನನ್ನು ವಾಪಸ್ಸು ತಂದುಕೊಡು. ಅವನು ಡಾಕ್ಟರ್, ಮದುವೆಗೆ ಸಂಬಂಧಿಸಿದಂತೆ ಏನೇನೋ ಆಯಿತು. ಹೆಂಡತಿಯನ್ನು ತುಂಬ ಇಷ್ಟಪಡುತ್ತಿದ್ದ. ಆಕೆ ಬಿಟ್ಟು ವಿದೇಶಕ್ಕೆ ಹೋದಳು. ಇವನು ಇಲ್ಲಿ ನರಳುತ್ತ ಬದುಕುತ್ತಿದ್ದಾನೆ. ಮನೆಗೆ ಬರುವುದಿಲ್ಲ. ನನಗಿಂತ ಹೆಚ್ಚಾಗಿ ಅವನ ಅಮ್ಮ ದಿನಾ ಒದ್ದಾಡುವುದನ್ನು ಕಂಡರೆ ನೋಡುವುದಕ್ಕೆ ಆಗುವುದಿಲ್ಲ” ಎಂದರು. “ಸರ್, ದಯವಿಟ್ಟು ಆತನ ವಿಳಾಸ ಕೊಡಿ. ಸಾಧ್ಯವಾದರೆ ಭೇಟಿಯಾಗಿ ಮಾತಾಡುವೆ. ಲಂಕೇಶ್‌ರವರ ಬಳಿ ಕರೆದುಕೊಂಡು ಹೋಗಿ ಮಾತಾಡಿಸುವೆ” ಎಂದೆ. “ನಾನು ತಿಳಿಸ್ತೀನಿ ಮತ್ತು ವಿಳಾಸ ಕೊಡ್ತೀನಿ ಹೋಗಿ ಬರುವಿಯಂತೆ” ಎಂದು ಹೇಳುತ್ತಿದ್ದರು. ಈ ರೀತಿಯ ಭಾವುಕ ಸಂಬಂಧಗಳು ಮುಂದುವರೆದವು. ಆದರೆ ಆತನ ವಿಳಾಸ ಕೊಡಲೇ ಇಲ್ಲ. ಮುಂದೂಡುತ್ತಲೇ ಬಂದರು. ಬೇರೆ ಬೇರೆ ಸಮಯಗಳಲ್ಲಿ ಮನೆಗೆ ಹೋಗಿ ಮಾತುಕತೆ ನಡೆಸಿದೆ. ಆಗ ಹೆಚ್ಚು ಸಮಯ ಮೌನಿಯಾಗಿ ಬಿಡುತ್ತಿದ್ದರು. ಕೊನೆಗೆ “ಇರಲಿ ಬಿಡಪ್ಪ” ಎಂದು ಕೇಸರಿಬಾತ್ ಮತ್ತು ಉಪ್ಪಿಟ್ಟು ಕೊಡುತ್ತಿದ್ದರು. ಚೆನ್ನಾಗಿರುತ್ತಿತ್ತು. ಕಾಫಿಯೂ ಅಷ್ಟೆ. “ಲಂಕೇಶ್‌ರವರಿಗೂ ಚೌಚೌ ಬಾತ್ ತುಂಬ ಇಷ್ಟ. ಹಾಗೆಯೇ ಹೋಳಿಗೆ ಮತ್ತು ತುಪ್ಪ” ಎಂದಿದ್ದಕ್ಕೆ “ನನಗೂ ಅವೆಲ್ಲ ತುಂಬ ಇಷ್ಟ. ಆದರೆ ಈ ಹಾಳಾದ್ದು ಸಕ್ಕರೆ ರೋಗ ಇದೆಯಲ್ಲ. ಮನುಷ್ಯನ ಆಸೆಗಳನ್ನೆಲ್ಲ ತಿಂದಾಕಿ ಬಿಡ್ತದೆ” ಎನ್ನುತ್ತಿದ್ದರು. “ಇರಲಿ ಬಿಡು, ಈ ಮನುಷ್ಯ ಹೊಟ್ಟೆಬಾಕ, ಅಂಥ ನಿಯಂತ್ರಣಗಳಿಲ್ಲದಿದ್ದರೆ ಇನ್ನೂ ತಿನ್ತಾನೆ ಕಂಡವರ ಆಸ್ತಿಗೆ ಕಣ್ಣು ಹಾಕ್ತಿದ್ದ” ಎಂದಾಗ ನಕ್ಕು ಸುಮ್ಮನಾಗ್ತಿದ್ದೆ.

ಕೊನೆಗೂ ಅವರ ಮಗನನ್ನು ಕುರಿತು ಪೂರ್ಣಮಾಹಿತಿ ಮತ್ತು ವಿಳಾಸ ದೊರಕಲೇ ಇಲ್ಲ. ‘ಶೂದ್ರ’ಕ್ಕೆ ಇಪ್ಪತ್ತೈದು ಆದಾಗ ಒಂದು ವಿಶೇಷಾಂಕ ತಂದೆ. ಬಿಡುಗಡೆಯ ಸಂದರ್ಭದಲ್ಲಿ ಆರೇಳು ಮಂದಿಯನ್ನು ಗೌರವಿಸಬೇಕು ಅನ್ನಿಸಿತು. ಗೆಳೆಯರೂ ಇದಕ್ಕೆ ಬೆಂಬಲ ಕೊಟ್ಟರು. ನನ್ನ ಇಂಜಿನಿಯರಿಂಗ್ ಗೆಳೆಯರ ಸಲಹೆಯ ಮೇರೆಗೆ ಬಿ.ಟಿ.ಸೋಮಣ್ಣನವರಿಗೂ ಗೌರವ ಸಮರ್ಪಿಸುವುದು ಎಂದು ಯೋಚಿಸಿದೆ. ಭೇಟಿಯಾಗಿ ಮಾತಾಡಿದೆ. “ಯಾರ್‍ಯಾರಿಗೆ ಕೊಡ್ತಿದ್ದೀರಿ ಶ್ರೀನಿವಾಸ್?” ಎಂದರು. “ಬಿ.ವಿ. ಕಾರಂತ್, ಎಸ್.ಜಿ. ಮೈಸೂರು ಮಠ್, ಅ.ನ. ಯಲ್ಲಪ್ಪ ರೆಡ್ಡಿ, ವಿ. ಚಿಕ್ಕವೀರಯ್ಯ, ಪ್ರಗತಿ ಪರ

ರೈತರಾದ ನಂಜಪ್ಪ ರೆಡ್ಡಿ, ಪ್ರಸಿದ್ಧ ವೈದ್ಯ ಡಾ॥ ಮಹದೇವಪ್ಪ ಹಾಗೂ ಸುಮಂಗಲಿ ಸೇವಾಶ್ರಮದ ಸುಶೀಲಮ್ಮನವರಿಗೆ" ಎಂದೆ. "ಅವರೆಲ್ಲ ಸಾರ್ಥಕ ಕೆಲಸ ಮಾಡಿದವರು, ನನಗೆ ಬೇಡಪ್ಪ. ನನ್ನ ಕಾಲ ಮುಗಿಯುತ್ತ ಬರುತ್ತಿದೆ. ಯಾರಾದರೂ ಕಿರಿಯ ವಯಸ್ಸಿನ ಇಂಜಿನಿಯರ್ ಉತ್ತಮ ಕೆಲಸ ಮಾಡುತ್ತಿದ್ದರೆ ಅವರಿಗೆ ಕೊಡಿ. ಅವರು ಮುಂದೆ ಮತ್ತಷ್ಟು ಕ್ರಿಯಾಶೀಲರಾಗಿ ಕೆಲಸ ಮಾಡಲು ಅನುಕೂಲವಾಗ್ತದೆ" ಎಂದು ನಿರ್ದಾಕ್ಷಿಣ್ಯವಾಗಿ ತಮ್ಮ ಹೆಸರು ಬೇಡ ಎಂದರು. ಅವರ ಮನುಸ್ಸು ಅರಿತಿದ್ದರಿಂದ ಹೆಚ್ಚು ಒತ್ತಾಯ ಮಾಡಲು ಹೋಗಲಿಲ್ಲ. ಕಾರ್ಯಕ್ರಮ ಮುಗಿದ ಮೇಲೆ ಶೂದ್ರ ವಿಶೇಷಾಂಕ ತೆಗೆದುಕೊಂಡು ಹೋಗಿ ಕೊಟ್ಟೆ. ಐದು ಪ್ರತಿ ಕೇಳಿ ತೆಗೆದುಕೊಂಡರು. ಬೇಡವೆಂದರೂ ಅವುಗಳ ಬೆಲೆ ಕೊಟ್ಟರು. ನನ್ನ ಜೊತೆಯಲ್ಲಿದ್ದ ಗೆಳೆಯರನ್ನು ಪರಿಚಯ ಮಾಡಿಕೊಟ್ಟೆ. ಅವರೆಲ್ಲರೂ ಸೋಮಣ್ಣನವರನ್ನು ನೋಡಬೇಕೆಂದು ಆಸೆ ಪಡುತ್ತಿದ್ದವರು. ನಮಸ್ಕರಿಸಿ ಹೊರಟೆವು.

ಈ ಮಧ್ಯೆ ಅವರ ಅನಾರೋಗ್ಯದ ಕಾರಣಕ್ಕಾಗಿ ಕ್ಯಾಥೊಲಿಕ್ ಕ್ಲಬ್ ಕಡೆ ಹೋಗಲಾಗಲಿಲ್ಲ. ಒಂದು ಸುಂದರವಾದ ದಿನ ಅವರ ನಿಧನದ ಸುದ್ದಿ ಮುಟ್ಟಿತು. ಹೋಗಿ ದರ್ಶನ ಪಡೆದೆ. ಪಾದಗಳಿಗೆ ನಮಸ್ಕರಿಸಿದೆ. ಸುತ್ತಲೂ ದೃಷ್ಟಿ ಹಾಯಿಸಿದೆ. ಸೋಮಣ್ಣನವರು ಪರಿತಪಿಸುತ್ತಿದ್ದ ಮಗನ ಚಹರೆಯನ್ನು ಯಾರ್‍ಯಾರ ಮುಖದಲ್ಲೋ ಹುಡುಕಲು ಪ್ರಯತ್ನಿಸಿದೆ. ಅದು ಗೋಚರಿಸಲಿಲ್ಲ. ಈಗ ಬಿ.ಡಿ.ಎ., ಬೆಂಗಳೂರು ಆಧುನಿಕ ಕೊಳಗೇರಿಯಾಗುತ್ತಿರುವ ವಿಷಯ ಸುದ್ದಿಯಾದಾಗಲೆಲ್ಲ ಸೋಮಣ್ಣನವರು ನೆನಪಿಗೆ ಬರುತ್ತಾರೆ.

೧೨-೧೨-೦೭

The Sun is behind me.
Nothing has changed since I began.
My eye has permitted no change.
I am going to keep things like this.

- Ted Hughes

ಬೆಂಗಳೂರು ದಿನಚರಿಯಿಂದ

ನಗರ ಸ್ಪಂದನ

– ಶೂದ್ರ ಶ್ರೀನಿವಾಸ್

ಜನಕ್ ತೆಹಲಾನ್

ಈಕೆಗೆ ಅರವತ್ತೈದು ವರ್ಷವಾಗಿರಬಹುದು. ಗಂಡ ತೆಹಲಾನ್‌ಗೆ ಇನ್ನೊಂದೆರಡು ವರ್ಷ ಜಾಸ್ತಿಯಿರಬಹುದು. ಇಬ್ಬರೂ ಪಂಜಾಬಿನವರು. ಅಲ್ಲಿ ಕಾಲೇಜಿನ ಅಧ್ಯಾಪಕರಾಗಿ ನಿವೃತ್ತರಾದವರು. ಇತ್ತೀಚೆಗೆ ಭಾರತ ವಿಕಾಸ್ ಪರಿಷತ್ತು ವ್ಯವಸ್ಥೆ ಮಾಡಿದ್ದ ಅಂಡಮಾನ್ ಪ್ರವಾಸಕ್ಕೆ ಇದ್ದಕ್ಕಿದ್ದಂತೆ ಗಂಟುಮೂಟೆ ಕಟ್ಟಿಕೊಂಡು ಹೊರಟಿದ್ದೆ. ಆ ಪ್ರಯಾಣದಲ್ಲಿ ಬೆಂಗಳೂರಿನಿಂದಲೇ ಪರಿಚಯವಾದವರು ಈ ಜನಕ್ ತೆಹಲಾನ್ ಕುಟುಂಬದವರು. ಆದರೆ ಇವರನ್ನು ಅಷ್ಟೊಂದು ಗಂಭೀರವಾಗಿ ಗಮನಿಸಿರಲಿಲ್ಲ. ಎದುರು ಸಿಕ್ಕಿದಾಗ ಮುದ್ದಾಗಿ ನಕ್ಕು ಮುಂದೆ ಸಾಗುತ್ತಿದ್ದರು. ಹಡಗು ಪ್ರಯಾಣದ ಸಮಯದಲ್ಲಿ ಹಡಗಿನ ನಾಲ್ಕನೇ ಅಂತಸ್ತಿನಲ್ಲಿ ನಾನು ವಾಕ್ ಮಾಡುತ್ತಿದ್ದರೆ, ಅಥವಾ ಸುಮ್ಮನೆ ಸಮುದ್ರವನ್ನು ನೋಡುತ್ತ ಹಳೆಯ ಹಿಂದಿ ಚಲನಚಿತ್ರಗೀತೆಗಳನ್ನು ಆಲಿಸುತ್ತ ಕೂರುತ್ತಿದ್ದರೆ ಗಂಡ ಹೆಂಡತಿ ಎದುರಿಗೆ ಸಿಕ್ಕಿದವರನ್ನು ಪರಿಚಯ ಮಾಡಿಕೊಳ್ಳುತ್ತಿದ್ದರು. ಮಾತಿಗೆಳೆಯುತ್ತಿದ್ದರು. ಆದರೆ ಈಕೆಯ ನಿಜವಾದ ವ್ಯಕ್ತಿತ್ವ ಪರಿಚಯವಾಗಿದ್ದು ಪೋರ್ಟ್‌ಬ್ಲೇರ್‌ನಿಂದ ವಾಪಸ್ಸು ಬರುವಾಗ ಡೆಕ್ಕನ್ ಏರ್‌ವೇಸ್‌ನ ವಿಮಾನದಲ್ಲಿ. ನಂತರ ಚೆನ್ನೈನ ರೈಲ್ವೇ ನಿಲ್ದಾಣದಲ್ಲಿ. ಕೇವಲ ಕೆಲವೇ ಕ್ಷಣಗಳಲ್ಲಿ ಎಷ್ಟೊಂದು ಮಂದಿಯನ್ನು ಪರಿಚಯ ಮಾಡಿಕೊಳ್ಳುತ್ತಿದ್ದರು.

ಅಂಡಮಾನ್ ನಿಂದ ವಾಪಸ್ಸು ಬಂದು ಅಲ್ಲಿಯ ದ್ವೀಪಗಳನ್ನು, ಸೆಲ್ಯುಲಾರ್ ಸೆರಮನೆಯನ್ನು, ಕಪ್ಪುನೀರಿನ ಸಮುದ್ರವನ್ನು ಗುಡ್ಡಗಾಡು ಜನರನ್ನು, ಸಮುದ್ರದ ಆಳದಲ್ಲಿರುವ ಕೋರಲ್‌ಗಳನ್ನು ಮನಸ್ಸಿನಲ್ಲಿ ತುಂಬಿಕೊಂಡಿದ್ದೆ. ಕುಂತರೆ ನಿಂತರೆ ಅವುಗಳ ಧ್ಯಾನದಿಂದ ಬಿಡುಗಡೆಯಾಗಿರಲಿಲ್ಲ. ಇಂಥ ಧ್ಯಾನದಲ್ಲಿಯೇ ಬೆಂಗಳೂರಿನ ಜೆ.ಪಿ.ನಗರದ 2ನೇ ಬಡಾವಣೆಯ ಪಾರ್ಕ್‌ನಲ್ಲಿ ಬೆಳಿಗ್ಗೆ ವಾಕ್ ಮಾಡುವಾಗ ಕಾಂಕ್ರೀಟ್ ಬೆಂಚಿನ ಮೇಲೆ ಜನಕ್ ತೆಹಲಾನ್ ಕಾಣಿಸಿಕೊಂಡರು. ಬುರ್ಕಾದಲ್ಲಿದ್ದ ಮುಸ್ಲಿಂ ಮಹಿಳೆಗೆ ಕಾಲು ಚಾಚಿಸಿ ಏನೋ ಹೇಳುತ್ತಿದ್ದರು. ನಾನು ವಾಕ್ ಮುಗಿಸಿ ಜನಕ್ ತೆಹಲಾನ್ ಅವರಿಗೆ ನಮಸ್ಕರಿಸಿದೆ. ಅವರು ಎದ್ದು ನಿಂತು ಅಭಿಮಾನದಿಂದ ನನ್ನ ಎರಡು ಕೈಹಿಡಿದು

ಬೆಂಗಳೂರು ದಿನಚರಿಯ ಬರಹಕ್ಕೆ 'ನಗರಸ್ಪಂದನ' ಎಂಬ ಹೆಸರನ್ನು ಕೊಡುತ್ತಿರುವೆ. ಯಾಕೆಂದರೆ 'ನಗರಸ್ಪಂದನ' ನನಗೆ ತುಂಬ ಪ್ರಿಯವಾದ ಅಂಕಣ. ಲಂಕೇಶ್ ಪತ್ರಿಕೆಯಲ್ಲಿ ಈ ಶೀರ್ಷಿಕೆಯಲ್ಲಿ ಮೂರು ನಾಲ್ಕು ವರ್ಷ ಪ್ರತಿ ವಾರ ಬರೆದೆ. ಲಂಕೇಶ್‌ರವರು ಕೊಟ್ಟ ಶೀರ್ಷಿಕೆ. ಇದರ ಅಡಿಯಲ್ಲಿ ಹುಚ್ಚುಚ್ಚಾಗಿ ಏನೇನೋ ಬರೆದೆ. ಅವರು ಎಂದೂ ಎಡಿಟ್ ಮಾಡಲಿಲ್ಲ. ಅವರ ಬಗ್ಗೆ ತಮಾಷೆ ಮಾಡಿ ಬರೆದಿದ್ದನ್ನು ಪ್ರಕಟಿಸಿದ್ದರು.

– ಶೂದ್ರಶ್ರೀ

"ನಿಮ್ಮನ್ನು ನೋಡಿ ತುಂಬ ಖುಷಿಯಾಯಿತು" ಎಂದು ದೂರದಲ್ಲಿ ಇನ್ನೊಂದು ಬೆಂಚಿನ ಮೇಲೆ ಕೂತಿದ್ದ ಗಂಡನನ್ನು ಕರೆದು ನನ್ನನ್ನು ತೋರಿಸಿದರು. ಮತ್ತೆ ಅಲ್ಲಿಯೇ ಕಲ್ಲುಬೆಂಚಿನ ಮೇಲೆ ಕೂರಿಸಿಕೊಂಡು ಇಡೀ ನನ್ನ ಕುಟುಂಬದ ಬಗ್ಗೆ ಶಾಲೆಯ ಬಗ್ಗೆ ಕೇಳಿದರು. ಒಮ್ಮೆ ನಿಮ್ಮ ಮನೆಗೆ ಬರಬೇಕು ಎಂದು ಚೆನ್ನೈನಲ್ಲಿನ ರೈಲು ನಿಲ್ದಾಣದಲ್ಲಿ ನನ್ನ ವಿಳಾಸವನ್ನು ತೆಗೆದುಕೊಂಡಿದ್ದರು. ಅದು ಸರಿ ಇದೆಯಾ ಎಂದು ತೋರಿಸಿದರು. ಪಾರ್ಕ್‌ನ ಸಮೀಪದಲ್ಲಿಯೇ ಇದ್ದ ಮಗನ ಮನೆಗೆ ಕರೆದರು. ನಿಮ್ಮ ಶಾಲೆಗೆ ಒಮ್ಮೆ ಕರೆದುಕೊಂಡು ಹೋಗಿ. ಅಲ್ಲಿಯ ಉಪಾಧ್ಯಾಯರಿಗೆ ಯೋಗದ ಬಗ್ಗೆ ಮುಖ್ಯವಾಗಿ ಪ್ರಾಣಾಯಾಮ ಕುರಿತು ಹೇಳಬೇಕಾಗಿದೆ ಎಂದರು. ನಾನು ಆಗಲಿ ಎಂದು ಅವರನ್ನು ಬೀಳ್ಕೊಟ್ಟು ಮತ್ತೆರಡು ಸುತ್ತು ವಾಕ್ ಮಾಡಬೇಕಾಗಿತ್ತು, ಹೊರಟೆ. ಒಂದು ಸುತ್ತು ಬಂದು ಜನಕ್ ತೆಹಲಾನ್ ಕೂತಿದ್ದ ಜಾಗದಲ್ಲಿ ಆ ಬುರ್ಕಾದಲ್ಲಿದ್ದ ಮಹಿಳೆ ಜನಕ್ ತೆಹಲಾನ್ ಹೇಳಿದ ರೀತಿಯಲ್ಲಿ ತಮ್ಮೆರಡು ಪಾದಗಳಿಗೆ ವ್ಯಾಯಾಮ ಕೊಡುತ್ತಿದ್ದರು. ನಾನು ಆಕೆಯ ಬಳಿ ನಿಂತು "ದಯವಿಟ್ಟು ಕ್ಷಮಿಸಿ, ಆ ಮಹಿಳೆ ಜನಕ್ ತೆಹಲಾನ್ ಎಷ್ಟು ದಿನದಿಂದ ಗೊತ್ತು?" ಆಕೆ "ಅವರು ಪರಿಚಯವಾಗಿದ್ದು ಈ ಮುಕ್ಕಾಲು ಗಂಟೆಯ ಹಿಂದೆ. ಇದ್ದಕ್ಕಿದ್ದಂತೆ ಪರಿಚಯ ಮಾಡಿಕೊಂಡರು. ನನ್ನ ಆರೋಗ್ಯ ಕುರಿತು ವಿಚಾರಿಸಿದರು. ತೂಕ ಕಡಿಮೆ ಮಾಡಿ. ಹಾಗೆಯೇ ಪಾದಗಳಿಗೆ ಈ ರೀತಿಯ ವ್ಯಾಯಾಮ ಕೊಡಿ ಎಂದಿದ್ದಕ್ಕೆ ಮಾಡುತ್ತಿದ್ದೇನೆ" ಎಂದರು. ನಾನು ನಮಸ್ಕರಿಸಿ ಅಲ್ಲಿಂದ ಮುಂದೆ ಹೋದೆ.

ಈ ರೀತಿ ಜನಕ್ ತೆಹಲಾನ್ ರವರನ್ನು ದಿನಾ ಬೆಳಿಗ್ಗೆ ನೋಡುತ್ತೇನೆ. ಯಾರನ್ನಾದರೂ ಪರಿಚಯ ಮಾಡಿಕೊಂಡು ಅವರಿಗೆ ಯೋಗದ ಮತ್ತು ಪ್ರಾಣಾಯಾಮ ಕುರಿತು ಆತ್ಮೀಯವಾಗಿ ಮಾತಾಡುತ್ತಿರುತ್ತಾರೆ. ನಂತರ ತಾವೇ ಒಂದು ಮೂಲೆಯಲ್ಲಿ ಕುಳಿತು ಯೋಗದ ಕೆಲವು ಆಸನಗಳನ್ನು ಅಭ್ಯಾಸ ಮಾಡತೊಡಗುತ್ತಾರೆ. ಮತ್ತೆ ಮೊನ್ನೆ ಇದ್ದಕ್ಕಿದ್ದಂತೆ ಸಿಕ್ಕಿದರು. ನಾನು ಪ್ರಾಣಾಯಾಮ ಕಲಿಯಬೇಕು ಎಂದು ಒತ್ತಾಯ ಮಾಡಿದರು. "ನಾನು ಬೆಂಗಳೂರಿನಲ್ಲಿ ಇರುವಾಗಲೆಲ್ಲ ಉಚಿತವಾಗಿ ಕೆಲವು ಮಂದಿಗಾದರೂ ಇಲ್ಲಿ ಪ್ರಾಣಾಯಾಮ ಕಲಿಸಬೇಕಾಗಿದೆ ಶ್ರೀನಿವಾಸ್, ನೀವು ಸಹಕರಿಸಬೇಕು, ನೀವೂ ಕಲಿಯಬೇಕು" ಎಂದರು. ಆಗ ನಾನು ಕೆಲವು ವರ್ಷಗಳಿಂದ ಭಾರತದ ಪ್ರಸಿದ್ಧ ಯೋಗ ಗುರುಗಳಾದ ಬಿ.ಕೆ.ಎಸ್. ಅಯ್ಯಂಗಾರ್ ರವರ ಅಪ್ಪಟ ಶಿಷ್ಯ ಹೊ.ಶಾ.ಅರುಣರವರ ಬಳಿ ಹೋಗುತ್ತಿರುವುದು ತಿಳಿಸಿದೆ. ನನ್ನ ಅರಿವಿನ ಮಟ್ಟಿಗೆ ಬಿ.ಕೆ.ಎಸ್. ಅಯ್ಯಂಗಾರ್‌ರವರಿಗಿಂತ ಮುಂದೆ ಹೋಗಿ ಬೇರೆ ಬೇರೆ ಅದ್ಭುತ ಆಸನಗಳನ್ನು ಹುಟ್ಟು ಹಾಕುತ್ತಿದ್ದಾರೆಂಬ ವಿಷಯವನ್ನು ತಿಳಿಸಿದೆ. ಅವರನ್ನು ಭೇಟಿಯಾಗುವ ಆಶಯವನ್ನು ವ್ಯಕ್ತಪಡಿಸಿದಾಗ ಅವರು ಚಿಲಿಗೆ ಹೋಗಿರುವ ವಿಷಯ ತಿಳಿಸಿದೆ. ನಗುತ್ತ ನಮಸ್ಕರಿಸಿ ಮುಂದೆ ಸಾಗಿದರು. ಅವರ ಬದುಕಿನ ಪ್ರೇಮದ ಬಗ್ಗೆ ಮಮಕಾರ ಉಕ್ಕಿ ಬಂತು. ಅವರ ಕುಟುಂಬ ತಲತಲಾಂತರದಿಂದ ಪಾಠ ಮಾಡುತ್ತಲೇ ಬದುಕಿ ಬಂದವರಂತೆ. ಆದರೆ ಆ ಪಾಠ ಮಾಡುವ ಕ್ರಮವನ್ನು ಆರಾಧಿಸುತ್ತ ಅದನ್ನು ಹೊತ್ತುಕೊಂಡು ಎಲ್ಲೆಂದರಲ್ಲಿ ತಿರುಗುತ್ತ ಧಾರೆಯೆರೆಯುವುದಿದೆಯಲ್ಲ ಅದು ನನ್ನ ಮನಸ್ಸಿನ ತುಂಬ ಆವರಿಸಿದೆ.

ನಮ್ಮ ನಡುವಿನ ಹೋರಾಟಗಾರರು

ಲಾರಿ ಮಾಲೀಕರ ಸಂಘದ ಕಾರ್ಯದರ್ಶಿ ವೆಂಕಟಸ್ವಾಮಿಯವರನ್ನು ಸುಮಾರು ಮುವತ್ತೈದು ವರ್ಷಗಳಿಂದ ನೋಡುತ್ತಿರುವೆ. ಅದೇ ಇಸ್ತ್ರಿಯಿಲ್ಲದ ಬಿಳಿಯ ಪೈಜಾಮ ಮತ್ತು ಜುಬ್ಬಾ. ಆ ಪೈಜಾಮವೂ ಅಷ್ಟೇ, ಪಾದಗಳಿಂದ ಎರಡು ಇಂಚು ಮೇಲಕ್ಕೆ ಇರುತ್ತದೆ. ಈತ ಪರಿಚಯವಾಗಿದ್ದು ಕೂಡ ಸಮಾಜವಾದಿ ಪಕ್ಷದಿಂದ. ಮುಖ್ಯವಾಗಿ ಎಸ್. ವೆಂಕಟರಾಂ ಅವರಿಂದ. ಸದಾ ಹೋರಾಟದ, ಪ್ರತಿಭಟನೆಯ ಗಂಟು ಮೂಟೆಯನ್ನು ಹೊತ್ತುಕೊಂಡು ತಿರುಗಿ ಬಂದ ವ್ಯಕ್ತಿ. ಏನೇನೋ ಮಾಡಿ ಕೊನೆಗೆ ಹೊಟ್ಟೆಪಾಡಿಗೆ ಒಂದು ಲಾರಿ ಇಟ್ಟುಕೊಂಡು ಅದರ ಮೂಲಕ ಚೆನ್ನಾರೆಡ್ಡಿಯಂಥ ಆತ್ಮೀಯ ಗೆಳೆಯರನ್ನು ಗಂಟು ಹಾಕಿಕೊಂಡು ಲಾರಿ ಮಾಲೀಕರ ಸಂಘಕ್ಕೆ ಹೋರಾಟದ ಚೌಕಟ್ಟನ್ನು ಕೊಟ್ಟವರು.

ಕಳೆದ ಜುಲೈ 24ರಂದು ಎಸ್. ವೆಂಕಟರಾಂ ಅವರ ಬಗ್ಗೆ ಸೊಸೆ ಅನಿತಾ ಮತ್ತು ಮಗ ಪ್ರದೀಪ್ ಸೇರಿಕೊಂಡು ಒಂದು ವೆಬ್‌ಸೈಟನ್ನು ಬಿಡುಗಡೆ ಮಾಡಿದರು. ಪ್ರದೀಪ್ ರವರು ದುಬೈಯಲ್ಲಿದ್ದು ಹೆಂಡತಿಯ ಸಹಾಯ ಪಡೆದು ಅಚ್ಚುಕಟ್ಟಾಗಿ ರೂಪಿಸಿರುವ ವೆಬ್ ಸೈಟ್. ಅದರ ಬಿಡುಗಡೆಗೆ ಹಿರಿಯ ರಾಜಕಾರಣಿಗಳಾದ ಪಿ.ಜಿ.ಆರ್. ಸಿಂಧ್ಯಾ ಮತ್ತು ಕಾಗೋಡು ತಿಮ್ಮಪ್ಪ ಬಂದಿದ್ದರು. ಅಂದು ಲಾರಿ ವೆಂಕಟಸ್ವಾಮಿಯವರನ್ನು ಅಭಿನಂದಿಸಲಾಯಿತು. ಆ ಕಾರ್ಯಕ್ರಮಕ್ಕೆ ಸದಾ ನಗುನಗುತ್ತಿದ್ದ ವೆಂಕಟಸ್ವಾಮಿಯವರ ಪತ್ನಿ ಶಾರದಾ ಅವರು ಬಂದಿದ್ದರು. ತಿಂಡಿ ತಿನ್ನುವ ಸಮಯದಲ್ಲಿ ಬಾಟಾ ಸುಬ್ಬಣ್ಣನವರ ಜೊತೆ ಮಾತಾಡಿಸಿದ್ದೆ. ಅಂದು ವೆಂಕಟಸ್ವಾಮಿಯವರ ಸಾಧನೆ ಕುರಿತು ಒಂದು ಪುಟ್ಟ ಟಿಪ್ಪಣಿ ಸಿದ್ಧಪಡಿಸಿ ಅಲ್ಲಿ ಓದಿದ್ದೆ. ಈ ಕಾರ್ಯಕ್ರಮದ ಹಿಂದಿನ ದಿವಸ "ಶೂದ್ರ, ನಿನ್ನ ಬಳಿ ಸ್ವಲ್ಪ ಮಾತಾಡಬೇಕು, ಕೋಶಿಷ್ ಅಥವಾ ಪ್ರೆಸ್ ಕ್ಲಬ್‌ನಲ್ಲಿ ಸಿಗುವೆಯಾ?" ಎಂದರು. ನಾನು ಪ್ರೆಸ್ ಕ್ಲಬ್‌ನಲ್ಲಿ ಸಿಗುವೆ ಎಂದು ಹೇಳಿ ಭೇಟಿಯಾದೆ. ವೆಂಕಟಸ್ವಾಮಿಯವರು "ನಾಳೆ ನಾನು ಐದಾರು ನಿಮಿಷ ಕಾರ್ಯಕ್ರಮದಲ್ಲಿ ಮಾತಾಡಬೇಕಾಗಿದೆ. ಇದರ ಜೊತೆಗೆ ಇನ್ನೊಂದು ಮುಖ್ಯ ವಿಷಯ: ನಮ್ಮಲ್ಲಿ ಕಾರ್ಮಿಕ ಚಳುವಳಿ ಕುರಿತು ಗಂಭೀರವಾಗಿ ದುಡಿದಿರುವ ಐದಾರು ಮಂದಿಯನ್ನು ಆರಿಸಿಕೊಂಡು ಅವರನ್ನು ಗೌರವಿಸೋಣ. ಇದರ ಬಗ್ಗೆ ನಿನ್ನ ಅಭಿಪ್ರಾಯವೇನು?" ಎಂದು ಕೇಳಿದರು. ನಾನು ನಿಜವಾಗಿಯೂ ಮಾಡಬೇಕಾದ ಕೆಲಸ ಎಂದು ಹೇಳಿ ಮುಂದಿನ ವಾರ ಎಂದಾದರೂ ಸೇರೋಣವೆಂದು ಹೇಳಿದೆ. ಅದೇ ಸಮಯಕ್ಕೆ ಗೆಳೆಯ ಮೋಹನಕುಮಾರ್ ಕೊಂಡಜ್ಜಿ ಬಂದ. ವಿಷಯ ತಿಳಿಸಿದೆವು. "ಮಾಡ್ರಯ್ಯ ಒಳ್ಳೆಯದು, ನಾನೇನು ಮಾಡಬೇಕು ಹೇಳಿ ಮಾಡ್ತೀನಿ" ಎಂದು ಎಂದಿನ ಉತ್ಸಾಹದಿಂದಲೇ ಹೇಳಿದ.

ಕಳೆದ ತಿಂಗಳು ಮೊದಲ ವಾರವಿರಬಹುದು. ವೆಂಕಟಸ್ವಾಮಿಯವರು ಬೆಳಿಗ್ಗೆ ಆರು ಗಂಟೆಗೆ ಫೋನ್ ಮಾಡಿದರು. "ಶೂದ್ರ, ನನ್ನ ಹೆಂಡತಿ ರಾತ್ರಿ ನಿಧನಳಾದಳು. ಇಂದು ಬೆಳಿಗ್ಗೆ ಹನ್ನೊಂದು ಗಂಟೆಯವರೆವಿಗೆ ಬಾಡಿ ಮನೆಯಲ್ಲಿರುತ್ತದೆ. ನಂತರ ಬಾಡಿಯನ್ನು

ಎಂ.ಎಸ್. ರಾಮಯ್ಯ ಕಾಲೇಜಿಗೆ ಅರ್ಪಿಸುತ್ತಿದ್ದೇವೆ. ನಂದನಾರೆಡ್ಡಿಗೂ ದಯವಿಟ್ಟು ತಿಳಿಸಿಬಿಡು" ಎಂದರು. ನಾನು ಒಂದು ಕ್ಷಣ ಏನೂ ಮಾತಾಡಲಾಗದೆ ಮೂಕನಾಗಿದ್ದೆ. "ಆಗಲಿ" ಎಂದು ಹೇಳಿದೆ. ಇದೇ ಸಮಯಕ್ಕೆ ಹಿರಿಯ ಸಮಾಜವಾದಿ ನಾಯಕ ಸಿ.ಜಿ.ಕೆ. ರೆಡ್ಡಿಯವರು ನೆನಪಿಗೆ ಬಂದರು. ಸಿ.ಜಿ.ಕೆ.ರೆಡ್ಡಿಯವರು ನಮಗೆಲ್ಲ ತುಂಬ ಪ್ರಿಯರಾದವರು. ಅವರ ಮನೆಯಲ್ಲಿ ಎಂತೆಂಥ ರಾಜಕೀಯ ಚರ್ಚೆಗಳು ನಡೆದಿವೆ. ಜಯಪ್ರಕಾಶ್ ನಾರಾಯಣ್, ಮಧುಲಿಮಯೆ, ಅಶೋಕ್ ಮೆಹ್ತಾ, ರಾಮ ಮನೋಹರ ಲೋಹಿಯಾ, ಸುರೇಂದ್ರ ಮೋಹನ್ ಮುಂತಾದವರೆಲ್ಲ ಅಲ್ಲಿ ಚರ್ಚೆ ನಡೆಸಿದ್ದಾರೆ. ಆಗೆಲ್ಲ ನಮಗೆಲ್ಲ ಇದ್ದಕ್ಕಿದ್ದಂತೆ, ಬುಲಾವ್ ಬಂದು ಬಿಡುತ್ತಿತ್ತು. ಇಂಥ ಸಿ.ಜಿ.ಕೆ.ಯವರ ದೇಹವನ್ನು ಸರಿಯಾಗಿ ಡೈಯಾಗನೈಸ್ ಮಾಡದೆ ಆಪರೇಷನ್ ಆಗಿನ ಮದ್ರಾಸ್ ನಲ್ಲಿ ಮಾಡುವಾಗ ಹೃದಯಾಘಾತಕ್ಕೊಳಗಾಗಿದ್ದರು. ಅವರ ದೇಹ ಬೆಂಗಳೂರಿಗೆ ಬಂದಾಗ ಗೆಳೆಯ ರಮೇಶ್ ಬಂದಗದ್ದೆಯವರಂತೂ ವಿಲವಿಲನೆ ಒದ್ದಾಡಿದ್ದರು. ಸಿ.ಜಿ.ಕೆ.ಯವರ ಮೃತ್ಯುಪತ್ರ (ಉಯಿಲು)ಕ್ಕೆ ಅನುಗುಣವಾಗಿ ಕಣ್ಣನ್ನು ದಾನ ಮಾಡಿದ್ದರು. ಅದರ ಪ್ರಕಾರ ದೇಹ ಬಂದ ತಕ್ಷಣ ಸಂಬಂಧಪಟ್ಟ ವೈದ್ಯರು ಬಂದು ಕಣ್ಣು ಪಡೆಯುವಾಗ ರಮೇಶ್ ಬಂದಗದ್ದೆ, ವೆಂಕಟಸ್ವಾಮಿ ಮತ್ತು ನಾನು ಸಿ.ಜಿ.ಕೆ.ಯವರ ಪತ್ನಿ ವಿಮಲಕ್ಕ ಅವರ ಮುಂದೆ ಕೂತಿದ್ದೆವು. ಒಂದು ದೃಷ್ಟಿಯಿಂದ ನಾನಾ ರೀತಿಯ ಚರ್ಚೆಗಳಿಗೆ ನಗುನಗುತ್ತ ವೇದಿಕೆಯನ್ನು ನಿರ್ಮಾಣ ಮಾಡಿಕೊಟ್ಟ ಮಹಾನ್ ಮಹಿಳೆ. ಆ ಸಂದರ್ಭದಲ್ಲಿ ರಮೇಶ್ ಬಂದಗದ್ದೆ ನಮ್ಮ ಮುಂದೆ "ಎಂಥ ವಾಕ್ಯಗಳನ್ನು ಸಿ.ಜಿ.ಕೆ.ಯವರಿಗೆ ಮತ್ತು ವಿಮಲಕ್ಕ ಅವರಿಗೆ ಅರ್ಪಿಸುವುದು" ಎಂದು ಭಾವುಕರಾಗಿ ಹೇಳಿದ್ದರು.

ಮೇಲಿನ ಅಷ್ಟೂ ಮಾತುಗಳನ್ನು ಇಲ್ಲಿ ಪ್ರಸ್ತಾಪಿಸಿದ್ದು; ಮೂರು ನಾಲ್ಕು ದಿನಗಳಿಂದ ವೆಂಕಟಸ್ವಾಮಿಯವರು ಸಂಪರ್ಕಿಸಿ "ಶೂದ್ರ, ಕಾರ್ಮಿಕ ಹೋರಾಟಗಾರರ ಬಗ್ಗೆ ನಾವು ಮಾತಾಡಿಕೊಂಡಿದ್ದು ಏನೂ ಆಗಿಲ್ಲ" ಎಂದು ಮತ್ತೆ ಪ್ರೆಸ್ ಕ್ಲಬ್‌ನಲ್ಲಿ ಸೇರಿದ್ದೆವು. ಸೇರಿದಾಗ ಅಪರೂಪಕ್ಕೆ ಮಾಲಿನಿ ಬಂದಿದ್ದರು. ತುಂಬ ಕ್ರಿಯಾಶೀಲ ಮಹಿಳೆ. ಗೆಳೆಯ ಪುರುಷೋತ್ತಮನ ನಿಧನದ ನಂತರ ಆಕೆಯನ್ನು ಭೇಟಿಯಾಗಿದ್ದುದು ಮೂರು ವರ್ಷಗಳ ಹಿಂದೆ ವೇಮಗಲ್‌ನಲ್ಲಿ. ವಿಧಾನ ಪರಿಷತ್ತಿನ ಸಭಾಧ್ಯಕ್ಷರಾಗಿದ್ದ ವಿ.ಆರ್. ಸುದರ್ಶನ್ ರವರ ಪತ್ನಿಯ ಪುಣ್ಯತಿಥಿಯ ಸಂದರ್ಭದಲ್ಲಿ. ಅಂದಿನ ಸಭೆಗೆ ರಾಮೇಗೌಡ (ನಾನಾ ಹೋರಾಟಗಳಲ್ಲಿ ತೊಡಗಿಸಿಕೊಂಡವರು, ಜಾರ್ಜ್‌ಗೆ ಆತ್ಮೀಯರಾದವರು. ನಮಗೆಲ್ಲ ಮೀಸೆ ರಾಮೇಗೌಡ ಎಂದು ಪರಿಚಿತರು) ಬಂದರು. ಅವರನ್ನು ಕಂಡು ಬಹಳ ದಿವಸವಾಗಿತ್ತು. ಹಾಗೆಯೇ ದುಬೈನಿಂದ ಬಂದಿದ್ದ ಅನಿತಾ, ಗೆಳೆಯ ಮುನಿಸಂಜೀವಪ್ಪ, (ಮುನಿಸಂಜೀವಪ್ಪ ಕ್ರೀಡಾಪ್ರೇಮಿ, ಅಥ್ಲೆಟ್, ಒಲಂಪಿಕ್ ಕ್ರೀಡೆಗಳಲ್ಲಿ ಭಾಗವಹಿಸಿದವರು. ಸಾಹಿತ್ಯ, ಸಂಸ್ಕೃತಿ ಹೋರಾಟ ಎಂದರೆ ಬೆಂಬಲ ಸೂಚಿಸುವಂಥವರು) ರಂಗಭೂಮಿಯ ಜೊತೆಗೆ ಎಲ್ಲ ಹೋರಾಟಗಳಲ್ಲಿ ಕ್ರಿಯಾಶೀಲವಾಗಿ ಹೋರಾಟದ ಜೊತೆಗೆ 'ಏನೇ ಕೆಲಸ ತೆಗೆದುಕೊಂಡರೂ ಅಚ್ಚುಕಟ್ಟಾಗಿ ನಿರ್ವಹಿಸುವ ಇತ್ತೀಚೆಗೆ ಕಿರುತೆರೆಯಲ್ಲಿ ಜನಪ್ರಿಯರಾಗಿರುವ ನಾಗರಾಜಮೂರ್ತಿಯೂ ಬಂದಿದ್ದರು. ಅಪರೂಪದ ಸಮಾಜವಾದಿ ನಾಯಕ ಶಾಂತವೇರಿ

ಗೋಪಾಲಗೌಡರ ಮಗ ರಾಮಮನೋಹರ್ ನಮ್ಮ ಜೊತೆ ಸೇರಿಕೊಂಡಿದ್ದರು. ಮುಂದಿನ ತಿಂಗಳು 20ರಂದು ಎಸ್. ವೆಂಕಟರಾಂರವರ ಹಾಗೂ ಸ್ನೇಹಲತಾರೆಡ್ಡಿಯವರ ಪುಣ್ಯತಿಥಿಯ ಸಂದರ್ಭದಂದು "ನಮ್ಮ ನಡುವಿನ ಹೋರಾಟಗಾರರು" ಎಂಬ ಬ್ಯಾನರ್‌ನ ಕೆಳಗೆ ಹಿರಿಯ ಕಾರ್ಮಿಕ ಮುಖಂಡರಾದ ಕಾಮ್ರೇಡ್ ಎಂ.ಸಿ. ನರಸಿಂಹನ್, ಮೈಕೇಲ್ ಫರ್ನಾಂಡೀಸ್, ಆಲಂಪಲ್ಲಿ ವೆಂಕಟರಾಂ, ಕೆ. ಶ್ರೀರಾಮುಲು (ಮಾಜಿ ಸಚಿವರು) ಅನಂತಸುಬ್ಬರಾವ್, ಟಿ.ಐ. ಮಾಧವನ್, ಯು.ಎಸ್. ವೆಂಕಟರಾಂ, ಕೆ.ಎಲ್.ರಾಮಕೃಷ್ಣ ರಾವ್, ಮಹದೇವನ್, ಕಾಮ್ರೇಡ್ ಪಿ. ಜಗನ್ನಾಥ ಹಾಗೂ ಶ್ರೀಪತಿ ಅವರನ್ನು ಕುರಿತು ಗೌರವಿಸುವುದು ಹಾಗೂ ಅವರ ಬಗ್ಗೆ ಕಿರುಪರಿಚಯಾತ್ಮಕ ಹೊತ್ತಿಗೆಯನ್ನು ತರುವುದೆಂದು ತೀರ್ಮಾನಿಸಲಾಯಿತು. ಇದರ ಜೊತೆಗೆ ಅಂದಿನ ಕಾರ್ಯಕ್ರಮಕ್ಕೆ ಜಾರ್ಜ್ ಫರ್ನಾಂಡೀಸ್, ಯು.ಆರ್. ಅನಂತಮೂರ್ತಿ, ಎಂ.ಪಿ.ಪ್ರಕಾಶ್, ಕೇರಳದಿಂದ ವೀರೇಂದ್ರಕುಮಾರ್ ಮತ್ತು ನಮ್ಮ ವಿಧಾನಸಭಾಧ್ಯಕ್ಷರಾದ ಕೃಷ್ಣರವರನ್ನು ಆಹ್ವಾನಿಸುವುದೆಂದು ಚರ್ಚಿಸಲಾಯಿತು. ಇದನ್ನು ಬರೆಯುವ ಕಾಲಕ್ಕೆ ವೆಂಕಟಸ್ವಾಮಿಯವರು 'ಶೂದ್ರ, ಮಹಿಳೆಯರ ಕಡೆಯಿಂದ ಯಾರನ್ನು ಗೌರವಿಸೋಣ ಯೋಚಿಸು" ಎಂದರು. ಈ ಚರ್ಚೆಯಲ್ಲಿ ಪ್ರಸಿದ್ಧ ಉರ್ದು ಕವಿ ಮಾಯರ್ ಮನ್ಸೂರು ಹಾಗೂ ಕನ್ನಡ ಮತ್ತು ಹಿಂದಿಯಲ್ಲಿ ಎರಡೂ ಭಾಷೆಯಲ್ಲಿ ಲೇಖಕಿಯಾಗಿರುವ ಪ್ರೊ ಬಿ.ವೈ. ಲಲಿತಾಂಬರವರು (ಮಧ್ಯಪ್ರದೇಶದ ಇಂದೂರಿನಲ್ಲಿ ಸಾಕಷ್ಟು ವರ್ಷವಿದ್ದವರು) ಭಾಗವಹಿಸಿದರು. ಇದನ್ನು ಬರೆಯುವ ಸಮಯದಲ್ಲಿ ಮಾಲಿನಿ ದೂರವಾಣಿಯಲ್ಲಿ ಸಂಪರ್ಕಿಸಿ "ನಮ್ಮ ನಡುವಿನ ಹಿರಿಯ ಚೇತನ ವೆಂಕಟಸ್ವಾಮಿಯವರು. ಅವರನ್ನು ಕುರಿತು ಬಿ.ಎಸ್. ವೆಂಕಟಲಕ್ಷ್ಮಿಯವರು 'ಚರ್ಚೆಗೊಂದು ಚಾವಡಿ'ಯಲ್ಲಿ ಬರೆಲಿ ಅಲ್ಲವೆ? ದಯವಿಟ್ಟು ನೀವು ವೆಂಕಟಲಕ್ಷ್ಮಿಯವರಿಗೆ ತಿಳಿಸಬೇಕು" ಎಂದರು. "ಆಗಲಿ" ಎಂದು ಹೇಳಿದೆ. ನನಗೆ ತುಂಬ ಪ್ರಿಯವಾದ 'ಚಾವಡಿ'ಯಲ್ಲಿ ಗಂಭೀರ ಲೇಖಕರಿಗೆಲ್ಲ ತಲುಪುವುದು ಎಂದು ಭಾವಿಸಿದೆ.

ಉಸ್ತಾದ್ ಬಾಲೇಖಾನ್ :

ಉಸ್ತಾದ್ ಬಾಲೇಖಾನ್ ಎಂದಾಕ್ಷಣ 'ಶೂದ್ರ'ದ ಹದಿನೈದನೆಯ ವರ್ಷದ ಕಾರ್ಯಕ್ರಮ ನೆನಪಿಗೆ ಬರುತ್ತದೆ. ಇಪ್ಪತ್ತು ವರ್ಷಗಳ ಹಿಂದೆ ಎರಡು ದಿವಸ ಬೆಂಗಳೂರಿನ ಯವನಿಕಾ ಸಭಾಂಗಣದಲ್ಲಿ ನಾನಾ ರೀತಿಯ ಕಾರ್ಯಕ್ರಮಗಳಲ್ಲಿ ಕೊನೆಯದಾಗಿ ಉಸ್ತಾದ್ ಬಾಲೇಖಾನ್ ರವರ ಸಿತಾರ್ ವಾದನದ ಕಾರ್ಯಕ್ರಮ ಖಾನ್‌ರವರ ಹೆಚ್ಚುಗಾರಿಕೆಯನ್ನು ಪ್ರಸಿದ್ಧ ಕಾದಂಬರಿಕಾರ ಲೇಖಕ ಹಾಗೂ ಸಂಗೀತದಲ್ಲಿ ಅಗಾಧವಾದ ಪಾಂಡಿತ್ಯವನ್ನು ಪಡೆದಿದ್ದ ಶಂಕರ ಮೊಕಾಸಿ ಪುಣೇಕರ್‌ರವರು ಪರಿಚಯ ಮಾಡಿಕೊಟ್ಟಿದ್ದರು. ಅಂದು ಸಭೆಯಲ್ಲಿ ಕವಿ ಹಾಗೂ ಪ್ರಸಿದ್ಧ ಭಾಷಾ ವಿದ್ವಾಂಸರಾದ ಬಿಳಿಗಿರಿಯವರೂ ಇದ್ದರು. ಲಂಕೇಶ್‌ರವರು, ಡಾ॥ ಬೆಸಗರಹಳ್ಳಿ ರಾಮಣ್ಣ, ರಾಮಚಂದ್ರ ಶರ್ಮ, ಐ.ಪಿ.ಎಸ್. ಅಧಿಕಾರಿ ಅಜಯಕುಮಾರ್ ಸಿಂಗ್, ಕೆ.ಎಸ್. ನರಸಿಂಹಸ್ವಾಮಿ, ಪ್ರೊ.ಜಿ.ಎಸ್. ಶಿವರುದ್ರಪ್ಪ,

ಡಾ॥ ಮರುಳಸಿದ್ದಪ್ಪ, ಪ್ರಿ. ಕ.ವೆಂ. ರಾಜಗೋಪಾಲ್, ಡಾ॥ ಕೆ.ವಿ. ನಾರಾಯಣ, ಆರ್. ನಾಗೇಶ್, ಡಾ॥ ಹೆಚ್.ಎಸ್.ರಾಘವೇಂದ್ರರಾವ್, ಸಿ.ಆರ್. ಸಿಂಹ, ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ, ಟ.ಎನ್. ಸೀತಾರಾಂ. ಪ್ರೊ.ಕಿ.ರಂ. ನಾಗರಾಜ್, ಡಾ॥ ಸಿದ್ಧಲಿಂಗಯ್ಯ, ಹೆಚ್.ಎಸ್. ಶಿವಪ್ರಕಾಶ್, ಬಿ.ವಿ. ಕಾರಂತ ಮುಂತಾದವರೆಲ್ಲ ಭಾಗವಹಿಸಿದ್ದರು. ಒಟ್ಟು ಕಾರ್ಯಕ್ರಮವನ್ನು ಡಿ.ಆರ್. ನಾಗರಾಜ್ ಮತ್ತು ಕಿ.ರಂ. ನಾಗರಾಜ್ ರೂಪಿಸಿದ್ದರು. ಬಾಲೇಖಾನ್‌ರವರು ಮಧ್ಯಾಹ್ನದ ಒಂದು ಗೋಷ್ಠಿಯನ್ನು ಅವಲೋಕಿಸುತ್ತ "ಸಂಗೀತದ ಬಗ್ಗೆ ಈ ರೀತಿಯಲ್ಲಿ ಚರ್ಚೆಯಾದರೆ ಎಷ್ಟು ಚೆನ್ನಾಗಿರುತ್ತದೆ" ಎಂದು ತಮ್ಮ ಸಿತಾರ್ ವಾದನದ ಪ್ರಾರಂಭದಲ್ಲಿ ಪ್ರತಿಕ್ರಿಯಿಸಿದ್ದರು.

ಇದೇ ಡಿಸೆಂಬರ್ 2 ರಂದು ಉಸ್ತಾದ್ ಬಾಲೇಖಾನ್ ರವರು ತಮ್ಮ ಅರವತ್ತೈದನೆಯ ವಯಸ್ಸಿನಲ್ಲಿ ನಿಧನರಾದ ವಿಷಯ ತಿಳಿದು ಒಂದು ಕ್ಷಣ ಪೆಚ್ಚಾದೆ. ಅಂದು ತಮ್ಮ ಸಿತಾರ್ ವಾದನದ ಮೂಲಕ ಧುನ್, ಝೋಡ್, ಝಾಲಾ, ಗತ್‌ಗಳ ಮೂಲಕ ನಮ್ಮನ್ನೆಲ್ಲ ಸಮ್ಮೋಹನಗೊಳಿಸಿದ್ದನ್ನು ನೆನಪಿಸಿಕೊಂಡೆ. ಲಂಕೇಶ್ ರವರಂತೂ ನನ್ನ ಅರಿವಿನ ಮಟ್ಟಿಗೆ ಎಂದೂ ಸಂಗೀತವನ್ನು ಕೂತು ಕೇಳಿದವರಲ್ಲ. ಆ ದಿನ ಉಲ್ಲಸಿತರಾಗಿ ಕೇಳಿದ್ದರು. ಹಾಗೆ ನೋಡಿದರೆ ಲಂಕೇಶ್‌ರವರು ಎರಡು ದಿನಗಳು ಪೂರ್ಣ ಪ್ರಮಾಣದಲ್ಲಿ ಭಾಗಿಯಾಗಿದ್ದರು. ಲಂಕೇಶ್ ಪತ್ರಿಕೆಯ ಪ್ರಾರಂಭದ ದಿನಗಳಲ್ಲಿ ರಾಜಕೀಯ ಮತ್ತು ಸಮಕಾಲೀನ ವಿಷಯುಗಳನ್ನು ಕುರಿತು ಪೂರ್ತಿ ತಮ್ಮ ಬರವಣಿಗೆಯಲ್ಲಿ ತೊಡಗಿಸಿಕೊಂಡವರು. ಸಾಹಿತ್ಯದ ಬಗ್ಗೆ ಉಪೇಕ್ಷೆಯನ್ನು ತೋರಿದವರು. ಇದಕ್ಕೆ ಸಂಬಂಧಿಸಿದಂತೆ ಡಿ.ಆರ್. ನಾಗರಾಜ್ ಮತ್ತು ನಾನು ಲಂಕೇಶ್‌ರವರಿಗೆ ಸೂಚಿಸಿದಾಗ ನಮಗೆ ಛೀಮಾರಿ ಹಾಕಿದ್ದರು. ಅಂಥ ಲಂಕೇಶ್‌ರವರು 'ಶೂದ್ರ'ದ 15ನೆಯ ವರ್ಷದ ಕಾರ್ಯಕ್ರಮದ ಕವಿಗೋಷ್ಠಿಯಲ್ಲಿ ಅವ್ವ–2 ಕವನವನ್ನು ಬರೆದುಕೊಂಡು ಬಂದು ಟಿ.ಎನ್. ಸೀತಾರಾಂ ಮತ್ತು ಕಿ.ರಂ. ರವರಿಗೆ ಚೀಟಿ ಕಳಿಸಿ ಪದ್ಯ ಓದಬಹುದಾ? ಎಂದು ಕೇಳಿದವರು. ಇದಾದ ನಂತರ ಲಂಕೇಶ್‌ರವರು ಪಕ್ಕದಲ್ಲಿ ಕೂತಿದ್ದ ಮೊಕಾಶಿಯವರಿಗೆ "ಊಟಕ್ಕೆ ಬಾಲೇಖಾನ್‌ರವರನ್ನು ಕರೆತನ್ನಿ" ಎಂದು ಹೇಳಿ ಹೋಗಿದ್ದರು. ಅಂದು ಆ ಕಲ್ಯಾಣ ಮಂಟಪದಲ್ಲಿ ಖಾಸಗಿ ಚರ್ಚೆಯಲ್ಲಿ ಬಿಳಿಗಿರಿಯವರು ಮತ್ತು ಮೊಕಾಶಿಯವರು ಎಷ್ಟು ಆತ್ಮೀಯತೆಯಿಂದ ಚರ್ಚೆಯಲ್ಲಿ ಭಾಗವಹಿಸಿದ್ದರು. ಉಸ್ತಾದ್ ಬಾಲೇಖಾನ್‌ರವರು ಡ್ರಿಂಕ್ಸ್ ತೆಗೆದುಕೊಳ್ಳದಿದ್ದರೂ ಊಟ ಮಾಡಿ ಮಾತನ್ನು ಆಲಿಸುತ್ತ ಭಾಗಿಯಾಗಿದ್ದರು. ಲಂಕೇಶ್‌ರವರು ಬಾಲೇಖಾನ್‌ರವರ ವಿದ್ವತ್ ಮತ್ತು ವಿನಯವನ್ನು ತುಂಬ ಮೆಚ್ಚಿಕೊಂಡಿದ್ದರು. ನಾವು ಕೊಡಬೇಕಾದ ಗೌರವ ಸಂಭಾವನೆಯ ಜೊತೆಗೆ ಲಂಕೇಶ್‌ರವರು ಪ್ರೀತಿಯಿಂದ ಸ್ವಲ್ಪ ಹಣವನ್ನು ಕವರ್‌ನಲ್ಲಿಟ್ಟು ಕೊಟ್ಟರು. ಅದಕ್ಕೆ ಖಾನ್ ಸಾಹೇಬರು ಪುಟ್ಟ ಮಗುವಿನಂತೆ ನಾಚಿಕೊಂಡಿದ್ದರು. ಇದರ ಜೊತೆಗೆ ಲಂಕೇಶ್‌ರವರು ಬಾಲೇಖಾನ್‌ರವರ ಜೊತೆ "ಖಾನ್ ಸಾಹೇಬರೇ ಎಂದಾದರೂ ಒಮ್ಮೆ ನಮ್ಮ ತೋಟದಲ್ಲಿ ಸಿತಾರ್ ವಾದನದ ಕಾರ್ಯಕ್ರಮ ನಡೆಸಿಕೊಡಬೇಕು. ಶೂದ್ರ ಬಂದು ನಿಮ್ಮಲ್ಲಿ ಮಾತಾಡ್ತಾನೆ" ಎಂದಿದ್ದರು.

ಬಾಲೇಖಾನ್‌ರವರು ತಿಂಗಳಿಗೆ ಎರಡು ಭಾನುವಾರ ಬೆಂಗಳೂರಿನ ತ್ಯಾಗರಾಜನಗರದ ನೆಟ್ಟಕಲ್ಲಪ್ಪ ಸರ್ಕಲ್ ಬಳಿ ಒಂದು ಮನೆಯಲ್ಲಿ ಕೆಲವು ಶಿಷ್ಯರಿಗೆ ಸಿತಾರ್ ಕಲಿಸಲು ಬರುತ್ತಿದ್ದರು. ನಾನು ಮತ್ತು ನನ್ನ ಮಗ ಅವರ ಬಳಿ ಸಿತಾರ್ ಕಲಿಯಲು ತುಂಬ ಆಸೆ ಇತ್ತು. ಇದರ ಬಗ್ಗೆ ಚರ್ಚಿಸಲು ಅವರಲ್ಲಿಗೆ ಎರಡು ಬಾರಿ ಹೋಗಿ ತರಗತಿಯಲ್ಲಿ ಕೂತು ಎದ್ದು ಬಂದಿದ್ದೆ. ಆಗಲೇ ಅವರು ನಿಭಾಯಿಸಲು ಆಗದಷ್ಟು ಶಿಷ್ಯರು ಜಮಾಯಿಸಿದ್ದರು. ಅವರು ಮತ್ತೊಂದು ಕಡೆ ವ್ಯವಸ್ಥೆ ಮಾಡಿಕೊಟ್ಟರೆ ನಾನು ಬೇರೆ ಭಾನುವಾರದ ದಿನಗಳಂದು ಬಂದು ಕಲಿಸಲು ಸಿದ್ಧನಿರುವೆ ಎಂದರು. ನಾನು ಒಪ್ಪಿ ಬಂದೆ. ಕೊನೆಗೆ ಬೆಂಗಳೂರು ಆಕಾಶವಾಣಿಯಲ್ಲಿದ್ದ ಜಯಂತ್‌ದಾಸ್‌ರವರ ಬಳಿ ಕಲಿಯಲು ಹೋಗಿ ಮಧ್ಯದಲ್ಲಿಯೇ ಕಾರಣಾಂತರಗಳಿಂದ ಕೈಬಿಟ್ಟೆ. ಈಗ ಮನೆಯಲ್ಲಿ ಮುಕ್ಕಾದ ಸಿತಾರ್ ವಾದಕವನ್ನು ಕಂಡಾಗ ಉಸ್ತಾದ್ ಬಾಲೇಖಾನ್, ಜಯಂತ್‌ದಾಸ್ ನೆನಪಿಗೆ ಬರುತ್ತಾರೆ. ಅದರ ವಾದನದ ತಂತಿಗಳು ಮನಸ್ಸಿನಲ್ಲಿ ಮೀಟಿದಂತಾಗುತ್ತದೆ. ಹಾಗೆಯೇ ಬಾಲೇಖಾನ್‌ರವರು ಕೊಟ್ಟ ಕ್ಯಾಸೆಟ್ಟನ್ನು ಹಾಕಿ ಆಲಿಸುವುದು. ಹೀಗೆ ಆಲಿಸುವಾಗಲೆಲ್ಲ ಉಸ್ತಾದ್ ಬಾಲೇಖಾನ್‌ರವರು ನೆನಪಿಗೆ ಬರುವರು. ಇದೇ ಸಂದರ್ಭದಲ್ಲಿ ಕಿ.ರಂ.ರವರ ಮನೆಯಲ್ಲಿ ಬಿಳಿಗಿರಿಯವರು ತಮ್ಮ ಹೆಂಡತಿಯು ನುಡಿಸಿರುವ ವೀಣೆಯ ಕ್ಯಾಸೆಟ್ಟನ್ನು ಕೊಟ್ಟಿದ್ದರು. ಅದನ್ನು ಕೊಡುವಾಗ ಭಾವನಾತ್ಮಕವಾಗಿ ತಮ್ಮ ಹೆಂಡತಿಯ ವೀಣೆಯ ವಿದ್ವತ್ತನ್ನು ಕುರಿತು ಹೇಳಿದ್ದರು.

ಈ ಇಪ್ಪತ್ತು ವರ್ಷಗಳಲ್ಲಿ ಬಾಲೇಖಾನ್‌ರವರನ್ನು ಸಿತಾರ್ ವಾದನದ ಎರಡು ಮೂರು ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವೆ. ಆಗ ಮಾತಾಡಿಸಿದಾಗ "ಹುಬ್ಬಳ್ಳಿ - ಧಾರವಾಡದ ಕಡೆ ಬಿಡುವು ಮಾಡಿಕೊಂಡು ಬನ್ನಿ" ಎಂದು ಹೇಳಿದ್ದರು. ಮೂರು ವರ್ಷಗಳ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ತಿಂಗಳ ಮನೆಯಂಗಳ ಕಾರ್ಯಕ್ರಮದಲ್ಲಿ ಮಹಾನ್ ಗಾಯಕಿ ಗಂಗೂಬಾಯಿ ಹಾನಗಲ್‌ರವರು ತಿಂಗಳ ಮುಖ್ಯ ಅತಿಥಿಯಾಗಿದ್ದರು. ಆಗ ಅವರೊಡನೆ ಟೀ ಕುಡಿಯುವ ಸಮಯದಲ್ಲಿ ಉಸ್ತಾದ್ ಬಾಲೇಖಾನ್‌ರವರನ್ನು ಕುರಿತಂತೆ ಪ್ರಸ್ತಾಪಿಸಿದಾಗ ಖಾನ್‌ರವರ ಬಗ್ಗೆ ತುಂಬು ಹೃದಯದಿಂದ ಮಾತಾಡಿದ್ದರು.

ಮೇಲಿನ ಕೆಲವು ನೆನಪಿನ ಮಾತುಗಳು ಅವರಿಗೆ 'ಶೂದ್ರ'ದ ಶ್ರದ್ಧಾಂಜಲಿ.

ಆ ಕಾರ್ಯಕ್ರಮದ ಜವಾಬ್ದಾರಿಯನ್ನು ಕಪ್ಪಣ್ಣ ಜಿ. ಶ್ರೀನಿವಾಸ್‌ರವರು ನಿರ್ವಹಿಸಿದ್ದರು. ಹಿರಿಯ ಐ.ಪಿ.ಎಸ್. ಅಧಿಕಾರಿ ಅಜಯಕುಮಾರ್‌ಸಿಂಗ್‌ರವರು ಹಿಂದಿಯ ಇಬ್ಬರು ಬಹು ಮುಖ್ಯ ಲೇಖಕರು ಭಾಗವಹಿಸಲು ವ್ಯವಸ್ಥೆ ಮಾಡಿದ್ದರು.

ಒಂದು ಆಕಸ್ಮಿಕ ಸಮಾಗಮ :

ನವೆಂಬರ್ 13ರಂದು ಸಂಜೆ ಆಕಸ್ಮಿಕವಾಗಿ ಜೆ.ಪಿ.ನಗರದ 2ನೆಯ ಹಂತದಲ್ಲಿರುವ

ಮಹಾ ನಗರ ಪಾಲಿಕೆಯ ಪಾರ್ಕ್‌ಗೆ ವಾಕ್ ಹೋದೆ. ಸಂಜೆ ಆರೂವರೆಯಾಗಿತ್ತು. ಸಾಮಾನ್ಯವಾಗಿ ಬೆಳಿಗ್ಗೆ ವಾಕ್ ಗೆ ಹೋಗುವವನು ಅಂದು ಸಂಜೆಯೂ ವಾಕ್ ಮಾಡುವ ಅನ್ನಿಸಿತ್ತು. ಅಚ್ಚುಕಟ್ಟಾದ ಪಾರ್ಕ್. ಡಾ॥ ಮರುಳಸಿದ್ದಪ್ಪನವರು ಡಾ॥ ರಾಘವೇಂದ್ರರಾವ್ ಮುಂತಾದವರೆಲ್ಲ ಬರುವ ಸ್ಥಳ. ಆ ದಿನ ಆ ಪಾರ್ಕ್‌ನಲ್ಲಿ ಒಂದು ಸುತ್ತು ಮುಗಿಸಿ ಎರಡನೆಯ ಸುತ್ತಿನ ಸಮಯದಲ್ಲಿ ಪರಿಚಿತ ಧ್ವನಿ ಕಿವಿಯ ಮೇಲೆ ಬಿತ್ತು. ನಾಲ್ಕೈದು ಮಾರು ಮುಂದೆ ಹೋಗಿದ್ದವನು ಹಿಂದಿರುಗಿ ನೋಡಿದೆ. ವಿಮರ್ಶಕ ಮತ್ತು ಚಿಂತಕ ಹೆಚ್.ಎಸ್. ರಾಘವೇಂದ್ರರಾವ್, ಕಥೆಗಾರ ಹಾಗೂ ಆದಾಯ ತೆರಿಗೆಯ ಉನ್ನತಾಧಿಕಾರಿ ಕೆ. ಸತ್ಯನಾರಾಯಣ ಹಾಗೂ ಗೆಳೆಯ ಪುಸ್ತಕ ಮನೆಯ ಹರಿಹರಪ್ರಿಯ ಅವರು ನೀಟಾಗಿ ಅವರ ಪಾದಗಳ ರಕ್ತವನ್ನು ಸೊಳ್ಳೆಗಳು ಚಪ್ಪರಿಸಲು ಅವಕಾಶ ಮಾಡಿಕೊಟ್ಟು ಸಾಹಿತ್ಯದ ಹರಟೆಮಲ್ಲರಾಗಿ ತಲ್ಲೀನರಾಗಿದ್ದರು. ಅವರ ಜೊತೆ ನಾನೂ ಸೇರಿಕೊಂಡೆ. ಸತ್ಯನಾರಾಯಣರವರನ್ನು ನೋಡಿ ಒಂದೆರಡು ವರ್ಷವಾಗಿತ್ತು.

15ರಂದು ಅಂಡಮಾನ್‌ಗೆ ಹೋಗುವ ವಿಷಯ ತಿಳಿಸಿದೆ. ಯಾಕೆಂದರೆ ಕಳೆದ ವರ್ಷ ಸತ್ಯನಾರಾಯಣರವರು ಹೋಗಿ ಬಂದಿದ್ದರು. ಇದಕ್ಕೆ ಅಂಟಿಕೊಂಡಂತೆ ಕೆ.ಟಿ.ಗಟ್ಟಿಯವರ ಹಾಗೂ ತೇಜಸ್ವಿಯವರ ಕೃತಿಗಳು ಪ್ರಸ್ತಾಪಕ್ಕೆ ಬಂದುವು. ಹಾಗಾದರೆ ಅಂಡಮಾನ್ ಬಗ್ಗೆ ನಿಮ್ಮದೂ ಒಂದು ಕೃತಿ ಬರುವುದು ಎಂದು ಸತ್ಯನಾರಾಯಣರವರು ತಮಾಷೆಯಾಡಿದರು. ನಕ್ಕು, ಬರೆಯುವ ಆಸೆ ಇದೆ ಎಂದೆ. ಅಂದು ಸುಮಾರು ಒಂದೂವರೆ ಗಂಟೆಯಷ್ಟು ಸಮಯದಲ್ಲಿ ನಮ್ಮ ಸಾಹಿತ್ಯ ಸಂದರ್ಭದಲ್ಲಿ ಅವಜ್ಞೆಗೊಳಗಾದ ಲೇಖಕರು ಮತ್ತು ಕೃತಿಗಳು ಚರ್ಚೆಗೊಳಗಾದವು. ಅಲ್ಲಿಂದ ರಂಗಶಂಕರದ ಬಳಿ ಹೋಗಿ ಟೀ ಕುಡಿಯುತ್ತ ಮತ್ತಷ್ಟು ಹರಟೆ. ಆ ಹರಟೆಯೂ ಲೇಖಕರ ಮತ್ತು ಕೃತಿಗಳ ಸುತ್ತಲೂ ಗಿರಕಿ ಹೊಡೆಯುತ್ತ ಸಾಗಿತ್ತು.

ಹೊರಡುವಾಗ "ಬಹಳ ದಿವಸವಾಗಿತ್ತು ಇಂಥ ಚರ್ಚೆಯಲ್ಲಿ ಭಾಗಿಯಾಗಿ" ಎಂದು ಹೇಳುತ್ತಲೇ ಚೆಲ್ಲಾಪಿಲ್ಲಿಯಾದೆವು.

"ನಾನು ಬದಲಾಗಿದ್ದು ಪುಸ್ತಕಗಳಿಂದ"

ಯಾವುದೇ ಸಾರ್ವಜನಿಕ ಪಾರ್ಕ್‌ನ ದಿನನಿತ್ಯದ ಬದುಕೇ ವಿಚಿತ್ರವಾದದ್ದು. ಬದುಕಿನ ವಿವಿಧ ನಡೆನುಡಿಗಳೆಲ್ಲ ಅಲ್ಲಿ ಸಂಚರಿಸುತ್ತಿರುತ್ತವೆ ಅನ್ನಿಸುತ್ತದೆ. ಕೆಲವು ವಯೋವೃದ್ಧರೆಲ್ಲ ಗುಂಪು ಗುಂಪಾಗಿ ಕೂತಿರುವ ಬಳಿಯಿಂದ ಅವರು ಸೇವಿಸುವ ಔಷಧಿಗಳು, ಮನೆಯ ಸಮಸ್ಯೆಗಳು, ಪ್ರಸಕ್ತ ರಾಜಕೀಯ ವಿಚಾರಗಳು, ಕ್ರಿಕೆಟ್‌ನ ವಿಚಾರಗಳು ಸಂಭ್ರಮದಿಂದ ಹೊರಗೆ ಚಿತ್ತರಿಸುತ್ತಿರುತ್ತವೆ. ಅದೇ ರೀತಿಯಲ್ಲಿ ಹೆಣ್ಣು ಮಕ್ಕಳು ಗುಂಪಾಗಿ ವಾಕ್ ಮಾಡುವಾಗ ಅಡಿಗೆಯ ವಿಚಾರಗಳಿಂದ ಮೊದಲುಗೊಂಡು ಅತ್ತೆ ಸೊಸೆಯ ಸಂಬಂಧಗಳು ಹಾಗೂ ಟಿ.ವಿ. ಸೀರಿಯಲ್‌ಗಳ ವಿಚಾರವೆಲ್ಲ ರೋಚಕವಾಗಿ ಕಿವಿಗೆ ತಲುಪುತ್ತಿರುತ್ತವೆ. ಇದೇ ರೀತಿಯಲ್ಲಿ ಮೂರು ಮಂದಿ ಮುವತ್ತೈದರ ವಯೋಮಾನದ ಗಡಿಯನ್ನು

ಮಾಡಿದವರಿರಬಹುದು, ರಭಸವಾಗಿ ವಾಕ್ ಮಾಡುತ್ತಿದ್ದರು. ಅವರಲ್ಲೊಬ್ಬ "ನೋಡಿ ನನ್ನ ಕೆಟ್ಟ ಚಟಗಳಿಂದ ಬಿಡುಗಡೆಯಾಗಿದ್ದೇ ಪುಸ್ತಕಗಳನ್ನು ಓದುವುದರ ಮೂಲಕ. ಈಗ ವಾರಕ್ಕೊಂದು ಪುಸ್ತಕ ಓದದಿದ್ದರೆ ನನಗೇನನ್ನೋ ಕಳೆದುಕೊಂಡ ಹಾಗೆ. ಇದರಿಂದ ನಮ್ಮ ಮನೆಯಲ್ಲಿ ನಿಧಾನವಾಗಿ ಪುಟ್ಟ ಲೈಬ್ರರಿಯೊಂದು ಬೆಳೆಯುತ್ತಿದೆ" ಎಂದಾಗ ನನಗೆ ಎಲ್ಲಿಲ್ಲದ ಖುಷಿಯಾಯಿತು. ಒಂದು ಕ್ಷಣ ಆತನನ್ನು ನಿಲ್ಲಿಸಿ ವಿಳಾಸ ಪಡೆದು ಮೆಚ್ಚಿಗೆ ಸೂಚಿಸೋಣ ಅನ್ನಿಸಿತು. ಆದರೆ ಆತ ನನಗಿಂತ ಎತ್ತರವಿದ್ದ. ಸ್ವಲ್ಪ ಸ್ಪೀಡಾಗಿಯೇ ವಾಕ್ ಮಾಡುತ್ತಿದ್ದ. ಇದರ ಜೊತೆಗೆ, ವಾಕ್ ಮಾಡುವಾಗ ಯಾರ್‍ಯಾರನ್ನೋ ಮಾತಾಡಿಸುವುದು ಚೆನ್ನಾಗಿಲ್ಲ ಎಂದು ಭಾವಿಸಿದೆ. ಯಾಕೆಂದರೆ ನಾನು ವಾಕ್ ಮಾಡುವಾಗ ನನ್ನನ್ನು ಯಾರೂ ಮಾತಾಡಿಸದಿದ್ದರೆ ತುಂಬ ಸಮಾಧಾನವಾಗುತ್ತದೆ. ಹತ್ತಾರು ವರ್ಷಗಳ ಹಿಂದೆ ಲಂಕೇಶ್‌ರವರ ಒತ್ತಾಯಕ್ಕೆ ಲಾಲ್‌ಬಾಗ್‌ಗೆ ಎರಡು ದಿನ ವಾಕ್‌ಗೆ ಹೋಗಿ ಎಂದೆಂದಿಗೂ ಲಾಲ್‌ಬಾಗ್‌ಗೆ ವಾಕ್ ಹೋಗಬಾರದು ಅನ್ನಿಸಿತು. ಜಾತ್ರೆಯ ರೀತಿಯ ಜನ ಪರಿಚಯದ ಮುಖಗಳು, ಕೃತಕವಾದ ನಗುವಿನ ಸ್ಪಂದನ. ಇದೆಲ್ಲ ಯಾರಿಗೆ ಬೇಕು ಅನ್ನಿಸಿತು.

ನವೆಂಬರ್ ೧೪ರಂದು ರಾಷ್ಟ್ರೀಯ ಗ್ರಂಥಾಲಯ ಸಪ್ತಾಹವಿತ್ತು. ಅದರ ಉದ್ಘಾಟನೆಯ ಕಾರ್ಯಕ್ರಮ ಈ ಬಾರಿ ಡಬಲ್‌ರೋಡ್‌ನ ಗ್ರಂಥಾಲಯದ ಬಳಿಯ ಸಹಕಾರಿ ಭವನದ ಕೆ.ಎಚ್. ಪಾಟೀಲ್ ಸಭಾಂಗಣದಲ್ಲಿತ್ತು. ಉದ್ಘಾಟನೆಯನ್ನು ಡಾ॥ ಚಂದ್ರಶೇಖರ ಕಂಬಾರರು ನಡೆಸಿಕೊಟ್ಟರು. ಮುಖ್ಯ ಅತಿಥಿಗಳಾಗಿ ಅಬ್ದುಲ ರೆಹಮಾನ್ ಕಮರುದ್ದೀನ್ ರವರು ಭಾಗವಹಿಸಿದ್ದರು. ಕಮರುದ್ದೀನ್‌ರವರು ಗ್ರಂಥಾಲಯ ಚಳುವಳಿಯ ನೇತಾರರಾದ ರಂಗನಾಥನ್‌ರವರಿಂದ ಬೆಳೆದು ಬಂದವರು. ಅವರ ಕೈಕೆಳಗೆ ಕೆಲಸ ಮಾಡಿದವರು. ಯುನೆಸ್ಕೋ ರೀತಿಯ ಶೈಕ್ಷಣಿಕ ಸಂಸ್ಥೆಗಳಿಗೆ ಜಗತ್ತಿನಾದ್ಯಂತ ಸಲಹೆಗಾರರಾಗಿರುವಂಥವರು. ಅಂದು ಹಿರಿಯ ಐ.ಎ.ಎಸ್. ಅಧಿಕಾರಿ ವಿಜಯಭಾಸ್ಕರ್ ರವರು ಕಾರಣಾಂತರಗಳಿಂದ ಕಾರ್ಯಕ್ರಮಕ್ಕೆ ಬರಲಾಗಲಿಲ್ಲ. ಅವರು ಅಧ್ಯಕ್ಷತೆ ವಹಿಸಬೇಕಾಗಿತ್ತು. ಕೊನೆಗೆ ಗ್ರಂಥಾಲಯ ಇಲಾಖೆಯ ನಿರ್ದೇಶಕರಾದ ರಾಜೇಂದ್ರಕುಮಾರ್ ಮತ್ತು ಡಬಲ್ ರೋಡ್ ಗ್ರಂಥಾಲಯದ ಗ್ರಂಥಪಾಲಕರಾದ ಬಡಿಗಣ್ಣನವರ್ ರವರು ಅಂದಿನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲು ಸೂಚಿಸಿದರು. ನಾನು ಸಂತೋಷದಿಂದ ಒಪ್ಪಿಕೊಂಡೆ. ಹಾಗೆ ನೋಡಿದರೆ ಪ್ರತಿ ವರ್ಷ ಗ್ರಂಥಾಲಯ ಸಪ್ತಾಹದ ಒಂದಲ್ಲ ಒಂದು ಕಾರ್ಯಕ್ರಮದಲ್ಲಿ ಭಗವಹಿಸುತ್ತಲೇ ಬಂದಿರುವೆ. ಎರಡು ವರ್ಷಗಳ ಹಿಂದೆ ಆರ್.ಟಿ. ನಗರದ ಗ್ರಂಥಾಲಯದಲ್ಲಿ ಅದ್ಭುತ ರೀತಿಯಲ್ಲಿ ಸಪ್ತಾಹವನ್ನು ವ್ಯವಸ್ಥೆ ಮಾಡಿದ್ದರು. ಅದರ ಸಮಾರೋಪ ಭಾಷಣವನ್ನು ಮಾಡುವ ಅವಕಾಶ ಸಿಕ್ಕಿತ್ತು. ಹಿಂದೆ ಕೆಲವು ವರ್ಷಗಳ ಹಿಂದೆ ಕಬ್ಬನ್ ಪಾರ್ಕ್‌ನ ಎನ್.ಜಿ.ಓ. ಭವನದಲ್ಲಿ ನಡೆದ ಗ್ರಂಥಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದೆ. ಅಂದು ಉದ್ಘಾಟಿಸಿದ ಹಿರಿಯ ಗಾಂಧಿವಾದಿ ಹಾಗೂ ಪುಸ್ತಕ ಪ್ರೇಮಿ ಜಿ. ನಾರಾಯಣರವರು ಒಂದು ಮಾತು ಹೇಳಿದರು : "ನಾವು ನಮ್ಮ ಮಕ್ಕಳಿಗೆ ಏನನ್ನು ಉಳಿಸದಿದ್ದರೂ ಚಿಂತೆಯಿಲ್ಲ, ಒಂದು ಪುಟ್ಟ ಗ್ರಂಥಭಂಡಾರವನ್ನು ಬಿಟ್ಟು ಹೋದರೆ ಸಾಕು" ಎಂದು. ನನಗೆ ಇಂದಿಗೂ ಇದು ಅತ್ಯಂತ ಆಪ್ತವಾಗಿ ಕಂಡಿದೆ. ಎಲ್ಲಿಗೆ ಹೋದರೂ ಇದನ್ನು ಪ್ರಸ್ತಾಪಿಸುವೆ. ಹಾಗೆಯೇ ಅಂದು ನಾನು ಮಾತಾಡುವಾಗ ಗ್ರಂಥಾಲಯ

ಚಳುವಳಿಯ ರೂವಾರಿಗಳಾದ ಎನ್.ಡಿ. ಬಗರಿ ಹಾಗೂ ದೇಶಪಾಂಡೆಯವರ ಸಾಧನೆಯನ್ನು ಪ್ರಸ್ತಾಪಿಸಿದೆ. ಸಭೆ ಮುಗಿದ ಬಳಿಕ ದೇಶಪಾಂಡೆಯವರು ಹಾಗೂ ಬಗರಿಯವರು ಬಂದು "ಶ್ರೀನಿವಾಸ್ ಇಷ್ಟೊಂದು ದೊಡ್ಡ ಸಭೆಯಲ್ಲಿ ನಮ್ಮನ್ನು ನೆನಪಿಟ್ಟುಕೊಂಡು ಪ್ರಸ್ತಾಪಿಸಿದ್ದಕ್ಕೆ ಋಣಿಯಾಗಿರುವೆ" ಎಂದರು. ನಾನು ಸಂಕೋಚದಿಂದ ಪೆಚ್ಚಾದೆ. ಅವರು ಸಭೆಯಲ್ಲಿದ್ದುದು ಗೊತ್ತಿದ್ದರೆ ವೇದಿಕೆಯ ಮೇಲೆ ಕೂರಲು ಆಹ್ವಾನಿಸುತ್ತಿದ್ದೆ.

ಅಂದು ಡಬ್ಬಲ್ ರೋಡಿನ ಕಾರ್ಯಕ್ರಮದಲ್ಲಿ ಇದನ್ನೆಲ್ಲ ಪ್ರಸ್ತಾಪಿಸುತ್ತ ಲಂಕೇಶ್‌ರವರು ನನ್ನಂಥವರು ವಾರಕ್ಕೊಂದು ಪುಸ್ತಕವನ್ನಾದರೂ ಓದದಿದ್ದರೆ ಹೇಗೆ ಛೀಮಾರಿ ಹಾಕುತ್ತಿದ್ದರು. ನಾವು ಓದಿದ್ದೇವೋ, ಇಲ್ಲವೋ ಎಂಬುದನ್ನು ಪರೀಕ್ಷಿಸಲು ಪುಸ್ತಕದ ಯಾವುದೋ ಒಂದು ಅಧ್ಯಾಯದ ಮುಖ್ಯ ಘಟನೆಯನ್ನು ಕೇಳಿ ಓದುವ ಸಂಸ್ಕೃತಿಯನ್ನು ವಿಸ್ತರಿಸಿದರು. ತುಂಬ ಹಿಂದಿನ ವರ್ಷಗಳ ಮಾತು: ಬೆಂಗಳೂರು ಆಕಾಶವಾಣಿಯಲ್ಲಿ ಯಾವುದೋ ರೆಕಾರ್ಡಿಂಗ್ ಸಂದರ್ಭದಲ್ಲಿ ಹಿರಿಯ ರಾಜಕಾರಣಿ ಹಾಗೂ ಚಿಂತಕರಾದ ಕಡಿದಾಳ್ ಮಂಜಪ್ಪನವರ ಜೊತೆ ಒಂದಷ್ಟು ಕಾಲ ಕಳೆಯುವ ಅವಕಾಶ ಸಿಕ್ಕಿತ್ತು. ಅಂದು ಕಾರ್ಯಕ್ರಮ ಮುಗಿದ ಮೇಲೆ ಆಕಾಶವಾಣಿಯ ಕಾಂಪೌಂಡಿನ ಹುಲ್ಲಿನ ಹಾಸಿನ ಮೇಲೆ ಕೂತು ಹಾಗೆಯೇ ಆಕಸ್ಮಿಕವಾಗಿ ರೆಕಾರ್ಡಿಂಗ್ ಗೆ ಬಂದಿದ್ದ ಮಹಾನ್ ಗಾಯಕ ಬಾಳಪ್ಪ ಹುಕ್ಕೇರಿಯವರು ಸೇರಿಕೊಂಡು ಕಡಳೆಕಾಯಿ ತಿನ್ನಲು ಕೂತೆವು. ಕಡಿದಾಳ್ ರವರು ತುಂಬ ಹರಟೆ ಮಲ್ಲರಾದ್ದರಿಂದ ಆತ್ಮೀಯವಾಗಿ ಏನೇನೋ ಕೇಳತೊಡಗಿದರು. ಕಾವ್ಯದ ಅಭಿರುಚಿಯ ಬಗ್ಗೆ ಕೇಳಿದರು. ಹೀಗೆ ಕೇಳುತ್ತಲೇ ಬಾಳಪ್ಪ ಅವರಿಂದ ಸಿದ್ಧಯ್ಯ ಪುರಾಣಿಕರ 'ಮೊದಲು ಮಾನವನಾಗು' ಕವನವನ್ನು ಹಾಡಿಸಿದರು. ಬಾಳಪ್ಪ ಹುಕ್ಕೇರಿಯವರು ಬೇಂದ್ರೆ, ಕುವೆಂಪು, ಚೆನ್ನವೀರ ಕಣವಿ ಮತ್ತು ಸಿಂಪಿ ಲಿಂಗಣ್ಣ, ಸಿದ್ಧಯ್ಯ ಪುರಾಣಿಕ್ ಮುಂತಾದವರನ್ನು ಭೇಟಿಯಾದ ಸಂಧರ್ಭಗಳನ್ನು ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಿದ್ದರು. (ಆಕಾಶವಾಣಿಯ ಭೇಟಿಯಿಂದ ಬಾಳಪ್ಪ ಹುಕ್ಕೇರಿಯವರು ಬೆಂಗಳೂರಿಗೆ ಬಂದಾಗಲೆಲ್ಲ ಅವರನ್ನು ನೋಡುವ ಅವಕಾಶ ಮೆಜೆಸ್ಟಿಕ್‌ನ ರಾಯಲ್ ಲಾಡ್ಜ್‌ನಲ್ಲಿ ದೊರಕುತ್ತಿತ್ತು.) ಅದು ಅಷ್ಟೊತ್ತಿಗೆ ತುಂಬ ಜನಪ್ರಿಯ ಹಾಡಾಗಿತ್ತು. ನನಗೆ ಅಚ್ಚರಿ ಅನಿಸಿದ್ದು ಅಂದು ಕಡಿದಾಳ್ ರವರು "ಶ್ರೀನಿವಾಸ್ ಬಾಪ್ಪ, ಆಕಾಶವಾಣಿ ಗ್ರಂಥಾಲಯ ಹೇಗಿದೆಯೋ ನೋಡಿ ಬರೋಣ" ಎಂದು ಕರೆದುಕೊಂಡು ಹೋಗಿದ್ದರು. ಅಷ್ಟು ವಯೋವೃದ್ಧರಾಗಿದ್ದರೂ ಕಪ್ಪು ಕೋಟು ಧರಿಸಿ ಹೈಕೋರ್ಟಿಗೆ ಬರುತ್ತಿದ್ದವರು. ಶಾಂತಿನಗರದ ಅವರ ಮನೆಗೆ ಎರಡು ಮೂರು ಬಾರಿ ಹೋದಾಗ ತಮ್ಮ ಪುಸ್ತಕ ಭಂಡಾರದ ಸಂಗ್ರಹವನ್ನು ತೋರಿಸಿದ್ದರು. ನಿಜಲಿಂಗಪ್ಪನವರಂತೂ ಅತ್ಯಂತ ಪುಸ್ತಕ ಪ್ರೇಮಿಯಾಗಿದ್ದರು. ತಮ್ಮ ತೊಂಬತ್ತನೆಯ ವಯಸ್ಸಿನಲ್ಲಿಯೂ ಅತ್ಯಂತ ಮೆಲುದನಿಯಲ್ಲಿ ಜಗತ್ತಿನ ಶ್ರೇಷ್ಠ ಸಂಗೀತವನ್ನು ಓದುತ್ತಲೇ ಆಲಿಸುತ್ತಿದ್ದವರು. ಸಂಗೀತವನ್ನು ಓದಿನ ಏಕಾಗ್ರತೆಗೆ ಅಸ್ತ್ರವನ್ನಾಗಿ ಬಳಸಿಕೊಂಡವರು. ಇದನ್ನು ಸುಮಾರು ಅರವತ್ತು ಎಪ್ಪತ್ತು ವರ್ಷಗಳಿಂದ ನಿರಂತರ ಪಾಲಿಸಿಕೊಂಡು ಬಂದವರು. ಇದನ್ನೇ ಉದಾಹರಣೆಯಾಗಿ ತೆಗೆದುಕೊಂಡು ಬೆಂಗಳೂರಿನ ಮಹಾನಗರ ಪಾಲಿಕೆಯ ಚೌಕಟ್ಟಿನಲ್ಲಿ ಬರುವ ಗ್ರಂಥಾಲಯಗಳಿಗೆ ಈ ರೀತಿಯ ಸಂಗೀತವನ್ನು ಅಳವಡಿಸಿ ಎಂದು ಕಳೆದ ವರ್ಷ ಮಹಾನಗರ ಪಾಲಿಕೆಯ ಆಡಳಿತಾಧಿಕಾರಿಗಳಾದ ಹಿರಿಯ ಐ.ಎ.ಎಸ್. ಅಧಿಕಾರಿ ದಿಲೀಪ್ ರಾವ್ ಅವರಿಗೆ ಹೇಳಿದಾಗ ಅವರು ಎಷ್ಟು

ಚೆನ್ನಾಗಿ ಕೇಳಿಸಿಕೊಂಡರು. ನಾವು ಹೇಳಿದ್ದನ್ನೆಲ್ಲ ಟಿಪ್ಪಣಿ ಮಾಡಿಕೊಂಡು ಆರೋಗ್ಯಪೂರ್ಣವಾಗಿ ಪ್ರತಿಕ್ರಿಯಿಸಿದರು. ಇದನ್ನೇ ಕೆಂಪೇಗೌಡ ಪ್ರಶಸ್ತಿಯ ವಿತರಣೆಯ ಸಮಾರಂಭ ಮುಗಿದ ನಂತರ ನನ್ನ ಕೈಕುಲುಕಿ ಗ್ರಂಥಾಲಯಗಳ ಬಗ್ಗೆ ಪ್ರಸ್ತಾಪಿಸಿದರು. ತುಂಬ ಸರಳ ಹಾಗೂ ದಕ್ಷ ಆಡಳಿತಾಧಿಕಾರಿ ಅನ್ನಿಸಿತು. ಇದನ್ನೆಲ್ಲ ಅಂದು ಕಾರ್ಯಕ್ರಮದಲ್ಲಿ ಪ್ರಸ್ತಾಪಿಸುತ್ತಲೇ ಗ್ರಂಥಾಲಯ ವ್ಯವಸ್ಥೆ ಇನ್ನೊಂದು ಮುಖ್ಯ ಕೆಲಸ ಮಾಡಬಹುದು: ಬೆಂಗಳೂರಿಗೆ ಅಥವಾ ಕರ್ನಾಟಕದ ಯಾವುದೇ ಮೂಲೆಯಲ್ಲಿ ಲೇಖಕರು ಚಿಂತಕರು ಮತ್ತು ನ್ಯಾಯವಾದಿಗಳು ಮುಂತಾದ ಮಹತ್ವಪೂರ್ಣ ವ್ಯಕ್ತಿಗಳು ಮಾಡಿದ ಭಾಷಣಗಳನ್ನು ರೆಕಾರ್ಡ್ ಮಾಡಿಕೊಂಡು ಆಗಾಗ ಲೈಬ್ರರಿಗೆ ಬರುವ ಓದುಗರ ಮುಂದೆ ಸಾದರಪಡಿಸಿದರೆ ಮಹತ್ವಪೂರ್ಣ ಕೊಡುಗೆಯಾಗುತ್ತದೆ. ಇಂಥದನ್ನು ಗ್ರಂಥಾಲಯ ಇಲಾಖೆ ಮತ್ತು ವಾರ್ತಾ ಇಲಾಖೆಯವರು ಮಾಡತಕ್ಕಂಥದ್ದು. ಆದರೆ ಮಾಡುವ ನಿರ್ಧಾರ ಮತ್ತು ಅಭಿರುಚಿ ಬೇಕಾಗುತ್ತದೆ. ಹಾಗೆ ನೋಡಿದರೆ ನಮ್ಮ ಗ್ರಂಥಾಲಯ ಸಪ್ತಾಹಗಳಲ್ಲಿ ಎಂತೆಂಥವರೋ ಬಂದು ಮಾತಾಡಿ ಹೋಗುತ್ತಾರೆ. ಅದರ ದಾಖಲು ಮತ್ತು ಅದನ್ನು ಬಳಸಿಕೊಳ್ಳುವ ಕ್ರಮದ ಬಗ್ಗೆ ಪ್ರಸ್ತಾಪಿಸಿದೆ. ಇದನ್ನು ಹೇಳುವ ಈ ಸಮಯದಲ್ಲಿ ಕಳೆದ ಮುವತ್ತೈದು ನಲವತ್ತು ವರ್ಷಗಳಿಂದ ನಾನು ಕೇಳಿಸಿಕೊಂಡ ಮಹಾನ್ ವ್ಯಕ್ತಿಗಳ ಭಾಷಣಗಳೆಲ್ಲ ನೆನಪಿಗೆ ಬರುತ್ತದೆ. ನನಗೆ ಪುಸ್ತಕ, ಉಪನ್ಯಾಸ ಮತ್ತು ಸಂಗೀತ ಎಂದೂ ಬೇರೆ ಬೇರೆ ಅನ್ನಿಸಲಿಲ್ಲ. ಈಗಲೂ ದೇಶಪಾಂಡೆಯವರ ಕಾರ್ಯ ಮೆಚ್ಚಿಗೆಯಾಗುತ್ತದೆ. ಅವರು ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯಾಧಿಕಾರಿಯಾಗಿದ್ದಾಗ ಸೆಂಟ್ರಲ್ ಕಾಲೇಜಿನ ಲೈಬ್ರರಿಯಲ್ಲಿ ಒಂದು ಕೊಠಡಿಯನ್ನು ಷೇಕ್ಸ್‌ಪಿಯರ್‌ನ ನಾಟಕಗಳ ಕ್ಯಾಸೆಟ್ ಗಳನ್ನು ಕೇಳುವ ಅದ್ಭುತ ಸಂಭ್ರಮವನ್ನು ಸೃಷ್ಟಿಸಿದ್ದರು. ಆ ಸಿಸ್ಟಮ್‌ನ ಧ್ವನಿ ಮತ್ತು ಸಂಗೀತ ಮತ್ತು ಅದಕ್ಕೆ ಪೂರಕವಾದ ನಾಟಕಗಳ ಸಂಭಾಷಣೆ ಈಗಲೂ ನನ್ನ ನೆನಪಿನಿಂದ ಮಾಸಿಲ್ಲ.

ಅಂದು ಗ್ರಂಥಾಲಯ ಸಪ್ತಾಹದ ಕಾರ್ಯಕ್ರಮದ ನೆನಪಿಗೆ ಒಂದು ಅದ್ಭುತ ಪುಸ್ತಕವನ್ನು ಕೊಡುಗೆಯಾಗಿ ಕೊಟ್ಟರು. ಅದು 'ಗ್ರೇಟ್ ಸ್ಪೀಚಸ್ ಆಫ್ ಮಾಡರ್ನ್ ಇಂಡಿಯಾ' ರುದ್ರಾಂಗುಶು ಮುಖರ್ಜಿ ಸಂಪಾದಿಸಿರುವ ಕೃತಿ. ಇಲ್ಲಿಯ ಭಾಷಣಗಳನ್ನು ಹಾಗೆಯೇ ಸಣ್ಣಪುಟ್ಟ ಕೋರೆಗಳನ್ನುಳಿಸಿಕೊಂಡು ತಂದಿರುವಂಥದ್ದು. ಇದಾದ ನಂತರ ಸಂಜೆ ೭.೩೦ಕ್ಕೆ ಬೆಂಗಳೂರು ಜಿಲ್ಲೆ ಕನಕಪುರ ರಸ್ತೆಯ ತಲಘಟ್ಟಪುರದಲ್ಲಿ ನನಗೆ ಪ್ರಿಯರಾದ ಗ್ರಂಥಾಲಯಾಧಿಕಾರಿ ಕೆ.ಜಿ.ವೆಂಕಟೇಶ್‌ರವರು ವಾಚನಾಲಯ ಉದ್ಘಾಟನೆಯನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಿದ್ದರು.

ಇಷ್ಟಾದರೂ ನನಗೆ ಗೊತ್ತಿಲ್ಲದೆಯೇ ವಾಕ್ ಮಾಡುವಾಗ ಪುಸ್ತಕಗಳ ಓದಿನ ಬಗ್ಗೆ ಪ್ರಸ್ತಾಪಿಸಿದವರನ್ನು ನನ್ನ ಕಣ್ಣು ಹುಡುಕುತ್ತವೆ.

ಯು.ಆರ್. ಅನಂತಮೂರ್ತಿ 75

'ಶೂದ್ರ'ದ ಕಳೆದ ಸಂಚಿಕೆಯಲ್ಲಿ ಬೆಂಗಳೂರಿನ ರಿಸರ್ವ್ ಬ್ಯಾಂಕ್ ಕಾಲೋನಿಯ 'ವುಡ್ ರೋಸ್' ಸಭಾಂಗಣದಲ್ಲಿ 'ಅನಂತಮೂರ್ತಿ 75' ಕುರಿತು ಪ್ರಸ್ತಾಪಿಸಿದ್ದೆ. ಅದೊಂದು ಆತ್ಮೀಯವಾದ ಸಮಾವೇಶ. ಅಂದು ಸಂಘಟಿಸಿದ ಶ್ರೀಪತಿರಾವ್ ತಮ್ಮ 'ಸ್ನೇಹಚಿಂತನಾ' ವೇದಿಕೆಯ ಮೂಲಕ ಇದೇ ಡಿಸೆಂಬರ್

21ರಂದು ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಸೆನೆಟ್ ಭವನದಲ್ಲಿ ಕಾರ್ಯಕ್ರಮ ರೂಪಿಸಿದ್ದರು. ನನ್ನ ಅರಿವಿನ ಮಟ್ಟಿಗೆ ಬಹಳ ವರ್ಷಗಳ ನಂತರ ಲೇಖಕರೊಬ್ಬರ ಮಾತು ಕೇಳಲು ಅಷ್ಟೊಂದು ಜನ ಸೇರಿದ್ದನ್ನು ಕಂಡಿದ್ದು. ಇಲ್ಲಿ ಕೇವಲ ಬರಹಗಾರರು, ಸಾಹಿತ್ಯದ ವಿದ್ಯಾರ್ಥಿಗಳು ಮಾತ್ರವಲ್ಲ, ಸಾಹಿತ್ಯ, ಸಂಸ್ಕೃತಿ ಹಾಗೂ ರಾಜಕೀಯ ಕುರಿತು ಗಂಭೀರವಾಗಿ ಚಿಂತಿಸುವ ಮಂದಿಯೆಲ್ಲ ಸೇರಿದ್ದರು.

ಹೌದು, ಇಂದು ಅನಂತಮೂರ್ತಿಯವರು ನನಗೆ ತಿಳಿದ ಮಟ್ಟಿಗೆ ಕ್ರೀಡೆಯನ್ನು ಹೊರತುಪಡಿಸಿ ಎಲ್ಲವನ್ನು ಕುರಿತು ಮಾತಾಡುತ್ತಿದ್ದಾರೆ. ಹೀಗೆ ಮಾತಾಡುವಾಗ ಅವರ ಮಾತಿಗೆ ಒಬ್ಬ ಸಂತನ ಗುಣವಿದೆ. ಯಾವ ಗುಂಪನ್ನು ಯಾವ ಧರ್ಮವನ್ನು ಮೆಚ್ಚಿಸುವ ಇರಾದೆಯಿಲ್ಲ. 'ನನ್ನ ಕಾಲಘಟ್ಟದ ವಿದ್ಯಮಾನಗಳು ಹೀಗಿವೆ; ಅವನ್ನೆಲ್ಲ ನಾವು ಗಂಭೀರವಾಗಿ ಪರಿಗಣಿಸಿಯೇ ಪ್ರತಿಕ್ರಿಯಿಸಬೇಕು' ಎಂಬುದು ಅವರ ಒಟ್ಟು ಧೋರಣೆ. ಹಾಗೆಯೇ ಎಲ್ಲ ಆಕ್ಷೇಪಣೆಗಳನ್ನು ವಾಗ್ವಾದಗಳನ್ನು ಆತ್ಮೀಯವಾಗಿ ಆಲಿಸುವ ಮನಸ್ಥಿತಿ ಅನಂತಮೂರ್ತಿಯವರಲ್ಲಿದೆ. ಇದನ್ನು ಅನಂತಮೂರ್ತಿಯವರನ್ನು ಕುರಿತು 'ಬೋ ಪರಾಕ್' ಹೇಳಲು ಪ್ರಸ್ತಾಪಿಸುತ್ತಿಲ್ಲ. ನಮ್ಮ ಲೇಖಕರೊಬ್ಬರು ಹೀಗೆ ಚಿಂತಿಸುತ್ತಾರೆ, ಮಾತಾಡುತ್ತಾರೆಂಬುದೇ ನನಗೆ ಅತ್ಯಂತ ಆಪ್ತವಾದದ್ದು. ಅವರು ತಸ್ಲಿಮಾ ನಸರೀನ್, ನರೇಂದ್ರ ಮೋದಿ, ಪೇಜಾವರ ಮಠ, ವೀರಶೈವ ಧರ್ಮ, ದೇವೇಗೌಡರ ಕುಟುಂಬವನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರತಿಕ್ರಿಯಿಸಿದಾಗ ಅದಕ್ಕೊಂದು ಅನನ್ಯತೆ ಆವರಿಸಿತ್ತು. ಹಾಗೆಯೇ ಇಂದು ಯಾವುದೇ ಸಮುದಾಯ ಅಥವಾ ಉನ್ನತ ವ್ಯಕ್ತಿ ಒಂದು ಮತಕ್ಕೆ ಇಲ್ಲವೇ ಧರ್ಮಕ್ಕೆ ಸೇರಿದಾಕ್ಷಣ ಏನೇನು ಆಗಿಬಿಡೋದಿಲ್ಲ. ಆದರೆ ನಮ್ಮೆಲ್ಲರ ನಡುವಿನ ತಲ್ಲಣಗಳನ್ನು ಕಡಿಮೆ ಮಾಡಲು, ನಿಯಂತ್ರಿಸಲು ಮಾನಸಿಕವಾಗಿ ಕಾರ್ಯತತ್ಪರತೆಯನ್ನು ಕಾಪಾಡಿಕೊಳ್ಳುವುದು ಮಹತ್ತರ ಸಂಗತಿ. ಇಂದು ಎಲ್ಲಿ ಏನು ಬೇಕಾದರೂ ಆಗಬಹುದು. ಗುಜರಾತ್‌ನ ಗಾಂಧಿ ಹುಟ್ಟಿದ ನಾಡಿನಲ್ಲಿ ನರೇಂದ್ರ ಮೋದಿ ಹಲ್ಲು ಕಚ್ಚಿ ಗಾಂಧೀಜಿಯವರ ಚಿಂತನೆಗಳನ್ನು ದೂರ ಮಾಡುವೆ ಎಂದು ಭಾವಿಸಿ ಜನಮನದಲ್ಲಿ ಏನೇನೋ ರಿಜಿಸ್ಟರ್ ಮಾಡಲು ಹೋಗಬಹುದು. ಇಂಥ ಸಾಮಾಜಿಕ ಹಾಗೂ ರಾಜಕೀಯ ನಡವಳಿಕೆಯ ಬಗ್ಗೆ ಅಧೀರರಾಗಬೇಕಾಗಿಲ್ಲ. ಎಲ್ಲ ಪಾತಕಿಗಳು ಅವರವರ ದುರಂತದ ಗುಂಡಿಗಳನ್ನು ಅವರವರೇ ತೋಡಿಕೊಳ್ಳುತ್ತಿರುತ್ತಾರೆ. ಈ ದೃಷ್ಟಿಯಿಂದ ಗಾಂಧೀಜಿಯವರ ಚಿಂತನೆಗಳ ಚೌಕಟ್ಟಿಗೆ ಯಾಕೆ ಅನಂತಮೂರ್ತಿಯವರು ಒತ್ತು ಕೊಟ್ಟು ಮಾತಾಡ್ತಾರೆಂಬುದು ನಮಗೆ ಮುಖ್ಯ. ಯಾಕೆಂದರೆ ಅವರು ಅದನ್ನು ಗಾಢವಾಗಿ ನಂಬಿದ್ದಾರೆ. ನನ್ನಂಥವನಿಗೆ ಅವರ ಋಜುವಾತು ಕೃತಿ ಹತ್ತಾರು ದಿಕ್ಕುಗಳಲ್ಲಿ ಯೋಚಿಸುವ ಪೂರಕ ಸಾಮಗ್ರಿಯನ್ನು ದೊರಕಿಸಿ ಕೊಡುತ್ತದೆ. ಅನಂತಮೂರ್ತಿಯವರು ಅಂದು ಸಭೆಯಲ್ಲಿ ಪ್ರತಿಕ್ರಿಯಿಸಿದ ರೀತಿಯಲ್ಲಿ ಅವರವರ ಮನಸ್ಸಿನ ಪರಿಧಿಗಳಿಗೆ ಅನ್ವಯಿಸಿ ಮಾತು ಮತ್ತು ಕೃತಿ ಏನೇನೋ ಕೊಡುತ್ತಿರುತ್ತದೆ. ಇರಲಿ, ಇಂದು ಒಬ್ಬರ ಮಾತನ್ನು ಮತ್ತೆ ಮತ್ತೆ ಕೇಳುವ ಒಬ್ಬರ ಕೃತಿಯನ್ನು ಮತ್ತೊಮ್ಮೆ ಓದಬೇಕು ಅನ್ನಿಸುವುದು ಬಹಳ ಮುಖ್ಯವಾದದ್ದು. ಅವರು ಪ್ರಸ್ತಾಪಿಸಿದ ಮತದಾನ ಕಡ್ಡಾಯ ಮಾಡಬೇಕು. (ಪ್ರೊ.ಬಿ.ಕೆ.ಚಂದ್ರಶೇಖರ್, ಡಾ॥ ಪರಮೇಶ್ವರ್‌ರವರಂಥ ರಾಜಕಾರಣಿಗಳು ಹಾಗೂ ಇತಿಹಾಸತಜ್ಞರಾದ ಪ್ರೊ. ಶೆಟ್ಟಾರ್‌ರವರ ಕಡೆ ನೋಡಿ) ಎನ್ನುವಾಗ ಅದು ಎಷ್ಟೇ ಸೂಕ್ತವಾಗಿದ್ದರೂ ನಾನಾ ರೀತಿಯ ರಾಜಕೀಯ ಸಾಮಾಜಿಕ ಸಮಸ್ಯೆಗಳು ಉದ್ಭವವಾಗಬಹುದು. ಆದರೆ ಚುನಾವಣಾ ಆಯೋಗ ಮತ್ತು ಸರಕಾರವೇ ಒಟ್ಟು ಅಭ್ಯರ್ಥಿಗಳ ವೆಚ್ಚವನ್ನು ಭರಿಸುವಂಥ ಸಂದರ್ಭ ಬಂದರೆ ನಮ್ಮ ಪ್ರಜಾಪ್ರಭುತ್ವ ಮತ್ತಷ್ಟು ಗಟ್ಟಿಗೊಳ್ಳಬಹುದು.

ಇದೇ ಸಂದರ್ಭದಲ್ಲಿ ಅನಂತಮೂರ್ತಿಯವರು ಹೆಗ್ಗೋಡಿನ ನೀನಾಸಂನಲ್ಲಿ 'ಹಿಂಸೆಯ ಎಡ-ಬಲ' ವಿಷಯ ಕುರಿತು ಮಾಡಿದ ಭಾಷಣದ ಕಿರುಹೊತ್ತಿಗೆಯನ್ನು ಬಿಡುಗಡೆ ಮಾಡಲಾಯಿತು. ಇದನ್ನು ಅಭಿನವ ಪ್ರಕಟಿಸಿದೆ.

25-12-07

ಒಳನೋಟ

ಪ್ರಿಯ ಶೂದ್ರಶ್ರೀ ಅವರಿಗೆ, ನಮಸ್ಕಾರಗಳು

ಕುವೆಂಪು ಸಾಹಿತ್ಯದ ಬಗ್ಗೆ ಖ್ಯಾತ ವಿಮರ್ಶಕರ ಕ್ಯಾತೆಗಳನ್ನೆಲ್ಲ ಓದಿ, ಓದಿ, ಈ ಏಕರೂಪಿ ವಿಮರ್ಶೆಗಳೆಂಬ ತೋಪಿನಲ್ಲಿ ವೈವಿಧ್ಯದ ರುಚಿಯಲ್ಲದೆ ಬೇಸತ್ತ ಮನದಿಂದ ಜಿಗುಪ್ಸೆಗೊಂಡಿದ್ದ ನನಗೆ ಸಾಹಿತಿಗಳಲ್ಲದವರು ಕುವೆಂಪು ಸಾಹಿತ್ಯದ ಬಗ್ಗೆ ಏನು ಹೇಳುತ್ತಾರೆ? ಏನು ಬರೆಯುತ್ತಾರೆ? ಎಂದು ತಿಳಿದುಕೊಳ್ಳುವ ಕುತೂಹಲ ಮತ್ತು ಆಸಕ್ತಿಗಳಿದ್ದವು. ನಿನ್ನೆ ತಲುಪಿದ ಸೆಪ್ಟೆಂಬರ್-ಡಿಸೆಂಬರ್ ಸಂಚಿಕೆ ಶೂದ್ರದಲ್ಲಿದ್ದ ಡಾ॥ ಬೆನಕಪ್ಪನವರ ಲೇಖನವನ್ನು ಓದಿದೆ. ತುಂಬಾ ಸಂತೋಷವಾಯಿತು. ಬೆನಕಪ್ಪನವರು ಹೇಳಿರುವ ಎರಡು ಮಾತುಗಳು ಬಹು ಮುಖ್ಯವಾಗಿವೆ:

(1) ಈ ಕಾದಂಬರಿಯನ್ನು ಒಮ್ಮೆ ಓದಿದರೆ ಅದರ ರಸಾಸ್ವಾದನೆ ಆಗುವುದಿಲ್ಲ. ನಾನು ಹಲವಾರು ಬಾರಿಯೆಂದರೆ 3-4 ಬಾರಿಯಾದರೂ ಈ ಕಾದಂಬರಿಯನ್ನು ಓದಿದ್ದೇನೆ. ಪ್ರತಿ ಸಾರಿಯೂ ಹೊಸದನ್ನು ಕಂಡಿದ್ದೇನೆ.

(2) ಕವಿಗಳು ಪ್ರಕೃತಿಯಲ್ಲಿರುವ ನಿಗೂಢಗಳನ್ನು ತನ್ನದೇ ಆದ ರೀತಿಯಲ್ಲಿ ಸಾಮಾನ್ಯರಿಗೆ ವಿವರಿಸುತ್ತಾರೆ. ಅದರಲ್ಲಿ ಅವನದೇನು ಮಹತ್ತರ ಪಾತ್ರವಿರುವುದಿಲ್ಲ. ನಾವೆಲ್ಲರೂ ಪ್ರಕೃತಿ ತಾಯಿಯ ಮಕ್ಕಳು. ಅವಳಿಗೆ ಚಿರಋಣಿಯಾಗಿರಬೇಕು.

ಈ ಎರಡು ಮಾತುಗಳನ್ನು ನಮ್ಮ ಸಾಹಿತಿಗಳೆಲ್ಲರೂ ಆಲಿಸಿ ಎದೆಯಲ್ಲಿಟ್ಟುಕೊಳ್ಳಬೇಕು. ಜೈ ವಿಮರ್ಶೆ ಅಥವಾ ಬೈ ವಿಮರ್ಶೆಗಳನ್ನು ಮಾಡದೆ, ಕುವೆಂಪು ಸಾಹಿತ್ಯದಲ್ಲಿರುವ ಧ್ವನ್ಯಾಲೋಕ ಅಥವಾ ಸಹೃದಯಾ ಲೋಕದೊಳಕ್ಕೆ ಪ್ರವೇಶಿಸಿ, ಆಲಿಸಬೇಕು. ಹೀಗೆ ಸಾಹಿತಿಗಳಲ್ಲದವರನ್ನು ಹುಡುಕಿ, ಹುಡುಕಿ, ಅವರಿಂದ ಸಾಹಿತ್ಯ ಕುರಿತು ಲೇಖನಗಳನ್ನು ಬರೆಸುತ್ತಿರಿ. 'ಸಾಹಿತ್ಯವನ್ನು ಸಾಹಿತಿಗಳಿಂದ ಪಾರು ಮಾಡಬೇಕಾದ ಕಾಲದಲ್ಲಿ ನಾವು ಇದ್ದೇವೆಂದು ನನ್ನ ಬಲವಾದ ನಂಬಿಕೆಯಾಗಿದೆ. ವಂದನೆಗಳೊಂದಿಗೆ, ತಮ್ಮ ವಿಶ್ವಾಸದ

ವಿ. ಚಂದ್ರಶೇಖರನಂಗಲಿ
ಹೊಸಕೋಟೆ

-

ಮಿತ್ರರೇ,

ತಮ್ಮ ಕನಸಿಗೊಂದು ಕಣ್ಣು ಮತ್ತು ಬೆಂಗಳೂರು ದಿನಚರಿಯಿಂದ ಮನ ತಟ್ಟುತ್ತವೆ. ತುಂಬಾ ಆತ್ಮೀಯವಾದ ಬರಹಗಳು ಮುದುಮಡುಗುವಿನ ಬೆಳದಿಂಗಳ ರಾತ್ರಿಯ ಅನುಭವ ಓದುಗರಲ್ಲಿ ಹೊಟ್ಟೆಕಿಚ್ಚು ಬರಿಸುತ್ತದೆ. ಈ ಸಂಚಿಕೆ ತುಂಬಾ ಚನ್ನಾಗಿದೆ.

ಗುರುಮೂರ್ತಿ ಪೆಂಡಕೂರು,
ಬೆಂಗಳೂರು - 24

L/NP/KRNU/72, NO.M(2)PRB 211/73-74

ಗೋಪಿಯ ಪತ್ರ

ಹಚ್ಚಿಟ್ಟು ಕಾಲು ದೀಪ ಕುಳಿತಿರುವೆ
ಗೋವರ್ಧನ ಗಿರಿಯ ಕೆಳಗೇ!
ಎಲೇ, ಭಗವಂತ ನೀನು ಹೌದಾದರೆ
ಪ್ರತ್ಯಕ್ಷನಾಗು ಈಗಲೇ

ಜಗ ತುಂಬ ಕದಿಯುತ್ತ ತಿರುಗುವ ನಗುವ
ಚಟ ಬಿಟ್ಟು ಬಿಡು. ಬಾ
ಮುಚ್ಚಿಟ್ಟುಕೊಂಡ ಹಾಲು
ಆರುವ ಮೊದಲೇ.

– ವೈದೇಹಿ

'ಶೂದ್ರ' ಇರುವುದು ಸಮಕಾಲೀನ ಬದುಕಿನ ಸಂವಾದಕ್ಕಾಗಿ
ನಾವು ನೀವು ಮಾತಾಡುವ ಮತ್ತು ಚರ್ಚಿಸುವ ಧ್ವನಿಗಾಗಿ ಶೂದ್ರವನ್ನು ಬಳಸಿಕೊಳ್ಳಿ.
ಹಾಗೆಯೇ ನಮ್ಮ ನಿಮ್ಮ ನಡುವಿನ ಗುಮಾನಿಗಳು ತಿಳಿಯಾಗಲು ಉಪಯೋಗಿಸಿ.
ಸಾಧ್ಯವಾದರೆ ಚಂದಾದಾರರಾಗಿ, ನಿಮ್ಮ ಗೆಳೆಯ ಗೆಳತಿಯನ್ನು ಚಂದಾದಾರರಾಗಲು ತಿಳಿಸಿ.

ವಾರ್ಷಿಕ ಚಂದಾ : 150-00 ರೂ.
ಎರಡು ವರ್ಷಕ್ಕೆ : 300-00 ರೂ.
ನಾಲ್ಕು ವರ್ಷಕ್ಕೆ : 600-00 ರೂ.
ಆಜೀವ ಚಂದಾ : 1,500-00 ರೂ.

ಪ್ರಕಾಶಕರು ಮತ್ತು ಸಂಪಾದಕರು : ಶೂದ್ರ ಶ್ರೀನಿವಾಸ್
'ಕಾವಿಮನೆ', ಅಣ್ಣಯ್ಯ ರೆಡ್ಡಿ ಬಡಾವಣೆ, ಜೆ.ಪಿ.ನಗರ 6ನೇ ಹಂತ
ಬೆಂಗಳೂರು – 560 078. ದೂರವಾಣಿ : 22451762